# ಬಾಲ್ಯ ಜಾಗತಿಕ ಸಂದರ್ಭದಲ್ಲಿ ಬಾಲ್ಯದ ಇತಿಹಾಸ

**ಮೂಲ: ಗ್ರೋಯಿಂಗ್ ಅಪ್**

ದ ಹಿಸ್ಟರಿ ಆಫ್ ಚೈಲ್ಡ್ ಹುಡ್ ಇನ್ ಎ ಗ್ಲೋಬಲ್ ಕಾಂಟೆಕ್ಸ್ಟ್

**ಪೀಟರ್ ಎನ್. ಸ್ಟರ್ನ್ಸ್**

**EDMONDSON LECTURE SERIES**

ಪೀಟರ್ ಸ್ಟನ್ರ್ಸ್ ಅವರಂತೆ ದೀರ್ಘಾವಲೋಕನವನ್ನು ಮಾಡುವ ಮತ್ತು ವಿಶಾಲ ಚಿತ್ರಣವನ್ನು ಗಂಭೀರವಾಗಿ ಪರಿಗಣಿಸುವ ಇತಿಹಾಸಕಾರರು ವಿರಳ. ಬಾಲ್ಯದ ಜಾಗತಿಕ ಇತಿಹಾಸವನ್ನು ಅನಾವರಣಗೊಳಿಸುವ ಈ ಲೇಖನಗಳು ಅತಿ ಮುಖ್ಯವೂ, ಪ್ರಚೋದನಾಕಾರಿಯೂ ಆಗಿದ್ದು, ಈ ವಿಷಯವನ್ನು ಕುರಿತಂತೆ ಬಾಲ್ಯದ ಇತಿಹಾಸಕಾರರು ಇನ್ನೂ ಹೆಚ್ಚು ಗಂಭೀರವಾಗಿ ಮತ್ತು ಜಾಗತಿಕ ನೆಲೆಯಲ್ಲಿ ಚಿಂತಿಸುವಂತೆ ಮಾಡುತ್ತವೆ.

- **ಪೌಲಾ ಎಸ್ ಪಾಸ್, ಮಾರ್ಗರೆಟ್ ಬ್ರೌನ್ ಇತಿಹಾಸ ಪ್ರಾಧ್ಯಾಪಕರು, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಬರ್ಕ್ಲಿ**

ಬಾಲ್ಯದ ಜಾಗತಿಕ ಇತಿಹಾಸವನ್ನು ನಿರೂಪಿಸುವ ಮೊಟ್ಟಮೊದಲ ಪುಸ್ತಕವಾದ 'ಗ್ರೋಯಿಂಗ್ ಅಪ್' ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಮಾನವ ಜನಾಂಗದ ಇತಿಹಾಸದ ಪ್ರಮುಖ ಅಂಶಗಳಿಗೆ ಹೇಗೆ ಹೊಸಜೀವ ಕೊಡಬಹುದು ಎಂಬುದನ್ನು ಅದ್ಭುತವಾಗಿ ತೋರಿಸುತ್ತದೆ. ಮಾನವ ಜನಾಂಗವು ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಕಾಲದಿಂದ ಹಿಡಿದು ಕೃಷಿ-ಆಧಾರಿತ, ಮುಂದುವರಿದು ಕೈಗಾರಿಕೆ-ಆಧಾರಿತ ಆರ್ಥಿಕತೆಯೆಡೆಗಿನ ಹೊರಳು ಕಾಲದಲ್ಲಿ ಬಾಲ್ಯದ ಮೇಲಾದ ಪರಿಣಾಮಗಳನ್ನು ಮತ್ತು ವಿವಿಧ ನಾಗರಿಕತೆಗಳು ಮತ್ತು ಧಾರ್ಮಿಕ ಪರಂಪರೆಗಳು ಬಾಲ್ಯವನ್ನು ಪರಿಗಣಿಸಿದ ವಿಶಿಷ್ಟ ವಿಧಾನಗಳನ್ನು ಪೀಟರ್ ಸ್ಟನ್ರ್ಸ್ ಅವರು ಈ ಪುಸ್ತಕದಲ್ಲಿ ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹಿಡಿದಿಡುತ್ತಾರೆ. ಮುಂದೆ ಬರಬಹುದಾದ ಬಾಲ್ಯದ ಎಲ್ಲ ತುಲನಾತ್ಮಕ ಅಧ್ಯಯನಗಳಿಗೂ ಈ ಪುಸ್ತಕವು ಆರಂಭ ಸ್ಥಾನವಾಗಬಲ್ಲುದು.

- **ಸ್ಟೀವನ್ ಮಿಂಟ್‌ಜ್, ಜಾನ್ ಮತ್ತು ರೆಬೆಕ್ಕಾ ಮೂರ್ ಇತಿಹಾಸ ಪ್ರಾಧ್ಯಾಪಕರು, ಹೂಸ್ಟನ್ ವಿಶ್ವವಿದ್ಯಾಲಯ**

ಜಾಗತಿಕ ಇತಿಹಾಸದ ಕೆಲವೊಂದು ವಿಶಾಲ ಮಾದರಿಗಳು ಯಾವ ರೀತಿಯಾಗಿ ಬಾಲ್ಯ ಕಾಲದ ಆಪ್ತ ಅನುಭವಗಳೊಂದಿಗೆ ಬೆಸೆದುಕೊಂಡಿವೆ ಎಂಬುದನ್ನು ಸ್ಟನ್ರ್ಸ್ ಅವರು ಅನ್ವೇಷಿಸುತ್ತಾರೆ. ಈ ಮಾಹಿತಿಯುಕ್ತ ಬರವಣಿಗೆಯ ಹಿಂದಿನ ಅಸಾಧಾರಣ ಅಧ್ಯಯನವು ಓದುಗರ ಪ್ರಶಂಸೆಗೆ ಪಾತ್ರವಾಗುವುದಲ್ಲದೆ, ಬಾಲ್ಯದ ಇತಿಹಾಸ ಎಷ್ಟೊಂದು ಆಸಕ್ತಿದಾಯಕವೂ ಪ್ರಚೋದನಾಕಾರಿಯೂ ಆಗಿದೆ ಎಂಬುದನ್ನು ಅವರು ಕೃತಜ್ಞತೆಯಿಂದ ಕಂಡುಕೊಳ್ಳಲು ಸಾಧ್ಯವಾಗುತ್ತದೆ.

- **ರೇಮಂಡ್ ಗ್ರ್ಯೂ, ನಿವೃತ್ತ ಇತಿಹಾಸ ಪ್ರಾಧ್ಯಾಪಕರು, ಮಿಶಿಗನ್ ವಿಶ್ವವಿದ್ಯಾಲಯ**

# ಎಡ್ಮಂಡ್ಸ್ ಉಪನ್ಯಾಸಗಳ ಶ್ರೇಣಿ

ಬೇಲರ್ ವಿಶ್ವವಿದ್ಯಾಲಯದಲ್ಲಿ ಟೆಕ್ಸಾಸಿನ ಲಾಂಗ್‌ವ್ಯೂನ ಡಾ. ಇ. ಬಡ್ ಎಡ್ಮಂಡ್ಸನ್ ಅವರು ತಮ್ಮ ತಂದೆಯವರಾದ ಶ್ರೀ ಚಾರ್ಲ್ಸ್ ಎಸ್ ಬಿ ಎಡ್ಮಂಡ್ಸನ್ ಅವರ ಗೌರವಾರ್ಥವಾಗಿ 1975ನೆಯ ಇಸವಿಯಲ್ಲಿ ಒಂದು ದತ್ತಿನಿಧಿಯನ್ನು ಸ್ಥಾಪಿಸಿದರು. ಇತಿಹಾಸದ ಸಮನ್ವಯ ಹಾಗೂ ವಿಶ್ಲೇಷಣೆ ಮಾಡಬಲ್ಲಂತಹ ಮತ್ತು ಪ್ರಸಕ್ತ ತಲೆಮಾರಿಗೆ ಅದನ್ನು ಪರಿಣಾಮಕಾರಿಯಾಗಿ ತಲುಪಿಸಬಲ್ಲಂತಹ ಇತಿಹಾಸಕಾರರನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸುವುದು ಈ ದತ್ತಿನಿಧಿಯ ಉದ್ದೇಶವಾಗಿತ್ತು.

ಬೇಲರ್ ವಿಶ್ವವಿದ್ಯಾಲಯ ಮತ್ತು ವಾಕೊ ಸಮುದಾಯವು 'ಚಾರ್ಲ್ಸ್ ಎಡ್ಮಂಡ್ಸನ್ ಇತಿಹಾಸ ಉಪನ್ಯಾಸ ಭಾಷಣ ಸರಣಿ'ಯನ್ನು ಸ್ಥಾಪಿಸಿದ ಡಾ. ಎಡ್ಮಂಡ್ಸನ್ ಅವರ ಔದಾರ್ಯಕ್ಕೆ ಆಭಾರಿಯಾಗಿದೆ.

------

ಇದು ಎಡ್ಮಂಡ್ಸನ್ ಭಾಷಣ ಸರಣಿಯ ಇಪ್ಪತ್ತೆಂಟನೆಯ ಸಂಪುಟ.

-------

ಈ ಉಪನ್ಯಾಸದಲ್ಲಿರುವ ಎಲ್ಲ ಅಭಿಪ್ರಾಯಗಳು ಲೇಖಕರದಾಗಿದ್ದು, ಬೇಲರ್ ವಿಶ್ವವಿದ್ಯಾಲಯ ಅಥವಾ ಬೇಲರ್ ಯುನಿವರ್ಸಿಟಿ ಪ್ರೆಸ್ ಅದಕ್ಕೆ ಬಾಧ್ಯಸ್ಥರಾಗಿರುವುದಿಲ್ಲ.

-------

Copyright © 2005 Baylor University Press

All rights reserved. No portion of this book may be reproduced in any form or by any means without written permission of Baylor University Press.

Library of Congress Control Number: 2004115743 International Standard Book Number: 1-932792-28-7

Printed in the United States of America on acid-free paper

# ಬಾಲ್ಯ

# ಜಾಗತಿಕ ಸಂದರ್ಭದಲ್ಲಿ ಬಾಲ್ಯದ ಇತಿಹಾಸ

**ಮೂಲ: ಗ್ರೋಯಿಂಗ್ ಅಪ್**

ದ ಹಿಸ್ಟರಿ ಆಫ್ ಚೈಲ್ಡ್ ಹುಡ್ ಇನ್ ಎ ಗ್ಲೋಬಲ್ ಕಾಂಟೆಕ್ಸ್÷ರ್ಟ

**ಪೀಟರ್ ಎನ್ ಸ್ಟರ್ನ್ಸ್**

Baylor University Press

Waco, Texas USA

## ಭಾಷಣ 1

# ಕೃಷಿ-ಆಧಾರಿತ ಸಮುದಾಯಗಳಲ್ಲಿ ಬಾಲ್ಯ

# ಒಂದು ಪ್ರಬಲ ಮಾದರಿಯ ಹುಟ್ಟು ಮತ್ತು ಬೆಳವಣಿಗೆ

ಜಾಗತಿಕ ಇತಿಹಾಸದ ವಿಶಾಲವಾದ ಹಂದರದಲ್ಲಿ ಮನುಷ್ಯನ ಜೀವನದ ಪ್ರಮುಖ ಘಟ್ಟವಾದ ಬಾಲ್ಯವು ವಿಭಿನ್ನ ದೇಶಕಾಲಗಳಲ್ಲಿ ಹೇಗೆ ವಿಶಿಷ್ಟವಾಗಿ ರೂಪುಗೊಂಡಿತು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸ್ಥೂಲ ಪರಿಚಯ ಒದಗಿಸುವ ಆವಶ್ಯಕತೆ ಇದೆ. ಆದರೆ, ಭಾಷಣದ ಆರಂಭದಲ್ಲೇ ಇದು ವಿಷಯವನ್ನು ಅಮೂರ್ತಗೊಳಿಸುವ ಆಪತ್ತಿಗೆ ಎಡೆಮಾಡಿಕೊಡುವ ಅಪಾಯವಿದೆ. ಆದ್ದರಿಂದ, ನಾವು ಮೊದಲಿಗೆ ಬಾಲ್ಯದ ಕೆಲವು ಚಿತ್ರಣಗಳನ್ನು ನೋಡೋಣ. ಮಾನವ ನಾಗರಿಕತೆಯ ವಿಕಾಸದಲ್ಲಿ ಕೃಷಿಯೇ ಮುಖ್ಯವಾಗಿದ್ದ ಘಟ್ಟದಲ್ಲಿದ್ದ ಚಿತ್ರಗಳನ್ನು ಇಲ್ಲಿ ನೋಡೋಣ. ಇದು ಈ ಭಾಷಣದ ಮುಖ್ಯ ವಿಷಯವಾಗಿದೆ.

ಇಸ್ಲಾಂ ಧರ್ಮದ ಪ್ರವರ್ತಕರಾದ ಮುಹಮ್ಮದ್ ಅವರ ಮುಖ್ಯವಾದ ಬೋಧನೆಗಳಲ್ಲಿ ಒಂದು ಹೆಣ್ಣು ಶಿಶುಗಳ ಹತ್ಯೆಯ ನಿಷೇಧ. ಇದು ಹಲವು ಪ್ರಮುಖ ಪ್ರಶ್ನೆಗಳಿಗೆ ದಾರಿಮಾಡಿಕೊಡುತ್ತದೆ. ಕೆಲವೊಂದು ಕೃಷಿ ಸಮುದಾಯಗಳು ಶಿಶುಹತ್ಯೆಯನ್ನು ಒಂದು ಪೂರ್ವಾನ್ವಯ ಜನನ ನಿಯಂತ್ರಣ ವಿಧಾನವಾಗಿ ಬಳಸುವುದಕ್ಕೆ ಏಕೆ ಇತರರಿಗಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತಿದ್ದರು? ಶಿಶುಹತ್ಯೆಯನ್ನು ಗಮನಿಸುವಾಗ, ಮಕ್ಕಳನ್ನು ಕುರಿತು ವಯಸ್ಕರ ಧೋರಣೆ ಹೇಗಿದ್ದಿರಬಹುದು? ಮಕ್ಕಳು ಮತ್ತು ಬಾಲ್ಯಕ್ಕೆ ಸಂಬಂಧಿಸಿದಂತೆ ಇಸ್ಲಾಂ ಧರ್ಮವು ಪ್ರಮುಖ ಬದಲಾವಣೆಗಳನ್ನು ಪ್ರೋತ್ಸಾಹಿಸಿತೇ?

ಯುರೋಪಿಯನ್ನರ ಕುಟುಂಬಗಳು ಉತ್ತರ ಅಮೆರಿಕಾದಲ್ಲಿ ನೆಲೆನಿಲ್ಲಲು ಬಂದಾಗ, ಅವರು ತಮ್ಮ ಮಕ್ಕಳನ್ನು ದೈಹಿಕ ದಂಡನೆಗೆ ಒಳಪಡಿಸುತ್ತಿದ್ದ ರೀತಿ ಅಮೆರಿಕಾದ ಮೂಲನಿವಾಸಿಗಳನ್ನು ಗಾಬರಿಗೊಳಿಸಿತ್ತು. ಪಾಶ್ಚಾತ್ಯರ ಶಿಸ್ತುಕ್ರಮಗಳಿಗೆ ಸಂಬಂಧಿಸಿದಂತೆ 17ನೇ ಶತಮಾನವು ಅತ್ಯಂತ ಕಠಿಣ ಕಾಲವಾಗಿತ್ತು. ಮಕ್ಕಳು ಮತ್ತು ಹಿರಿಯರ ನಡುವಿನ ಸಂಬಂಧಗಳು ಹೇಗಿರಬೇಕು ಎಂಬುದನ್ನು ಕುರಿತ ಪಾಶ್ಚಾತ್ಯ ಧೋರಣೆಗಳು ಇತರ ಸಮಾಜಗಳ ಜನರಿಗೆ ವಿಚಿತ್ರವಾಗಿ ಕಾಣುತ್ತಿತ್ತು. (ಇದಕ್ಕೆ ಒಂದು ಉದಾಹರಣೆ ಎಂದರೆ, ಎಳೆಯ ಮಕ್ಕಳನ್ನು ತಾಯಂದಿರು ಎದೆಗೆ ಒತ್ತಿಕೊಂಡು ಓಡಾಡುವ ಬದಲು ನೂಕುಗಾಡಿಗಳಲ್ಲಿ ಇಟ್ಟು ನೂಕಿಕೊಂಡು ಹೋಗುವುದನ್ನು ಕಂಡಾಗ ಅದನ್ನು ಕುರಿತು ಆಫ್ರಿಕಾದ ನಗರವಾಸಿ ಗ್ರಾಹಕರು ವ್ಯಕ್ತಪಡಿಸಿದ ಅಸಮಾಧಾನ.[1])

[1] Erik Erikson, Young Man Luther: A Study in Psychoanalysis and History (New York: Norton, 1958).

ಇಂದಿಗೂ ಕೃಷಿಪ್ರಧಾನವಾಗಿರುವ ಆಫ್ರಿಕಾ ಮತ್ತು ಆಗ್ನೇಯ ಏಷ್ಯಾದ ಕೆಲವು ಪ್ರದೇಶಗಳಲ್ಲಿ ನಡೆಯುತ್ತಿರುವ ಅಂತರ್ಯುದ್ಧಗಳಲ್ಲಿ ಮಕ್ಕಳು ಸೈನಿಕರಾಗಿ ಬಳಕೆಯಾಗುತ್ತಿರುವ ಬಗೆಗೆ ನಾವು ದಿಗ್ಭ್ರಾಂತರಾಗುತ್ತೇವೆ ಮತ್ತು ರೋಷದಿಂದ ಪ್ರತಿಕ್ರಿಯಿಸುತ್ತೇವೆ. ಈ ವಿದ್ಯಮಾನಕ್ಕೆ ಇನ್ನೂ ಹಲವು ಹೊಸ ಲಕ್ಷಣಗಳಿವೆ. ಅದರಲ್ಲಿ ಒಂದು ಅಂಶ ಎಂದರೆ ಹಿಂದೆಂದೂ ಕಾಣದ ರೀತಿಯಲ್ಲಿ ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ವಿಶ್ವದ ಹಲವು ಭಾಗಗಳಲ್ಲಿ ಮಕ್ಕಳ ಕೈಗೆ ಮಾರಕ ಆಯುಧಗಳು ಸಿಗುತ್ತಿರುವುದು. ನಾವು ನಿರೀಕ್ಷಿಸಲೂ ಆಗದೆ ಇರುವಂತಹ ಮತ್ತು ನಮ್ಮನ್ನು ದಿಗ್ಭ್ರಾಂತರನ್ನಾಗಿಸುವ ಇನ್ನೊಂದು ವಿದ್ಯಮಾನವೆಂದರೆ ಮಕ್ಕಳು ಸೇನೆಗೆ ಸೇರುವುದು. ಅಮೆರಿಕಾದ ಕ್ರಾಂತಿಯ ಸಂದರ್ಭದಲ್ಲಿ ಸೇನೆಯಲ್ಲಿ ಇದ್ದ ಬಹುತೇಕರು (ಅಮೇರಿಕನ್ನರು, ಜೊತೆಗೆ ಬ್ರಿಟಿಷರು ಕರೆತಂದ ಹೆಸ್ಸಿಯನ್ನರು) ಹದಿನಾಲ್ಕರಿಂದ ಹದಿನೈದು ವರ್ಷ ಒಳಗಿನವರಾಗಿದ್ದರು. ಅವರ ನಡುವೆ ಕೇವಲ ಎಂಟು ವರ್ಷದ ಮಕ್ಕಳೂ ಇದ್ದರು. ಅಭಿಜಾತ ರೋಮಿನಲ್ಲಿ ಕೃಷಿ ದುಡಿಮೆಯಿಂದಲೂ, ತಂದೆತಾಯಿಗಳ ಹತೋಟಿಯಿಂದಲೂ ತಪ್ಪಿಸಿಕೊಳ್ಳಲು ಹುಡುಗರು ಸೇನೆ ಸೇರುವುದಕ್ಕೆ ಇಷ್ಟಪಡುತ್ತಿದ್ದರು. ಆಧುನಿಕಪೂರ್ವ ಸಮಾಜಗಳಲ್ಲಿ ಸೈನ್ಯದಲ್ಲಿ ಸೇವೆಮಾಡುವುದು ಯುವಜನರಲ್ಲಿ ಸಾಮಾನ್ಯವಾಗಿತ್ತು; ಅದು ಈಗಲೂ ಹಾಗೆಯೇ ಮುಂದುವರಿದುಕೊಂಡು ಬಂದಿದೆ. ಆದರೆ, ಐತಿಹಾಸಿಕ ವೈಚಿತ್ರ್ಯವೆಂದರೆ ಈ ಪಾರಂಪರಿಕ ಪದ್ಧತಿಯನ್ನು ನಮ್ಮಲ್ಲಿ ಬಹಳಷ್ಟು ಮಂದಿ 'ಬಾಲ್ಯಕ್ಕೆ ಸಹಜವಾದ ಸ್ಥಿತಿಯ ಉಲ್ಲಂಘನೆ' ಎಂದು ತರ್ಕಿಸಿದ್ದೇವೆ. ಈ ಎಲ್ಲಾ ಉದಾಹರಣೆಗಳು ಸ್ಪಷ್ಟವಾಗಿ ಸೂಚಿಸುವಂತೆ, ನಾವು ಬಾಲ್ಯವನ್ನು ಐತಿಹಾಸಿಕ ಹಿನ್ನೆಲೆಯಲ್ಲಿ, ಅದರಲ್ಲೂ ಮುಖ್ಯವಾಗಿ ಸಾಕಷ್ಟು ವಿಶಾಲವಾದ ಭೌಗೋಲಿಕ ಮತ್ತು ಕಾಲಾನುಕ್ರಮದ ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಾದ ಆವಶ್ಯಕತೆ ಇದೆ.

ಜಾಗತಿಕವಾಗಿ ಬಾಲ್ಯದ ಇತಿಹಾಸವನ್ನು ಬರೆಯುವುದು ಒಂದು ಮಹತ್ವಾಕಾಂಕ್ಷೆಯ ಪ್ರಯತ್ನವೇ ಸರಿ. ಇದಕ್ಕೆ ಎದುರಾಗುವ ಅಡೆತಡೆಗಳು ಮತ್ತು ಇತಿಮಿತಿಗಳು ಅನೇಕ. ಇವುಗಳ ಬಗೆಗೆ ವಿವರವನ್ನು ನೋಡಲು ಇಷ್ಟರಲ್ಲಿಯೇ ಹಿಂದಿರುಗೋಣ. ನಾನು ಎರಡು ಕಾರಣಗಳಿಗಾಗಿ ಒಂದು ಸ್ಥೂಲಚಿತ್ರ ಕೊಡುವ ಪ್ರಯತ್ನಮಾಡುತ್ತೇನೆ. ಮೊದಲನೆಯದಾಗಿ, ಒಂದು ಜಾಗತಿಕ ನೆಲೆಯಿಂದ ಇತಿಹಾಸದ ಕಡೆಗೆ ಈ ರೀತಿಯ ತಿರುಗುವುದು ಅಗತ್ಯವಾಗಿದೆ. ಜಾಗತಿಕ ಇತಿಹಾಸವು ಹಲವಾರು ಪ್ರಮುಖ ಸಂಶೋಧನೆಗಳಿಂದ ಕೂಡಿದ ಒಂದು ಶ್ರೀಮಂತ ಕ್ಷೇತ್ರವಾಗಿದೆ. ಜಾಗತಿಕ ಇತಿಹಾಸದ ಚೌಕಟ್ಟಿನಲ್ಲಿ ಇತ್ತೀಚೆಗೆ ನಡೆದ ಸಂಶೋಧನೆಗಳು ಪರಿಸರ ಮತ್ತು ಜೈವಿಕ ಜಗತ್ತಿನಲ್ಲಿ ಆಗುತ್ತಿರುವ ಬೆಳವಣಿಗೆಗೆ ಸಂಬಂಧಿಸಿದಂತೆ, ವಲಸೆಯ ಸ್ವರೂಪಕ್ಕೆ ಸಂಬಂಧಿಸಿದಂತೆ, ಪ್ರಮುಖ ಸಮಾಜಗಳ ನಡುವಿನ ಸಂಬಂಧಗಳ ಬಗೆಗೆ ಅದರಲ್ಲೂ ಮುಖ್ಯವಾಗಿ ಪೂರ್ವ ಏಷ್ಯಾದ ಆರ್ಥಿಕ ಚೈತನ್ಯಕ್ಕೆ ಸಂಬಂಧಿಸಿದಂತೆ ನಮ್ಮ ಅರಿವನ್ನು ಹೆಚ್ಚಿಸಿವೆ. ಆದರೆ ಮನುಷ್ಯನ ಅನುಭವದ ಖಾಸಗಿ ಮತ್ತು ಆಪ್ತ ವಿಷಯಗಳನ್ನು ಜಾಗತಿಕ ಇತಿಹಾಸ ಸಂದರ್ಭದಲ್ಲಿ ಇಟ್ಟು ನೋಡಿರುವುದು ವಿರಳ ಎನ್ನಬಹುದು. ಇದರಿಂದಾಗಿ ಈ ಕ್ಷೇತ್ರವು ಅನಾಮಧೇಯ ಶಕ್ತಿಗಳ ಪ್ರಭಾವದಲ್ಲಿದೆ – ಬಹುತೇಕ ಜನರ ನಿತ್ಯದ ಬದುಕಿನ ಅನುಭವಗಳಿಗೆ ಯಾವುದೇ ರೀತಿಯಲ್ಲಿಯೂ ಅನ್ವಯವಾಗದ ಹಾಗೆ, ಜಾಗತಿಕ ಇತಿಹಾಸದಲ್ಲಿ ವ್ಯಾಪಾರ ಸಂಬಂಧಗಳು ಪ್ರಮುಖವಾಗಿ ಮತ್ತು ವ್ಯವಸ್ಥಿತವಾಗಿ ಗಮನಸೆಳೆಯುವ ಅಂಶಗಳಾಗಿವೆ. ಜಾಗತಿಕ

ಇತಿಹಾಸದ ಪ್ರಾಮುಖ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ತುಲನಾತ್ಮಕ ವಿಶ್ಲೇಷಣೆ ಒಳಕೊಂಡು, ಬಾಲ್ಯದ ಇತಿಹಾಸವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುವುದರಿಂದ ನಮಗೆ ಈ ಕ್ಷೇತ್ರದಲ್ಲಿರುವ ಇನ್ನೂ ಹೆಚ್ಚಿನ ಅಂಶಗಳನ್ನು ಅನ್ವೇಷಿಸಲು ಸಾಧ್ಯವಾಗುತ್ತದೆ. ಹೀಗೆ ಮಾಡುವಾಗ ಕಾಲಾನುಸಾರವಾಗಿ ಅಥವಾ ವಿವಿಧ ಅವಧಿಗಳನ್ನಾಗಿ ವಿಂಗಡಿಸಿ ಜಾಗತಿಕ ಇತಿಹಾಸದ ಗುರುತುಗಳನ್ನು ಅವುಗಳು ಇದ್ದ ಹಾಗೆಯೇ ಪುನರಾವರ್ತಿಸದೆ, ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಮೂಲಕ ಜಾಗತಿಕ ಇತಿಹಾಸದ ಅಧ್ಯಯನದ ವ್ಯಾಪ್ತಿಯನ್ನು ಹೆಚ್ಚಿಸುವುದು ಮತ್ತು ಅದಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡುವುದು ಇಲ್ಲಿನ ಉದ್ದೇಶ.

ಬಾಲ್ಯದ ಜಾಗತಿಕ ಇತಿಹಾಸ ಬರೆಯಲು ಇರುವ ಎರಡನೆಯ ಪ್ರಚೋದನೆಯೆಂದರೆ, ಇದು ಬಾಲ್ಯದತ್ತ ನಿರ್ದಿಷ್ಟವಾಗಿ ಗಮನಹರಿಸುತ್ತದೆ. ಹಲವು ಕಾರಣಗಳಿಗಾಗಿ 1980ರ ಸುಮಾರಿಗೆ ಮರೆಗೆ ಸರಿದ ಬಾಲ್ಯದ ಇತಿಹಾಸವನ್ನು ಕುರಿತ ಸಂಶೋಧನೆಯು ಈಗ ಮತ್ತೆ ಬಲವಾಗಿ ಮುನ್ನೆಲೆಗೆ ಬರುತ್ತಿರುವುದು ಸಂತೋಷದ ಬೆಳವಣಿಗೆ. ಬಾಲ್ಯವು ಮಾನವ ಸಮಾಜದ ಮೂಲಭೂತ ವಿದ್ಯಮಾನಗಳಲ್ಲಿ ಒಂದು; ಅದರ ಐತಿಹಾಸಿಕ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವುದರಿಂದ ನಮಗೆ ಹಿಂದೆ ನಡೆದುಹೋದ ವಿಷಯಗಳನ್ನು ಮತ್ತು ಈಗಿನ ಪರಿಸ್ಥಿತಿಗೆ ಮತ್ತು ಸಮಸ್ಯೆಗಳಿಗೆ ಕಾರಣವಾದ ಶಕ್ತಿಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಹೆಚ್ಚಿನ ಸಂಶೋಧನೆಯು, ಸಾಕಷ್ಟು ಸೂಕ್ತವಾಗಿಯೇ ಅತ್ಯಂತ ವಿಭಿನ್ನವೂ, ಸಂಕೀರ್ಣವೂ ಆದ ಈ ಸಂದರ್ಭವನ್ನು ಗುರುತಿಸಲು ನಿರ್ದಿಷ್ಟ ಸಮಾಜಗಳು ಮತ್ತು ಕಾಲಘಟ್ಟಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತವೆ. ಅದೇ ಸಮಯದಲ್ಲಿ, ಒಂದು ವಿಶಾಲ ಚಿತ್ರಣದ ಅರಿವು ಇರುವುದು ಕೂಡ ಮುಖ್ಯ, ಏಕೆಂದರೆ, ಈಗ ಕೆಲವೊಮ್ಮೆ ಜಾಗತಿಕ ಇತಿಹಾಸವನ್ನು ಬೃಹತ್ ಇತಿಹಾಸ (big history) ಎಂದು ಕರೆಯುತ್ತಾರೆ. ಬಾಲ್ಯ ಎಂಬ ವಿದ್ಯಮಾನದಲ್ಲಿ ಪ್ರಮುಖ ಬದಲಾವಣೆಗಳನ್ನು ಮತ್ತು ನಿರಂತರತೆಗಳನ್ನು ವಿವರಿಸುತ್ತ ಜಾಗತಿಕ ಇತಿಹಾಸದ ಸಂದರ್ಭವು ಗಮನವನ್ನು ನೀಡುವಂತೆ ಒತ್ತಾಯಿಸುತ್ತದೆ – ಇದು ಇನ್ನೂ ಹೆಚ್ಚಿನ ಅಧ್ಯಯನಗಳ ಸ್ವರೂಪವನ್ನು ಇನ್ನೂ ನಿರ್ದಿಷ್ಟವಾಗಿ ನಿರೂಪಿಸಲು ಸಹಾಯ ಮಾಡುತ್ತದೆ. ಅಷ್ಟೇ ಅಲ್ಲದೆ, ಈವರೆಗೆ ಕಟ್ಟುನಿಟ್ಟಾಗಿ ಪಶ್ಚಿಮ ಯುರೋಪ್ ಮತ್ತು ಉತ್ತರ ಅಮೆರಿಕಾದ ದೃಷ್ಟಿಯಿಂದ ಮಾತ್ರ ನೋಡಲಾಗುತ್ತಿದ್ದ ಕ್ಷೇತ್ರವೊಂದನ್ನು ಹೊಸ ದೃಷ್ಟಿಯಿಂದ ನೋಡಲು ದೊಡ್ಡ ಸಮಾಜಗಳ ನಡುವಿನ ಸಾಮ್ಯತೆಗಳು ಮತ್ತು ಭಿನ್ನತೆಗಳ ಅರಿವು ಬೇಕಾಗುತ್ತದೆ. ಈ ತುಲನಾತ್ಮಕ ಪ್ರಜ್ಞೆಯು ತನ್ನದೇ ಆದ ಶೋಧನೆಗಳನ್ನು ಮತ್ತು ಮಾರ್ಗಸೂಚಿಗಳನ್ನು ಉತ್ಪಾದಿಸುವುದಲ್ಲದೆ ಮತ್ತೆ ಇದರಿಂದ ಇಲ್ಲಿಯವರೆಗೆ ಸಂಕುಚಿತವಾಗಿ ರಚಿಸಲ್ಪಟ್ಟ ಯೋಜನೆಗಳಿಗೆ ಹೊಸ ದೃಷ್ಟಿಕೋನ ದೊರಕಿಸಿಕೊಡುತ್ತದೆ. ಇಲ್ಲವಾದಲ್ಲಿ ಅವುಗಳ ವಿಶಿಷ್ಟತೆ ಮತ್ತು ವೈಚಿತ್ರ್ಯಗಳನ್ನು ತಪ್ಪಾಗಿ ಅರ್ಥೈಸುವ ಸಾಧ್ಯತೆ ಇರುತ್ತದೆ. ಹಾಗಾಗಿ, ಬಾಲ್ಯವನ್ನು ಒಂದು ವಿದ್ಯಮಾನವಾಗಿ ಮತ್ತು ಕಾಲಾಂತರದಲ್ಲಿ ಸಾಗಿಬಂದ ಒಂದು ಪ್ರಕ್ರಿಯೆಯಾಗಿ

ಪರಿಗಣಿಸಿ ಪಡೆಯುವ ಜ್ಞಾನಕ್ಕೆ ನೇರ ಕೊಡುಗೆ ಕೊಡುವುದು ಈ ಚಿತ್ರಣದ ಎರಡನೇ ಉದ್ದೇಶವಾಗಿದೆ.[2]

ತೊಂದರೆಗಳ ಬಗೆಗೆ ಒಂದೆರಡು ಮಾತು. ಇತರ ವಿಷಯಗಳಿಗಿಂತ ಬಾಲ್ಯದ ಬಗೆಗೆ ಐತಿಹಾಸಿಕವಾಗಿ ಬರೆಯುವುದು ಹೆಚ್ಚು ಕಷ್ಟ, ಏಕೆಂದರೆ, ಇತರ ವಿಷಯಗಳಿಗೆ ಹೋಲಿಸಿದರೆ ಬಾಲ್ಯವು ಸಾಮಾನ್ಯವಾಗಿ ಯಾವುದೇ ನೇರ ದಾಖಲೆಗಳನ್ನು ತನ್ನ ಹಿಂದೆ ಬಿಡುವುದಿಲ್ಲ. ಹಾಗಾಗಿ ನಾನು ಮಕ್ಕಳ ಮೂಲಕವಾಗಿ ಇದನ್ನು ನೋಡುವ ಉದ್ದೇಶವನ್ನು ಇಟ್ಟುಕೊಂಡಿದ್ದರೂ, ಈ ತೊಂದರೆಯನ್ನು ಭಾಗಶಃ ಒಪ್ಪಿಕೊಂಡು, ನನ್ನ ಈ ಭಾಷಣದಲ್ಲಿ ಬಾಲ್ಯವನ್ನು ಬಹಳವಾಗಿ ಮಕ್ಕಳ ಯಾವ ಪಾತ್ರವೂ ಇಲ್ಲದ, ವಯಸ್ಕರೇ ನಿರ್ಮಿಸಿದಂತಹ ಒಂದು ಸಾಮಾಜಿಕ ಪರಿಕಲ್ಪನೆಯಾಗಿ ನೋಡುತ್ತೇನೆ. ಮಕ್ಕಳಲ್ಲಿ ಶಿಸ್ತು ಬೆಳೆಸುವುದನ್ನು ಕುರಿತಂತೆ ವಿವಿಧ ಐತಿಹಾಸಿಕ ಕಾಲಘಟ್ಟಗಳಲ್ಲಿ ವಯಸ್ಕರು ತಳೆದ ನಿಲುವುಗಳನ್ನು ನಾವು ಚರ್ಚಿಸಬಹುದು. ಆದರೆ ಒಂದು ಮಹತ್ವದ ಉದಾಹರಣೆಯನ್ನು ನಾವು ಪರಿಗಣಿಸುವುದಾದರೆ, ಇದರ ಬಗೆಗೆ ಮಕ್ಕಳ ಅನುಭವ ಹೇಗಿತ್ತು ಎಂಬುದನ್ನು ಕುರಿತು ನಮಗೆ ಮಾಹಿತಿ ಸಿಗುವುದಿಲ್ಲ. ವಿಶಾಲ ನೆಲೆಯಲ್ಲಿ, ನಾವು ಬಾಲ್ಯದ ಇತಿಹಾಸವನ್ನು ನೆನಪುಗಳ, ಪುರಾವೆಗಳ ಆಧಾರದ ಮೇಲೆ, ಕಲಾಕೃತಿಗಳು ಮತ್ತು ಜಾನಪದ ಸಾಹಿತ್ಯದ ಆಧಾರದ ಮೇಲೆ ತಿಳಿದುಕೊಳ್ಳಬಹುದು. ಹಾಗಿದ್ದರೂ ಶೋಧಿಸಲಾಗದ ಕೆಲವೊಂದು ವಿಚಾರಗಳು ಉಳಿದುಬಿಡುತ್ತವೆ. ಜಾಗತಿಕ ಇತಿಹಾಸಕ್ಕೆ ನೇರವಾದ ಸಂಬಂಧವಿರುವ ಎರಡನೆಯ ಸಮಸ್ಯೆಯು ಬಾಲ್ಯದ ಬಗೆಗೆ ಇಲ್ಲಿಯವರೆಗೆ ನಡೆದಿರುವ ಅಧ್ಯಯನದ ಅಸಮತೆಗೆ ಸಂಬಂಧಪಟ್ಟದ್ದಾಗಿದೆ. (ಜಾಗತಿಕ ಇತಿಹಾಸದ ವಿಧಾನವು ಇದನ್ನು ಪರಿಹರಿಸಲು ಸಹಾಯಕವಾಗಬಲ್ಲುದು). ಪಾಶ್ಚಾತ್ಯ ದೇಶಗಳಲ್ಲಿ ಬಾಲ್ಯದ ಬಗೆಗೆ ಅಪಾರ ಸಾಹಿತ್ಯ ಲಭ್ಯವಿದ್ದರೂ, ಇನ್ನೂ ಹೆಚ್ಚಿನ ಸಂಶೋಧನೆಗೆ ಅಲ್ಲಿ ಅವಕಾಶವಿದೆ. ಇತರ ಪ್ರದೇಶಗಳಿಂದ ಅದರಲ್ಲೂ ದಕ್ಷಿಣ ಅಮೆರಿಕಾದ ದೇಶಗಳಿಂದ ನಮಗೆ ಬಾಲ್ಯದ ಇತಿಹಾಸದ ಬಗೆಗೆ ನಿಜವಾಗಿಯೂ ಆಸಕ್ತಿದಾಯಕ ಅಧ್ಯಯನಗಳು ಲಭ್ಯವಾಗತೊಡಗಿವೆ. ಆದರೆ ಸಮತೋಲನವನ್ನು ಇನ್ನೂ ಸಾಧಿಸಲಾಗಿಲ್ಲ ಎಂಬ ಕಾರಣಕ್ಕೆ ವಿಷಯದ ಸಾರ್ವತ್ರೀಕರಣ ಮಾಡುವುದು ಇನ್ನೂ ಸವಾಲಾಗಿಯೇ ಉಳಿದಿದೆ.

ಇನ್ನು ಮೂರನೆ ಸಮಸ್ಯೆಗೆ ಬರುವುದಾದರೆ, ಮೂರು ದಶಕಗಳ ಹಿಂದೆ ಪಾಶ್ಚಾತ್ಯ ದೇಶಗಳಲ್ಲಿ ಚರಿತ್ರೆಯಲ್ಲಿ ಬಾಲ್ಯವನ್ನು ಕುರಿತ ಅಧ್ಯಯನದ ಒಂದು ಹುಸಿ ಪ್ರಾರಂಭವಾಗಿತ್ತು. ಬಾಲ್ಯದ ಇತಿಹಾಸದ ಅಧ್ಯಯನವನ್ನು ಪರಿಚಯಿಸಿದವರು ಫ್ರಾನ್ಸ್ನ ಉದ್ದಾಮ ವಿದ್ವಾಂಸರಾದ ಫಿಲಿಪ್ ಅರೀಸ್. "ಆಧುನಿಕಪೂರ್ವ ಪಾಶ್ಚಾತ್ಯ ಸಮುದಾಯದಲ್ಲಿ ಬಾಲ್ಯ ಎಂಬ ಪರಿಕಲ್ಪನೆ ಇರಲಿಲ್ಲ; ಅಲ್ಲಿ ಮಕ್ಕಳನ್ನು ಯಾವುದೇ ವಿಶೇಷ ಭಾವನಾತ್ಮಕ ಅಥವಾ ಕಾನೂನಿನ ಪ್ರಕಾರ ಅರ್ಹತೆಗಳಿಲ್ಲದ ಚಿಕ್ಕ ಮನುಷ್ಯರ ರೀತಿಯಲ್ಲಿ ನೋಡಲಾಗುತ್ತಿತ್ತು," ಎಂದು ಅರೀಸ್ ಪ್ರತಿಪಾದಿಸುತ್ತಾರೆ. ಆಧುನಿಕಪೂರ್ವ ಸಮಾಜದಲ್ಲಿ ಎದ್ದುಕಾಣುತ್ತಿದ್ದ ಕೆಲವು ಭಯಾನಕ ಅಂಶಗಳು, ಉದಾಹರಣೆಗೆ, ಅಧಿಕ ಸಂಖ್ಯೆಯಲ್ಲಿ ಮಕ್ಕಳು ಸಾವಿಗೀಡಾಗುವುದು, ಕಠಿಣ

[2] *Paula Fass, ed., Encyclopedia of the History of Childhood: In History and Society, 3 vols. (New York: Macmillan Reference USA, 2003).*

ಶಿಸ್ತುಕ್ರಮಗಳು, ಬಾಲ ಕಾರ್ಮಿಕ ಪದ್ಧತಿ, ಮತ್ತು ಕಠಿಣ ಕೆಲಸ, ಮತ್ತಿತರ ಮಾದರಿಗಳು, ಉದಾಹರಣೆಗೆ, ಸತ್ತುಹೋದ ಮಗುವಿನ ಹೆಸರನ್ನು ಅನಂತರ ಹುಟ್ಟಿದ ಇನ್ನೊಂದು ಮಗುವಿಗೆ ಇಡುವುದು, ಮತ್ತಿತರ ಮಾದರಿಗಳು, – ಇವು ಒಂದು ರೀತಿಯಲ್ಲಿ ಮಗುವಿನ ಸಾವಿನ ಬಗೆಗೆ ಮತ್ತು ಮಕ್ಕಳ ವ್ಯಕ್ತಿತ್ವದ ಬಗೆಗೆ ಇರುವ ಅಲಕ್ಷ್ಯದ ಧೋರಣೆಯನ್ನು ಪ್ರತಿಬಿಂಬಿಸುತ್ತವೆ – ಇವುಗಳನ್ನು ಗಮನಿಸಿದ ಇತರ ವಿದ್ವಾಂಸರು ಅರೀಸ್ ಅವರ ವಿಚಾರಧಾರೆಯನ್ನು ಹಿಗ್ಗಿಸಿದರು, ಮತ್ತು ಕೆಲವೊಮ್ಮೆ ಅಪಾರ್ಥಕ್ಕೂ ಈಡುಮಾಡಿದುದೂ ಉಂಟು. ಇವೆಲ್ಲವುಗಳ ಕಾರಣದಿಂದ, ಬಾಲ್ಯದ ಚರಿತ್ರೆಯ ಆದ್ಯಪ್ರವರ್ತಕರಾದ ಲಾಯ್ಡ್ ಡಿಮಾಸ್ ಅವರಂತಹವರು ಕೂಡ ಬಾಲ್ಯದ ಇತಿಹಾಸವನ್ನು ಭಯಾನಕವಾಗಿ ಚಿತ್ರಿಸುವಂತಾಯಿತು. ಈ ಅಭಿಪ್ರಾಯಗಳ ಪ್ರಕಾರ ಬಾಲ್ಯವನ್ನು ತುಸು ಸಭ್ಯತೆಯಿಂದ ಕಾಣಲು ಪ್ರಾರಂಭವಾಗಿದ್ದು ಕೇವಲ ಇಪ್ಪತ್ತನೆಯ ಶತಮಾನದಲ್ಲಷ್ಟೇ. ಅಥವಾ ಇನ್ನೊಬ್ಬ ಇತಿಹಾಸಕಾರರು ವಾದಿಸುವಂತೆ, ಆಧುನಿಕಪೂರ್ವ ಸಮಾಜದಲ್ಲಿ ಮಕ್ಕಳನ್ನು ನೋಡಿಕೊಳ್ಳುತ್ತಿದ್ದ ಬಗೆಯು ಒಂದು ಪಕ್ಷಿಯು ತನ್ನ ಮರಿಯನ್ನು ನೋಡಿಕೊಳ್ಳುತ್ತಿದ್ದ ರೀತಿಗಿಂತ ಭಿನ್ನವಾಗಿಯೇನೂ ಇರಲಿಲ್ಲ.[3] ಅಭಿವೃದ್ಧಿಯು ಆಧುನಿಕ ಯುಗದಲ್ಲಿ ಮಾತ್ರವೇ ಪ್ರಾರಂಭವಾಯಿತೆಂಬ ಈ ತರ್ಕವು ಈ ಕಾಲದ ಯಶಸ್ವಿ ಸಾಧನೆಯ ಘೋಷಣೆಗಳೊಂದಿಗೆ ಮೇಳವಿಸಿದ್ದು ಸೋಜಿಗದ ವಿಚಾರ. ಉದಾಹರಣೆಗೆ, ಬಾಲ್ಯದ ವಿಷಯದ ಅಧ್ಯಾಯದಲ್ಲಿನ ಪ್ರಗತಿಯು ಆಧುನಿಕತೆಯ ಪ್ರಾರಂಭದೊಂದಿಗೆ ಮಾತ್ರ ಪ್ರಾರಂಭವಾಯಿತು ಎಂಬ ಈ ತರ್ಕವು 1903ರಲ್ಲಿ 23ನೆಯ ಶತಮಾನವು 'ಮಕ್ಕಳ ಶತಮಾನ' ಎಂಬ ದೊಡ್ಡ ಘೋಷಣೆಯೊಂದಿಗೆ ಸರಿಹೊಂದುವಂತೆ ಇತ್ತು[4] ಎಂದು ಘೋಷಿಸಿದ್ದು. ಈ ವಾದವು, ಮಧ್ಯಯುಗ ಅಥವಾ ಆಧುನಿಕ ಯುಗದ ಆರಂಭದ ಚರಿತ್ರೆಯ ವೈಭವದಲ್ಲಿ ಮುಳುಗಿಹೋದ ಇತಿಹಾಸಕಾರರು ಕೂಡಲೆ ಪರಿಷ್ಕರಣಾತ್ಮಕವಾದ ಹೇಳಿಕೆಯನ್ನು ನೀಡುವಂತೆ ಮಾಡಿತು. ಹಿಂದೆಯೂ ಕೂಡ ಮಕ್ಕಳನ್ನು ಪ್ರೀತಿಯಿಂದ, ಸಹೃದಯತೆಯಿಂದ ನೋಡಿಕೊಳ್ಳಲಾಗುತ್ತಿತ್ತು ಮತ್ತು ಗುಣಮಟ್ಟದ ಪಾಲನೆ ಪೋಷಣೆಯ ಬಗೆಗೆ (ಈ ಪರಿಕಲ್ಪನೆಯು ಅವರ ಪ್ರಕಾರ ಒಂದು ಮಾನವ ಸಹಜವಾದ ಎಂದೂ ಬದಲಾಗದ ಪ್ರವೃತ್ತಿ) ನಮಗೆ ಯಾವುದೇ ಐತಿಹಾಸಿಕ ದಾಖಲೆಗಳು ಲಭ್ಯವಿಲ್ಲ ಮತ್ತು ಬಾಲ್ಯದ ಇತಿಹಾಸದ ಅಧ್ಯಯನದ ಕುರಿತ ಮೂಲನಿಲವೇ ಗಂಭೀರ ದೋಷಗಳಿಂದ ಕೂಡಿದೆ ಎಂಬುದು ಅವರ ಪ್ರತಿಕ್ರಿಯೆಯ ಸಾರಾಂಶವಾಗಿತ್ತು. ಈ ವಾದವು ನಾವು ಸಾಮಾನ್ಯವಾಗಿ ಊಹಿಸಬಹುದಾದಂತೆ ಎರಡು ಪರಸ್ಪರ ಸಂಬಂಧಿಸಿದ ಪರಿಣಾಮಗಳಿಗೆ ದಾರಿಮಾಡಿತು. ಒಂದನೆಯದು, ಮೂಲ ವಿಷಯವನ್ನು ಕುರಿತೇ ಇಷ್ಟೊಂದು ವಿವಾದ ಉಂಟಾದ ಕಾರಣ ಹಲವು ವಿದ್ವಾಂಸರು ಇದರ ಅಧ್ಯಯನದಿಂದ ಹಿಂದೆ ಸರಿದುದರಿಂದ, ಬಾಲ್ಯದ ಇತಿಹಾಸದ ಸಂಶೋಧನೆ ನಿಧಾನಗೊಂಡಿತು. ಎರಡನೆಯದಾಗಿ, ಒಂದು ವೇಳೆ ಪರಿಷ್ಕರಣವಾದಿಗಳ ವಾದವೇ ಸರಿಯಾಗಿದ್ದರೆ,

[3] Edward Shorter, The Making of the Modern Family(New York: Basic Books, 1975); Lawrence Stone, The Family, Sex and Marriage in England, 1500–1800 (New York: Harper & Row, 1977).

[4] *Theresa Richardson, The Century of the Child: The Mental Hygiene Movement and Social Policy in the United States and Canada (Albany: State University of New York Press, 1989); Ellen Key, The Century of the Child(New York: G. P. Putnam's Sons, 1907); David Macleod, The Age of the Child: Children in America 1890–1920 (New York: Twayne, 1998).*

ಕಾಲದಿಂದ ಕಾಲಕ್ಕೆ ಬಾಲ್ಯದ ಖಾಸಗಿ ಅಂಶಗಳಲ್ಲಿ ಯಾವುದೇ ಮುಖ್ಯ ಬದಲಾವಣೆಗಳು ಆಗದೆ ಇರುವ ಕಾರಣ, ಇತಿಹಾಸಕಾರರು ತಮ್ಮ ಶ್ರಮ ಮತ್ತು ಸಮಯವನ್ನು ಇತರ ವಿಚಾರಗಳನ್ನು ಕುರಿತಂತೆ ವಿನಿಯೋಗಿಸುವುದು ಒಳಿತು ಎಂಬ ಅಭಿಪ್ರಾಯ ತಲೆದೋರಿತು.[5]

ಈ ವಿವಾದ ಈಗ ಹಳೆಯದಾಗಿದ್ದು ವಿದ್ವಾಂಸರು ಈಗ ಮತ್ತೆ ಇದನ್ನು ಕುರಿತ ಸಂಶೋಧನೆಯಲ್ಲಿ ತೊಡಗಿದ್ದಾರೆ. ಮಕ್ಕಳ ಐಹಿಕ ಆಸಕ್ತಿಗಳ ಸುತ್ತ ಹುಟ್ಟಿಕೊಂಡ ಸಂಸ್ಕೃತಿಯನ್ನು ಕುರಿತಂತೆ, ಅಂದರೆ ಬೊಂಬೆಗಳು ಮತ್ತು ಇತರ ಆಟದ ವಸ್ತುಗಳನ್ನು ಗಮನದಲ್ಲಿಟ್ಟುಕೊಂಡು ಇತಿಹಾಸಕಾರರು ಹೆಚ್ಚಿನ ಅಧ್ಯಯನ ಕೈಕೊಳ್ಳುತ್ತಿದ್ದಾರೆ. ಬಳಕೆದಾರರಾಗಿ ಮತ್ತು ವಯಸ್ಕರ ಉಪಭೋಗಿ ಸಂಸ್ಕೃತಿಯ ಸರಕುಗಳಾಗಿ ಮಕ್ಕಳನ್ನು ಬಳಸುತ್ತಿರುವ ಬಗೆಗೆ ಅತ್ಯಂತ ಆಸಕ್ತಿದಾಯಕ ಅಧ್ಯಯನಗಳು ನಡೆಯುತ್ತಿವೆ. ಪಾಲಕರ ಆತಂಕಗಳು ಮತ್ತು ಮಕ್ಕಳ ಚಿತ್ರಣಗಳಲ್ಲಿ ಆಗುತ್ತಿರುವ ಬದಲಾವಣೆಗಳು, 'ಮುದ್ದು ಮಗು'ವಿನ ಪರಿಕಲ್ಪನೆಯ ಉದಯ ಮತ್ತು ಮಕ್ಕಳ ಭಾವನೆಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ನಿಭಾಯಿಸುವುದನ್ನು ಕುರಿತು ಬರುತ್ತಿರುವ ಹೊಸ ಸಲಹೆಗಳು ಇನ್ನೊಂದಷ್ಟು ಅಧ್ಯಯನಗಳಿಗೆ ದಾರಿಮಾಡಿಕೊಟ್ಟಿವೆ.[6] ಕೈಗಾರಿಕೆಗಳು ಕೇಂದ್ರಿತವಾಗಿರುವ ನಗರಗಳಲ್ಲಿ ಇರುವ ಬಡಮಕ್ಕಳು, ಅವರ ಬೀದಿಚಟುವಟಿಕೆಗಳು ಮತ್ತು ಅವರು ತೊಡಗಿಸಿಕೊಳ್ಳುವಂತಹ ಕೆಲಸಗಳು, ಉದಾಹರಣೆಗೆ, ವಾರ್ತಾಪತ್ರಿಕೆ ಮಾರುವಂತಹುದು ಇತ್ಯಾದಿಯಾಗಿ, ಅವರ ಬದುಕನ್ನು ಕುರಿತಂತೆ ಸಾಕಷ್ಟು ಗಮನ ಕೊಡಲಾಗಿದೆ. ಅನಾಥ ಮಕ್ಕಳು ಮತ್ತು ದತ್ತು ತೆಗೆದುಕೊಳ್ಳುವುದರ ಬಗೆಗೆ ಕೂಡ ಸಾಕಷ್ಟು ಅಧ್ಯಯನ ನಡೆದಿದೆ.[7] ಇವುಗಳಲ್ಲಿ ಹೆಚ್ಚಿನ ಅಧ್ಯಯನಗಳು ಪಾಶ್ಚಾತ್ಯ ದೇಶಗಳನ್ನು ಕೇಂದ್ರೀಕರಿಸಿಕೊಂಡು

---

[5] *Philippe Ariès, Centuries of Childhood: A Social History of Family Life, trans. R. Baldick (New York: Vintage, 1962); David Hunt, Parents and Children in History: The Psychology of Family Life in Early Modern France (New York: Basic Books, 1970); for the revisionist view, Linda Pollock, Forgotten Children: ParentChild Relations from 1500 to 1900 (New York: Cambridge University Press, 1983). For another major early work on colonial America, a work that also heavily focused on the psychological and oscillated creatively between the two poles, noting some major continuities (though less benign than those emphasized by Pollock) but also significant change, see Philip Greven, The Protestant Temperament: Patterns of Child-rearing, Religious Experience and the Self in Early America (New York: Knopf, 1977). For a strong statement of change and modern progress, see Lloyd deMause, ed., The History of Childhood: The Evolution of Parent-Child Relationships as a Factor in History(New York: Harper & Row, 1975).*

[6] Gary S. Cross, Kids' Stuff: *Toys and the Changing World of American Childhood* (Cambridge, MA: Harvard University Press. 1997) and *The Cute and the Cool: Wondrous Innocence and Modern American Children's Culture* (Oxford: Oxford University Press, 2004).

[7] Barbara Melosh, Strangers and Kin: *The American Way of Adoption* (Cambridge, MA: Harvard University Press, 2002); E. Wayne Carp, ed., *Adoption in America: Historical Perspectives* (Ann Arbor: University of Michigan Press, 2002).

ನಡೆಯುತ್ತಿದ್ದರೂ, ಇತರ ಸಮುದಾಯಗಳು ಕೂಡ ಈ ನಿಟ್ಟಿನಲ್ಲಿ ಮುನ್ನೆಲೆಗೆ ಬರಲು ಪ್ರಾರಂಭಿಸಿವೆ.

ಮದುವೆಯಾಗದೆ ಆಗುವ ಮಕ್ಕಳ ಸಂಖ್ಯೆ ಅತಿ ಹೆಚ್ಚು ಇರುವ ದಕ್ಷಿಣ ಅಮೇರಿಕದ ದೇಶಗಳು ಯಾವ ರೀತಿಯಾಗಿ ತಮ್ಮ ಕೌಟುಂಬಿಕ ವ್ಯವಸ್ಥೆಗಳನ್ನು ಈ ಮಕ್ಕಳ ಪಾಲನೆ ಪೋಷಣೆಯ ಅಗತ್ಯಕ್ಕನುಸಾರವಾಗಿ ರೂಪಿಸಿಕೊಳ್ಳುತ್ತವೆ ಎಂಬುದು ಒಂದು ವಿಶಾಲ ನಾಗರಿಕತೆಯ ವೈಶಿಷ್ಟ್ಯವಾಗಿದ್ದು, ಇದು ಜಾಗತಿಕ ಇತಿಹಾಸದಲ್ಲಿ ಶಿಶು ಕೇಂದ್ರಿತ ಸಮಾಜಕ್ಕೆ ಒಂದು ನಿರ್ದಿಷ್ಟ ಉದಾಹರಣೆಯಾಗುತ್ತದೆ. ಈ ದೇಶಗಳಲ್ಲಿ ನಡೆಯುತ್ತಿರುವ ಅಧ್ಯಯನಗಳು ಬಾಲ್ಯದ ಬಗೆಗೆ ಪಾಶ್ಚಾತ್ಯ ಅಧಿಕಾರಿವರ್ಗ ಮತ್ತು ಗೌರವಾನ್ವಿತ ಸಮಾಜ ಹೊಂದಿರುವ ಮಾನದಂಡಗಳಿಗೆ ಸವಾಲು ಎಸೆಯುವ ಹಾಗಿವೆ.[8] ಇಸ್ಲಾಂ ಧರ್ಮದಲ್ಲಿ, ರಷ್ಯಾದಲ್ಲಿ ಮತ್ತು ಪೂರ್ವ ಏಷ್ಯಾದ ರಾಷ್ಟ್ರಗಳಲ್ಲಿ ಬಾಲ್ಯವನ್ನು ಕುರಿತಂತೆ ನಮಗೆ ಕಲಿಕೆಯ ಹೆಚ್ಚಿನ ಅವಕಾಶವಿದೆ.

ಆದರೂ, ಹೊಸದಾಗಿ ನಡೆಯುತ್ತಿರುವ ಸಂಶೋಧನೆಯ ಬಹುಭಾಗವು ಅಸಮಾನ ರೀತಿಯಲ್ಲಿ ಆಧುನಿಕ ಬೆಳವಣಿಗೆಗಳ ಮೇಲೆ ಮಾತ್ರ ಗಮನಕೇಂದ್ರೀಕರಿಸುತ್ತಿದೆ. ಇದು ಒಂದು ರೀತಿಯಲ್ಲಿ ಸ್ವಾಗತಾರ್ಹ ಇರಬಹುದು, ಹೇಗೆಂದರೆ, ನಾವು ಇಂದು ಬಾಲ್ಯವನ್ನು ರೂಪಿಸುತ್ತಿರುವ ಮತ್ತು ಅದನ್ನು ನಿರೂಪಿಸುತ್ತಿರುವ ಹೊಸ ಮಾದರಿಗಳು ಹೇಗೆ ಹುಟ್ಟಿಕೊಳ್ಳುತ್ತಿವೆ ಎಂಬುದನ್ನು ಕುರಿತು ಸಾಕಷ್ಟು ಕಲಿಯುತ್ತಿದ್ದೇವೆ. ಇದು ನೀತಿನಿರೂಪಣೆ, ಪಾಲನೆ, ಪೋಷಣೆ ಮತ್ತು ಶಿಕ್ಷಣ ಹಾಗೂ ಮನೋರಂಜನೆಗಳನ್ನು ಕುರಿತಂತೆ ವರ್ತನೆಯ ಚರಿತ್ರೆಯ ಆಧಾರದ ಮೇಲೆ ಒಂದು ವಿಚಾರಶೀಲ ಚರ್ಚೆಯನ್ನು ಮುಂದುವರಿಸಲು ಅವಕಾಶ ಮಾಡಿಕೊಡಬಹುದು. ವರ್ತನೆಯ ಚರಿತ್ರೆಯು ಪ್ರಸ್ತುತ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಹಿಂದೆ ನಡೆದು ಹೋದ ಬದಲಾವಣೆಗಳು ಮತ್ತು ಅದರ ಕಾರಣಗಳ ಮೇಲೆ ಉದ್ದೇಶಪೂರ್ವಕವಾಗಿ ಗಮನವನ್ನು ಕೇಂದ್ರೀಕರಿಸುತ್ತದೆ.[9] ಇದರ ಮೂಲಕವಾಗಿ ನಾವು ಅಜ್ಜ ಅಜ್ಜಿಯರ ವರ್ತನೆಯಲ್ಲಿನ ವ್ಯತ್ಯಾಸಗಳನ್ನು ಗುರುತಿಸಲು ಇತಿಹಾಸದ ಮೊರೆಹೋಗಲು ಸಾಧ್ಯವಾಗುತ್ತದೆ; ದತ್ತು ಕ್ಷೇತ್ರದ ಧೋರಣೆಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನು, ಉದಾಹರಣೆಗೆ, ಜೈವಿಕ ತಂದೆತಾಯಿಯರನ್ನು ಮರೆಮಾಚದೆ ಗುರುತಿಸಬೇಕೆಂಬ ಬಯಕೆಯ ಹಿಂದಿನ ವಿದ್ಯಮಾನಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ; ಪ್ರಸ್ತುತ ಅಮೇರಿಕ ಸಂಯುಕ್ತ ಸಂಸ್ಥಾನದ ಸಮಾಜದಲ್ಲಿ ಮಕ್ಕಳ ಕಳವಿನ ಬಗೆಗೆ ಇರುವ ಅಸಾಮಾನ್ಯ ಭಯವನ್ನು ಅರ್ಥಮಾಡಿಕೊಳ್ಳಲು, ಕಲಿಕಾ ಮಟ್ಟದಲ್ಲಿ ಹೆಚ್ಚಳವನ್ನು ಗುರುತಿಸಲು, ಮಕ್ಕಳಲ್ಲಿ ಭೌತಿಕ ವಸ್ತುಗಳ ಬಗೆಗೆ ಕಂಡುಬರುವ ವ್ಯಾಮೋಹವು ಇಂದು ಒಂದು ನೈತಿಕ ಸಮಸ್ಯೆಯಾಗಿ ಕಾಣದೆ ಹೇಗೆ ಒಂದು ಅಪೇಕ್ಷಣೀಯ ಗುಣವಾಗಿ ಕಂಡುಬರತೊಡಗಿದೆ ಎಂಬುದನ್ನು ತಿಳಿದುಕೊಳ್ಳಲು ಮತ್ತು ಹೊಸದಾಗಿ ಹುಟ್ಟಿಕೊಳ್ಳುತ್ತಿರುವ ಮಕ್ಕಳಿಗೆ ದೊರಕಬೇಕಾದ ಗಮನದ ಕೊರತೆಯಿಂದ

[8] Tobias Hecht, ed., *Minor Omissions: Children in Latin American History and Society* (Madison: University of Wisconsin Press, 2002).

[9] *Peter N. Stearns, ed., Behavioral History (New York: New York University Press, forthcoming).*

ಉಂಟಾಗುವ ಮಾನಸಿಕ ಅಸ್ಥಿರತೆ ಮತ್ತು ಏಕಾಯೇಕಿ ಶಿಶುಗಳಲ್ಲಿ ಮರಣ ಸಂಭವಿಸುವ ಲಕ್ಷಣ, ಇತ್ಯಾದಿ ಆಧುನಿಕ ವಿದ್ಯಮಾನಗಳನ್ನು ಅರ್ಥೈಸಿಕೊಳ್ಳಲು ಸಹಾಯಮಾಡುತ್ತದೆ. [10] ಹಾಗೆಂದು ಮುನ್ನೆಲೆಗೆ ಬರುತ್ತಿರುವ ಬಾಲ್ಯದ ಇತಿಹಾಸಕಾರರೆಲ್ಲರೂ ಸಮಕಾಲೀನ ವಿವರಣೆಗಳಿಗೆ ಆತುಕೊಂಡಿದ್ದಾರೆ ಎಂದು ನಾವು ಹೇಳಲಾಗುವುದಿಲ್ಲ. ಆದರೆ ಆಧುನಿಕ ಜಗತ್ತಿನಲ್ಲಿ ಬಾಲ್ಯವನ್ನು ರೂಪಿಸುತ್ತಿರುವ ಶಕ್ತಿಗಳನ್ನು ಅನ್ವೇಷಿಸುವುದನ್ನು ಕುರಿತು ಹೆಚ್ಚಿನ ಅಧ್ಯಯನಾಸಕ್ತಿ ಕಂಡುಬರುತ್ತಿದೆ ಎಂಬುದು ನಿಜ ಮತ್ತು ಇದು ಸೂಕ್ತ ಕೂಡ.

ಗುಂಪುಗಳನ್ನಾಗಿಸುವ ಈ ಆಧುನಿಕ ಪ್ರಕ್ರಿಯೆಯು ಪಾಶ್ಚಾತ್ಯ ಅಥವಾ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ದೇಶಗಳ ಅಧ್ಯಯನಗಳನ್ನು ಮಾತ್ರ ಕೇಂದ್ರವಾಗಿಸಿಕೊಳ್ಳುತ್ತಿರುವ ಸಮಸ್ಯೆಯನ್ನು ಹುಟ್ಟುಹಾಕುವುದಲ್ಲದೆ, ಅದರ ಜೊತೆಗೆ ವಿಶಾಲ ಜಾಗತಿಕ ಇತಿಹಾಸದ ನೆಲೆಯಲ್ಲಿ ಮಕ್ಕಳನ್ನು ನೋಡುವ ವಿಧಾನದಲ್ಲಿ ಕೂಡ ಸಮಸ್ಯೆಯನ್ನು ತಂದೊಡ್ಡುತ್ತಿ್ತದೆ. ಜಾಗತಿಕ ಇತಿಹಾಸವನ್ನು ಕುರಿತಂತೆ ಕೈಕೊಂಡ ಹೆಚ್ಚಿನ ಅಧ್ಯಯನಗಳು ಜಗತ್ತಿನ ಕೃಷಿ ಸಮುದಾಯಗಳು ಮತ್ತು ಅವುಗಳಲ್ಲಿ ಆಧುನಿಕಪೂರ್ವಕಾಲದಲ್ಲಿ ಕಂಡುಬಂದ ಬದಲಾವಣೆಗಳ ಕಾಲಘಟ್ಟಗಳ ಮೇಲೆ ಮುಖ್ಯವಾಗಿ ಬೆಳಕು ಚೆಲ್ಲುತ್ತವೆ. ಇದರ ಅರ್ಥ, ಕೈಗಾರಿಕಾ ಯುಗಕ್ಕೆ ಮತ್ತು ಸಾಮ್ರಾಜ್ಯಶಾಹಿ ಯುಗಕ್ಕೆ ಇತಿಹಾಸಕಾರರು ಕೊಟ್ಟ ಪ್ರಾಮುಖ್ಯವನ್ನು ನಾನು ಅಲ್ಲಗಳೆಯುತ್ತಿದ್ದೇನೆ ಎಂದಲ್ಲ. ಆದರೆ ನನಗೆ ಎನಿಸುವ ಪ್ರಕಾರ, ಕೇವಲ ಸಾಮ್ರಾಜ್ಯಶಾಹಿ ನೀತಿಗಳು ಮತ್ತು ಅದಕ್ಕೆ ಇದ್ದ ವಿರೋಧಗಳ ನೆಲೆಯಿಂದ ಮಾತ್ರವಲ್ಲದೆ, ಅದರ ಭಾಗವಾಗಿದ್ದ ಸಮಾಜಗಳು ಕೂಡ ಸಾಮ್ರಾಜ್ಯಶಾಹಿ ಆಡಳಿತವನ್ನು ಹೇಗೆ ನೋಡಿದವು ಎಂಬುದನ್ನು ಅಧ್ಯಯನ ಮಾಡಬೇಕು ಎಂಬ ಒತ್ತಾಯ ಬಿಟ್ಟರೆ, ಜಾಗತಿಕ ಇತಿಹಾಸಕಾರರು ಚಿತ್ರಿಸಿದ ಹತ್ತೊಂಬತ್ತನೆಯ ಶತಮಾನದ ಸುದೀರ್ಘ ಇತಿಹಾಸವು ಜಾಗತಿಕ ಇತಿಹಾಸ ಪೂರ್ವದ ಅವತರಣಿಕೆಗಳಿಗಿಂತ ಭಿನ್ನವಾಗಿಲ್ಲ ಎಂಬುದನ್ನು ಬಹುತೇಕ ಇತಿಹಾಸಕಾರರು ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ. ಜಾಗತಿಕ ಇತಿಹಾಸಕಾರರು ಇಪ್ಪತ್ತನೆಯ ಶತಮಾನವನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ವಸಾಹತುಶಾಹಿ ವಿಮೋಚನೆ ಮತ್ತು ಜಾಗತೀಕರಣ ಹಾಗೂ ಅವುಗಳ ಸಂದರ್ಭಗಳನ್ನು ಐತಿಹಾಸಿಕ ದೃಷ್ಟಿಕೋನದಿಂದ ಅಧ್ಯಯನ ಮಾಡಲು ಹೆಚ್ಚಿನ ಒತ್ತನ್ನು ಕೊಡುತ್ತಾರೆ. ಇದನ್ನು ನಾನು ನನ್ನ ಎರಡನೆಯ ಲೇಖನದಲ್ಲಿ ವಿವರಿಸುತ್ತೇನೆ. ಆದರೆ ಆರನೆಯ ಶತಮಾನದಿಂದ ಹದಿನಾಲ್ಕನೆಯ ಶತಮಾನದ ಮಧ್ಯಭಾಗದವರೆಗಿನ ಕಾಲವು ಜಾಗತಿಕ ಇತಿಹಾಸದಲ್ಲಿ ಜಾಜ್ವಲ್ಯಮಾನ ಕಾಲ ಎಂದು ಹೇಳಬಹುದು; ಅಂದರೆ, ಶ್ರೇಷ್ಠ ಅಭಿಜಾತ ಸಾಮ್ರಾಜ್ಯಗಳ ಪತನದಿಂದ ಹಿಡಿದು ಪ್ರಮುಖ ಮಂಗೋಲ್ ಸಾಮ್ರಾಜ್ಯದ ಉದಯ ಮತ್ತು ಪತನದವರೆಗೆ ಮುಂದುವರಿದು, ಆಧುನಿಕ ಶತಮಾನದ ಆರಂಭದ ಕಾಲದವರೆಗೆ ಇವು ಎರಡೂ ಬದಲಾವಣೆಯ ಪ್ರಮುಖ ಕಾಲಘಟ್ಟಗಳು, ಅಂದರೆ ಇದು ಬಾಲ್ಯದ ಇತಿಹಾಸದಿಂದ ಗಮನವನ್ನು ಬಹುತೇಕವಾಗಿ ತಮ್ಮೆಡೆಗೆ ಸೆಳೆದುಕೊಂಡ ಆಧುನಿಕ ಬೆಳವಣಿಗೆಗಳು

[10] *Paula Fass, Kidnapped: Child Abduction in America (Cambridge, MA: Harvard University Press, 1997); Peter N. Stearns, Anxious Parents: A Modern History of Childrearing in America (New York: New York University Press, 2003).*

ಇನ್ನೂ ತಲೆದೋರುವುದಕ್ಕೆ ಹಿಂದಿನ ಕಾಲಘಟ್ಟ. ಹದಿನೈದನೆಯ ಶತಮಾನದ ಮಧ್ಯಭಾಗದಿಂದ ಹಿಡಿದು ಹದಿನೆಂಟನೆಯ ಶತಮಾನದ ಕೊನೆಯ ತನಕದ ಆಧುನಿಕ ಕಾಲದ ಆರಂಭಿಕ ಘಟ್ಟವು ಕೃಷಿ-ಆಧಾರಿತ ಆರ್ಥಿಕತೆಯ ನಿರ್ದಿಷ್ಟ ಸ್ವರೂಪದಿಂದ ನಿಧಾನವಾಗಿ ಜಾಗತಿಕ ವ್ಯಾಪಾರೀಕರಣದ ಕಡೆಗೆ ಹೊರಳುತ್ತದೆ; ಆದರೂ ಅದು ಇನ್ನೂ ಕೈಗಾರಿಕಾಪೂರ್ವ ಸ್ಥಿತಿಯಲ್ಲಿಯೇ ಇರುತ್ತದೆ.

ಜಾಗತಿಕ ಇತಿಹಾಸ ಮತ್ತು ಬಾಲ್ಯದ ಇತಿಹಾಸದ ನಡುವೆ ಇರುವ ಸಂಬAಧವನ್ನು ಅರ್ಥಮಾಡಿಕೊಳ್ಳುವಲ್ಲಿ ಒಂದು ನಿಜವಾದ ಸಮಸ್ಯೆ ಇದೆ. ಈ ಹಿನ್ನೆಲೆಯಲ್ಲಿ ಈಗಿರುವ ಸಂಶೋಧನೆಯ ಸ್ಥಿತಿಗತಿಯ ಕಾರಣದಿಂದಾಗಿ ಸ್ವಲ್ಪಮಟ್ಟಿಗೆ ಊಹಾತ್ಮಕವಾಗಿಯೇ ಈ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ನನ್ನ ಈ ಮೊದಲ ಭಾಷಣದ ವಿಷಯವಾಗಿದೆ.

ಈ ಕಾಲಘಟ್ಟಗಳನ್ನು ಕುರಿತು (ಮತ್ತು ಅದಕ್ಕಿಂತ ಹಿಂದಿನ ಕಾಲಘಟ್ಟಗಳನ್ನು ಕುರಿತಂತೆ ಕೊಟ್ಟ ಕೆಲವು ಕೊಡುಗೆಗಳನ್ನು ಕೂಡ ಅಲ್ಲಗಳೆಯದೆ ನೋಡಿದರೂ) ಜಾಗತಿಕ ಇತಿಹಾಸಕಾರರು ಅದ್ಭುತ ಕೆಲಸಮಾಡಿದ್ದಾರೆ: ಅಭಿಜಾತ ಕಾಲಾನಂತರ ಆಫ್ರೋ-ಯುರೇಶಿಯಾ ಸಮಾಜಗಳ ನಡುವೆ ನಾವು ಆಶ್ಚರ್ಯಪಡುವಷ್ಟು ಮಟ್ಟಿಗೆ ಇದ್ದ ಸಂಪರ್ಕಗಳ ಸಮೃದ್ಧತೆಯನ್ನು ಅವರು ಗುರುತಿಸಿದ್ದಾರೆ; ಹಿಂದೆ ವಿನಾಕಾರಣ ಅವಗಣನೆಗೆ ಒಳಗಾಗಿದ್ದ ಮುಸ್ಲಿಂ ಮತ್ತು ಚೀನಿ ಯಾತ್ರಿಕರ ಪ್ರವಾಸ ಕಥನಗಳನ್ನು ಮತ್ತು ಹೆಚ್ಚು ಪರಿಚಿತವಾದ ಐರೋಪ್ಯ ಪ್ರವಾಸಿಗರ ಕಥನಗಳನ್ನು ಕೂಡ ಅವರು ಮುನ್ನೆಲೆಗೆ ತಂದಿದ್ದಾರೆ; ಆಧುನಿಕ ಕಾಲದ ಆರಂಭದಲ್ಲಿ ಪಾಶ್ಚಾತ್ಯ ಜಗತ್ತಿನ ಉದಯದ ಮೇಲೆ ಕೊಟ್ಟ ಹೆಚ್ಚಿನ ಗಮನದ ಕಾರಣದಿಂದಾಗಿ, ಬೆಳಕಿಗೆ ಬಾರದೆ ಉಳಿದಿದ್ದ ದಕ್ಷಿಣ ಮತ್ತು ಅದರಲ್ಲೂ ಮುಖ್ಯವಾಗಿ ಪೂರ್ವ ಏಷ್ಯಾದ ಆರ್ಥಿಕತೆಗಳ ಪ್ರಭಾವಶಾಲಿ ಜೀವಂತಿಕೆಯನ್ನು ತೋರಿಸಿದ್ದಾರೆ; ಮಂಗೋಲರ ಕಾಲದ ಪ್ರಾಮುಖ್ಯವನ್ನು ಮತ್ತು ತದನಂತರ ಹದಿನೈದನೆಯ ಶತಮಾನದಲ್ಲಿ ನಡೆದ ಚೀನಿ ವ್ಯಾಪಾರಿಗಳ ಸಮುದ್ರಯಾನಗಳ ಪ್ರಾಮುಖ್ಯವನ್ನು ಕೂಡ ಮರುಮೌಲ್ಯಮಾಪನಕ್ಕೆ ಒಳಪಡಿಸಿದ್ದಾರೆ; ಈ ಪಟ್ಟಿಯನ್ನು ಇನ್ನೂ ಉದ್ದಕ್ಕೆ ಬೆಳೆಸಬಹುದು.[11] ಆದರೆ, ನನ್ನ ಅರಿವಿಗೆ ಬಂದಂತೆ, ಈ ಯಾವುದೇ ಕಥನಗಳಲ್ಲಿ ಬಾಲ್ಯದ ಇತಿಹಾಸಕಾರರು ಹೇಗೆ ಅಧುನಿಕಪೂರ್ವ ಶತಮಾನಗಳಲ್ಲಿ ಬಾಲ್ಯದ ಇತಿಹಾಸವನ್ನು ಬರೆಯುವಾಗ ಒಂದು ವಿಶಾಲ ಜಾಗತಿಕ ಇತಿಹಾಸದ ಪ್ರಸ್ತಾಪ ಮಾಡುವುದಿಲ್ಲವೋ ಹಾಗೆಯೇ ಜಾಗತಿಕ ಇತಿಹಾಸಕಾರರು ಬಾಲ್ಯದ ಬಗೆಗಾಗಲಿ ಮಕ್ಕಳ ಬಗೆಗಾಗಲಿ ಪ್ರಸ್ತಾಪಿಸುವುದಿಲ್ಲ. ಹಾಗಾದರೆ ನಾವು ಕೆಲವು ಅಗತ್ಯ ಕೊಂಡಿಗಳ ಹುಡುಕಾಟವನ್ನು ಅನ್ವೇಷಿಸಲು ಪ್ರಾರಂಭಮಾಡುವುದು ಹೇಗೆ?

ಕೃಷಿ-ಆಧಾರಿತ ಸಮುದಾಯಗಳಲ್ಲಿ ಬಾಲ್ಯದ ಸಾಮಾನ್ಯ ರೂಪುರೇಖೆಗಳನ್ನು ಅರ್ಥಮಾಡಿಕೊಳ್ಳುವುದು ಈ ದಿಕ್ಕಿನಲ್ಲಿ ನಾವು ಇಡಬಹುದಾದ ಮೊದಲ ಹೆಜ್ಜೆ.

---

[11] *Jerry Bentley, Old World Encounters: Cross-cultural Contacts and Exchanges in Pre-modern Times (New York: Oxford University Press, 1993); Ross Dunn, The Adventures of Ibn Battuta: A Muslim Traveler of the 14th Century(London: Croom Helm, 1986); J. L. Abu-Lughod, Before European Hegemony: The World System A.D. 1250–1350 (New York: Oxford University Press, 1989); Kenneth Pomeranz, The Great Divergence: Europe, China and the Making of the Modern World Economy (Princeton: Princeton University Press, 2000).*

ಇದು ಎರಡು ಹಂತಗಳ ಚರ್ಚೆಯನ್ನು ಒಳಕೊಳ್ಳುತ್ತದೆ. ಮೊದಲ ಹಂತದಲ್ಲಿ, ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಜೀವನ ಕ್ರಮದಿಂದ ಜನರು ಕೃಷಿ-ಆಧಾರಿತ ಜೀವನ ಕ್ರಮಕ್ಕೆ ಹೊರಳುವ ಸಂದರ್ಭದಲ್ಲಿ ಬಾಲ್ಯಕಾಲದ ಮೇಲೆ ಆದ ಪರಿಣಾಮಗಳನ್ನು ಕುರಿತ ಚರ್ಚೆ ನಡೆದರೆ, ಎರಡನೆ ಹಂತದಲ್ಲಿ, ಮಕ್ಕಳ ನೆಲೆಯಿಂದ ಕೃಷಿ ಆಧಾರಿತ ಸಮುದಾಯಗಳ ಬಗೆಗೆ ಗುಣಲಕ್ಷಣಗಳ ಕುರಿತಂತೆ ಕೆಲವು ಸಾರ್ವತ್ರೀಕರಣಗಳನ್ನು ಮಾಡಲಾಗುತ್ತದೆ.

ನಾವು ಈಗಾಗಲೇ ನೋಡಿದಂತೆ, ಜಾಗತಿಕ ಇತಿಹಾಸವನ್ನು 'ಬೃಹತ್ ಇತಿಹಾಸ' ಎಂದು ಕೂಡ ಪರಿಗಣಿಸುತ್ತೇವೆ. ಹಾಗಾಗಿ ಮಾನವ ಜನಾಂಗವು ಹಾದು ಬಂದ ಅಸಾಮಾನ್ಯ ಹೊಂದಾಣಿಕೆಗಳನ್ನು ಮುಂದಿಟ್ಟುಕೊಂಡು, ನಿರ್ದಿಷ್ಟ ಶತಮಾನಗಳಲ್ಲಿ ಅಥವಾ ದಶಕಗಳಲ್ಲಿ ನಿರ್ದಿಷ್ಟ ಜನಸಮುದಾಯಗಳ ಗುಣಲಕ್ಷಣಗಳನ್ನು ಅವಲೋಕಿಸಿ, ಅವುಗಳನ್ನು ವಿಶದವಾಗಿ ಅರ್ಥಮಾಡಿಕೊಳ್ಳುವುದು ಹೆಚ್ಚು ಉಪಯೋಗಕಾರಿಯಾದರೂ, ಅದಕ್ಕಿಂತ ಮೊದಲು ನಾವು ಈ ಅಧ್ಯಯನಕ್ಕೆ ಹಿನ್ನೆಲೆಯಾಗಿ ಒಂದು ವಿಶಾಲವಾದ ಸಂದರ್ಭವನ್ನು ಗುರುತಿಸಿಕೊಳ್ಳುವುದು ಮುಖ್ಯ.[12] ಅವಶ್ಯವಾದ ಮಾಹಿತಿಯ ಕೊರತೆಯ ಹೊರತಾಗಿಯೂ, ಒಂದು ವೇಳೆ ನಾವು ಬಾಲ್ಯಾವಸ್ಥೆಯ ಒಂದು ಪೂರ್ಣಪ್ರಮಾಣದ ಬೃಹತ್ ಇತಿಹಾಸವನ್ನೇ ರಚಿಸುವ ಪ್ರಯತ್ನ ಮಾಡುವುದಾದರೆ, - ಅಂತಹ ಪ್ರಯತ್ನಕ್ಕೆ ಅಗತ್ಯವಾದ ಮೂಲಜ್ಞಾನವನ್ನು ನಾನು ಹೊಂದಿಲ್ಲ - ನಾವು ವಾನರ ಜೀವಿಯ ವಿಕಾಸದ ಮೈಲುಗಲ್ಲುಗಳನ್ನು ಅವಲೋಕಿಸುವುದರಿಂದ ಪ್ರಾರಂಭಮಾಡಬೇಕಾಗುತ್ತದೆ. ಇದಕ್ಕೆ ಒಂದು ಪ್ರಮುಖ ಉದಾಹರಣೆಯೆಂದರೆ, ಮಗುವಿಗೆ ಮೊಲೆಹಾಲು ಬಿಡಿಸುವುದಕ್ಕೂ ಮತ್ತು ಮಗುವಿಗೆ ದಂತಾಂಕುರವಾಗುವುದಕ್ಕೂ ಇರುವ ಪರಸ್ಪರ ಸಂಬಂಧದಲ್ಲಿ ವಾನರರುಗಳಿಗಿಂತ ಯಾವ ಹಂತದಲ್ಲಿ ಮಾನವ ಜಾತಿಯು ಭಿನ್ನವಾಗಲು ಪ್ರಾರಂಭವಾಯಿತು? ಎಳೆಯ ವಾನರ ಕೂಸಿಗೆ ತಾಯಿಯ ಹಾಲು ಬಿಡಿಸಿದ ಕೂಡಲೆ ವಯಸ್ಕ ಹಲ್ಲು ಮೂಡಲು ಪ್ರಾರಂಭವಾಗುತ್ತದೆ, ಆದರೆ, ಮಾನವ ಮಕ್ಕಳಲ್ಲಿ ಹಲ್ಲು ಮೂಡಲು ಮತ್ತೂ ಸಮಯ ಹಿಡಿಯುತ್ತದೆ (ಮೊಲೆ ಹಾಲು ಬಿಡಿಸುವ ವಯಸ್ಸು ಕೂಡ ಸಮಾಜದಿಂದ ಸಮಾಜಕ್ಕೆ ಬದಲಾಗುತ್ತದೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು). ಇದರ ಅರ್ಥ, ಬಾಲವಿಲ್ಲದ ಕೋತಿಯ ಶಿಶು ಮೊಲೆ ಹಾಲು ಬಿಡಿಸಿದ ಕಾಲದಿಂದ ಕಲಿಯಲು ಬಹಳಷ್ಟಿದ್ದರೂ, ಆಹಾರ ಸಂಪಾದನೆ ಕಾರ್ಯದಲ್ಲಿ ಮಾತ್ರ ವಯಸ್ಕ ಎಂದು ಪರಿಗಣಿತವಾಗುತ್ತದೆ, ಆದರೆ ಮಾನವ ಶಿಶುವು ಪೋಷಣೆಗೆ ಹಿರಿಯರನ್ನು ಇನ್ನೂ ಹೆಚ್ಚು ಕಾಲ ಅವಲಂಬಿಸಿರುತ್ತದೆ. ಬೃಹತ್ ಇತಿಹಾಸವು ಮಾನವ ಜನಾಂಗ ಮತ್ತು ಇತರ ವಾನರಗಳ ಲೈಂಗಿಕ ವ್ಯತ್ಯಾಸಗಳ ಬಗೆಗೆ ಬೆಳಕು ಚೆಲ್ಲಬಲ್ಲುದು. ಇತರ ಪ್ರಾಣಿಗಳಲ್ಲಿ ನಿರ್ದಿಷ್ಟ ಋತುಗಳಲ್ಲಿ ಮಾತ್ರ ಲೈಂಗಿಕ ಆಕರ್ಷಣೆ ಅಥವಾ ಬೆದೆ ಕಂಡುಬಂದರೆ ಮನುಷ್ಯರು ಯಾವಾಗ ಬೇಕಾದರೂ ಲೈಂಗಿಕ ಉದ್ರೇಕಕ್ಕೆ ಒಳಗಾಗುತ್ತಾರೆ – ಇದು ಎಳೆಯರಲ್ಲಿ ಲೈಂಗಿಕ ವರ್ತನೆಗಳನ್ನು ನಿಯಂತ್ರಿಸುವ ವಿಷಯಕ್ಕೆ ಬಂದಾಗ ಸಾಮಾಜಿಕವಾಗಿ ಪರಿಗಣಿಸಬೇಕಾದ ಪ್ರಮುಖ ಅಂಶವಾಗುತ್ತದೆ.[13] ಮಾನವ

[12] *David Christian, Maps of Time: An Introduction to Big History (Berkeley: University of California Press, 2004).*
[13] *Lionel Tiger, Men in Groups (New York: Random House, 1969).*

ಜನಾಂಗದ ಬಾಲ್ಯಕಾಲದ ಪೂರ್ಣ ಇತಿಹಾಸಕ್ಕೆ ಸಂಬಂಧಪಟ್ಟಂತೆ ವಿಕಾಸದ ಇತರ ಘಟ್ಟಗಳನ್ನು ಕೂಡ ನಾವು ನಿಸ್ಸಂಶಯವಾಗಿ ಪರಿಗಣಿಸಬೇಕು. ಆದರೆ ಬಹುತೇಕ ಜಾಗತಿಕ ಇತಿಹಾಸಕಾರರು ತಮ್ಮ ಕಥಾನಕವನ್ನು ಅಷ್ಟೊಂದು ಹಿಂದಕ್ಕೆ ತೆಗೆದುಕೊಂಡು ಹೋಗುವುದಿಲ್ಲ ಮತ್ತು ನಾವು ಜಾಗತಿಕ ಇತಿಹಾಸ ಮತ್ತು ಬಾಲ್ಯದ ಇತಿಹಾಸದ ನಡುವಿನ ಸಂಬಂಧವನ್ನು ಈ ರೀತಿ ಕಲ್ಪಿಸಬೇಕಾಗಿಯೂ ಇಲ್ಲ.

ಬೇಟೆಯಾಡಿ ಬದುಕುತ್ತಿದ್ದ ಜನರು ನಿಧಾನವಾಗಿ ಒಂದು ಪ್ರದೇಶದಲ್ಲಿ ನೆಲೆನಿಲ್ಲಲು ಪ್ರಾರಂಭಮಾಡಿ, ವ್ಯವಸಾಯದಲ್ಲಿ ತೊಡಗಿಕೊಂಡಿದ್ದು ಮಾನವ ಜನಾಂಗದ ವಿಕಾಸದ ಮೊದಲ ಮೈಲಿಗಲ್ಲು ಎಂಬುದನ್ನು ಜಾಗತಿಕ ಇತಿಹಾಸಕಾರರೂ ಕೂಡ ಒಪ್ಪುತ್ತಾರೆ. ಈ ಪ್ರಕ್ರಿಯೆಯು ಸುಮಾರು 10,000 ವರ್ಷಗಳ ಹಿಂದೆ ಉತ್ತರ ಮಧ್ಯಪ್ರಾಚ್ಯ – ಕಪ್ಪು ಸಮುದ್ರ ಪ್ರಾಂತ್ಯದಲ್ಲಿ ಆರಂಭವಾಗಿ ನಿಧಾನವಾಗಿ ಆಫ್ರೋ-ಯುರೇಶಿಯಾದ ಇತರ ಪ್ರಾಂತ್ಯಗಳಿಗೆ ಪಸರಿಸಿದ್ದಲ್ಲದೆ, ಸ್ವಲ್ಪ ಸಮಯದಲ್ಲಿ ಕನಿಷ್ಠ ಇತರ ಇನ್ನು ಎರಡು ಕಡೆ ಸ್ವತಂತ್ರವಾಗಿ ಹುಟ್ಟಿಕೊಂಡಿತು.[14] ಮನುಷ್ಯ ಲಿಪಿಯನ್ನು ಕಂಡುಹಿಡಿಯುವುದಕ್ಕೆ ಮೊದಲು ಜರುಗಿದ ಆರಂಭಿಕ ಪರಿವರ್ತನೆಗಳ ವಿವರವಾದ ದಾಖಲೆಗಳು ಲಭ್ಯವಿಲ್ಲ, ನಿಜ. ಆದರೂ ಕೆಲವು ಪ್ರಮುಖ ಬದಲಾವಣೆಗಳು ಬಲವಾಗಿದ್ದು, ಇನ್ನೂ ಹೆಚ್ಚಿನ ಪರಿಣಾಮವನ್ನು ಹೊಂದಿರುತ್ತವೆ.

ಮಕ್ಕಳ ಜನನ ಪ್ರಮಾಣದಲ್ಲಿನ ಬದಲಾವಣೆಯು ಬಾಲ್ಯವನ್ನು ಮರುಪರಿಶೀಲನೆಗೆ ಒಡ್ಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಸಮುದಾಯಗಳು ದೀರ್ಘಕಾಲ, ಕೆಲವೊಮ್ಮೆ ಸುಮಾರು ನಾಲ್ಕು ವರ್ಷಗಳಿಗೂ ಹೆಚ್ಚಿನ ಕಾಲ ಸ್ತನ್ಯಪಾನ ಮಾಡಿಸುವ ಮೂಲಕ ಸಾಮಾನ್ಯವಾಗಿ ಜನನ ಪ್ರಮಾಣವನ್ನು ಕಡಿಮೆ ದರದಲ್ಲಿ ಇಡಲು ಪ್ರಯತ್ನಿಸುತ್ತಿದ್ದವು. ಸ್ತನ್ಯಪಾನವು ಸಂಪೂರ್ಣವಾಗಿ ಗರ್ಭಧಾರಣೆಯನ್ನು ನಿಯಂತ್ರಿಸುವುದಿಲ್ಲವಾದರೂ, ಸಾಕಷ್ಟು ಮಟ್ಟಿಗೆ ಅದು ವಿಳಂಬವಾಗುವಂತೆ ಮಾಡುತ್ತದೆ. ಇದು ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಸಮುದಾಯಗಳಿಗೆ ಸ್ಪಷ್ಟವಾಗಿ ತಿಳಿದಿದ್ದ ಕಾರಣ ಅದಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿದ್ದವು. ಪೌಷ್ಟಿಕ ಆಹಾರದ ಕೊರತೆ, ಶಿಶು ಹತ್ಯೆ ಮತ್ತು ಕೆಲವೊಂದು ಸಂದರ್ಭಗಳಲ್ಲಿ ಗಿಡಮೂಲಿಕೆಗಳನ್ನು ಬಳಸಿ ಮಾಡುತ್ತಿದ್ದ ಗರ್ಭಪಾತ - ಇವುಗಳಿಂದ ಜನನ ಪ್ರಮಾಣವು ಕಡಿಮೆ ಮಟ್ಟದಲ್ಲಿತ್ತು. ಬಹಳಷ್ಟು ಅಲೆಮಾರಿ ಸಮುದಾಯಗಳು ಕೂಡ ಇದೇ ಮಾದರಿಯ ನಿಯಂತ್ರಣ ವಿಧಾನಗಳನ್ನು ವ್ಯಾಪಕವಾಗಿ ಬಳಸುತ್ತಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಹೆರುವುದರಿಂದ ಇರುವ ಸೀಮಿತ ಆಹಾರ ಸಂಪನ್ಮೂಲದ ಕೊರತೆಯನ್ನು ತಡೆಯುವುದು ಈ ಕ್ರಮಗಳ ಹಿಂದಿನ ಉದ್ದೇಶವಾಗಿತ್ತು. ಆಹಾರ ಸಂಗ್ರಹಣೆಯಲ್ಲಿ ಮಕ್ಕಳಿಂದ ಸ್ವಲ್ಪ ಮಟ್ಟಿಗೆ ಸಹಾಯ ಆಗುತ್ತಿದ್ದರೂ, ಅದು ಕುಟುಂಬದ ಆರ್ಥಿಕತೆಗೆ ಪೂರಕವಾಗಿತ್ತೇ ಹೊರತು,

---

[14] *Jared Diamond, Guns, Germs and Steel: The Fates of Human Societies (New York: Spark Publishers, 2003); John Mears, Agricultural Origins in Perspective (Washington, D.C.: American Historical Association, 2003); Brian Fagan, Peoples of the Earth (Boston: Little, Brown & Co., 1983).*

ಅದು ಮಕ್ಕಳಿಗೆ ಸಾಕಾಗುವಷ್ಟು ಆಹಾರವು ಕೂಡಾ ದೊರೆಯುತ್ತಿರಲಿಲ್ಲ .ಅಷ್ಟೇ ಅಲ್ಲದೆ, ಈ ಸಮಾಜಗಳಲ್ಲಿ ಮಕ್ಕಳನ್ನು ಕಾರ್ಮಿಕರನ್ನಾಗಿ ತೊಡಗಿಸಿಕೊಳ್ಳುವಂತಹ ಅವಕಾಶವೂ ಇರಲಿಲ್ಲ. ಬೇಟೆಯಾಡಿ ಜೀವನ ಸಾಗಿಸುವ ಸಮಕಾಲೀನ ಸಮುದಾಯಗಳ ಬಗೆಗೆ ನಡೆಸಿದ ಅಧ್ಯಯನಗಳ ಪ್ರಕಾರ ಸಾಮಾನ್ಯವಾಗಿ ಮಕ್ಕಳು ಹದಿನಾಲ್ಕನೆಯ ವರ್ಷದ ತನಕ ಯಾವುದೇ ಶ್ರಮದ ಕೆಲಸದಲ್ಲಿ ತೊಡಗುವುದಿಲ್ಲ ಅಥವಾ ಕೆಲಸದಲ್ಲಿ ತೊಡಗಿಕೊಂಡರೂ, ಅವರಿಂದ ಸಹಾಯವಾಗುವ ಬದಲು ಕೆಲಸಕ್ಕೆ ತೊಡಕೇ ಆಗಿ ಉತ್ಪಾದನಾ ಸಾಮರ್ಥ್ಯವನ್ನು ಕಡಿಮೆಯಾಗುತ್ತದೆ ಎಂಬುದನ್ನು ತೋರಿಸುತ್ತಿದೆ. ಇದಕ್ಕೆ ಸಂಬಂಧಿಸಿದ ಇನ್ನೊಂದು ವಿಷಯವೆಂದರೆ ಆಗಾಗ್ಗೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗುವ ಸಮುದಾಯಗಳಲ್ಲಿ, ಒಂದು ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಎಳೆಯ ಮಕ್ಕಳಿದ್ದರೆ ಅವರನ್ನು ನೋಡಿಕೊಳ್ಳುವುದು ಕಷ್ಟವಾಗುತ್ತಿತ್ತು. ಇದರಿಂದಾಗಿ ಮಾನವನ ಪ್ರಾಥಮಿಕ ಆರ್ಥಿಕ ಹಂತದಲ್ಲಿ ಮಕ್ಕಳು ಒಂದು ಹೊರೆಯಾಗಿದ್ದರು ಎಂದೇ ಹೇಳಬಹುದು. ಇದೇ ರೀತಿಯಾಗಿ ಮಕ್ಕಳು ಆರ್ಥಿಕವಾಗಿ ಸಬಲರಾಗುವ ವಯಸ್ಸಿಗೆ ಬಂದಾಗ ಅದರಲ್ಲೂ ಮುಖ್ಯವಾಗಿ ಗಂಡುಮಕ್ಕಳಿಗೆ, ಅವರು ಬೇಟೆಯಾಡಲು ಸಮರ್ಥರಾಗುವ ಕಾರಣಕ್ಕೆ ಅವರಿಗಾಗಿ ಹಲವು ಸಾಂಪ್ರದಾಯಿಕ ವಿಧಿ ವಿಧಾನಗಳನ್ನು, ಪರೀಕ್ಷೆಗಳನ್ನು ನಡೆಸಿ ಸಂಭ್ರಮಗಳನ್ನು ನೆರವೇರಿಸಲಾಗುತ್ತಿತ್ತು. ಸ್ತನ್ಯಪಾನದ ಕಾಲ ಸುದೀರ್ಘವಾಗುವ ಕಾರಣಕ್ಕೆ ವಯಸ್ಕ ಗಂಡುಮಕ್ಕಳು ತಮ್ಮ ತಾಯಿಯಿಂದ ದೂರವಾಗಬೇಕಾದ ಕಾಲ ಬಂದಿದೆ ಎಂದು ತಿಳಿಯಪಡಿಸಬೇಕಾದ ಅಗತ್ಯವೂ ಕಂಡುಬಂದಿರಬಹುದು. ಈ ರೀತಿಯ ತಂದೆತಾಯಿ-ಬಾಲಕ ಸಂಬಂಧದ ಪರಿಣಾಮ ಏನಾಗಿರಬಹುದು ಎಂದು ಊಹಿಸುವುದು ಕುತೂಹಲಕರವೇ ಸರಿ.[15]

ಕೃಷಿ-ಆಧಾರಿತ ಆರ್ಥಿಕತೆಯದ್ದು ಬೇರೆಯೇ ಕಥೆ. ಇಲ್ಲಿ ಮಕ್ಕಳು ಕೌಟುಂಬಿಕ ಕಾರ್ಮಿಕ ಶಕ್ತಿಯ ಮುಖ್ಯ ಭಾಗವಾಗುತ್ತಿದ್ದರು. ಎಳೆಯ ಮಕ್ಕಳನ್ನು, ಅವರಿಗೆ ಐದಾರು ವರ್ಷ ಆಗಿ, ಅವರು ಕೆಲಸಕ್ಕೆ ತೊಡಗುವ ತನಕ ಅವರನ್ನು ಬೆಳೆಸುವುದರಲ್ಲಿ ಖರ್ಚಿನ ಬಾಬತ್ತು ಇರಲಿಲ್ಲವೆಂದಲ್ಲ. ಮಕ್ಕಳಿಗೆ ಹದಿಮೂರು-ಹದಿನಾಲ್ಕು ವರ್ಷ ಆಗುವ ತನಕ ಅವರು ತಮ್ಮನ್ನು ತಾವೇ ಸಾಕಿಕೊಳ್ಳುವಷ್ಟು ಸಮರ್ಥರಾಗುತ್ತಿರಲಿಲ್ಲ, ಆದರೆ ಹದಿನೈದು ಹದಿನಾರು ಆಗುವಷ್ಟರಲ್ಲಿ ಅವರು ಜಮೀನಿನಲ್ಲಿ ದುಡಿದು ಹಾಗೂ ಮನೆಯ ಒಳಹೊರ ಕೆಲಸಗಳನ್ನು ನಿರ್ವಹಿಸುವ ಮೂಲಕ ಕೌಟುಂಬಿಕ ಆರ್ಥಿಕತೆಗೆ ತಮ್ಮ ಕೊಡುಗೆಯನ್ನು ಕೊಡುವಷ್ಟು ಸಮರ್ಥರಾಗುತ್ತಿದ್ದರು. ಮಕ್ಕಳ ಕೆಲಸಗಳ ಕುರಿತಾಗಿನ ವ್ಯಾಖ್ಯೆಕೂಡ ಇದಕ್ಕೆ ತಕ್ಕಂತೆ ಬದಲಾಗತೊಡಗಿದವು ಮತ್ತು ಸ್ತನ್ಯಪಾನದ ಅವಧಿಯನ್ನು 18-24 ತಿಂಗಳಿಗೆ ಇಳಿಸಿದುದು ಜನನ ಪ್ರಮಾಣದ ಏರಿಕೆಗೆ ಭಾಗಶಃ ಕಾರಣವಾಯಿತು. ಆದರೆ ಹೆಚ್ಚಿನ ಪ್ರಮಾಣದ ಸಂತಾನಶೀಲತೆ ಇನ್ನೂ ಅನಪೇಕ್ಷಣೀಯವಾಗಿತ್ತು. ಕೆನಡಾ ದೇಶದಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆಯಿಂದ ಇಪ್ಪತ್ತನೆಯ ಶತಮಾನದ ಆರಂಭದವರೆಗೂ ನಾವು ನೋಡುವ ಹಟ್ಟೆರೈಟ್ ಧಾರ್ಮಿಕ ಗುಂಪಿನಲ್ಲಿ ಒಂದು

[15] *Tiger, Men in Groups.*

ಕುಟುಂಬದ ಸಂಪೂರ್ಣ ಸಂತಾನಶೀಲತೆ ಸರಾಸರಿ ಹನ್ನೆರಡರಿಂದ ಹದಿನಾಲ್ಕು ಮಕ್ಕಳ ತನಕ ಇರುತ್ತಿತ್ತು. ಆದರೆ ಕೃಷಿ-ಆಧಾರಿತ ಕುಟುಂಬಗಳು ಇದನ್ನು ಅನುಸರಿಸಲಿಲ್ಲ. ಏಕೆಂದರೆ, ಮಕ್ಕಳ ಸಂಖ್ಯೆ ಏಳಕ್ಕಿಂತ ಹೆಚ್ಚಾದರೆ ಅದು ಉತ್ಪಾದನೆ ಮತ್ತು ಆಸ್ತಿಯ ಮೇಲಿನ ಹೆಚ್ಚಿನ ಹೊರೆ ಹೊರಿಸುತ್ತಿತ್ತು. ಹಾಗಾಗಿ, ಹೆಚ್ಚಿನ ಕುಟುಂಬಗಳಿಗೆ ದೀರ್ಘಕಾಲೀನ ಸ್ತನ್ಯಪಾನ, ಹದಿಹರೆಯದವರ ಲೈಂಗಿಕ ಚಟುವಟಿಕೆಗಳ ನಿಯಂತ್ರಣ ಮತ್ತು ದಂಪತಿಗಳು ತಮ್ಮ ಮೂವತ್ತು ಅಥವಾ ನಲವತ್ತನೆಯ ವಯಸ್ಸಿಗೆ ಸಂತಾನ ಪ್ರಕ್ರಿಯೆಯು ನಿಧಾನಗತಿ ತಲುಪುವದು - ಇವುಗಳಿಂದ ಕುಟುಂಬದ ಗಾತ್ರವನ್ನು ಮಿತಿಯೊಳಗೆ ಇಡಲು ಸಾಧ್ಯವಾಗುತ್ತಿತ್ತು. (ಇಲ್ಲಿ ಕೂಡ ಸಂತಾನಾಭಿವೃದ್ಧಿಯ ಚಕ್ರದಲ್ಲಿ, ತಂದೆತಾಯಿಗಳಿಗೆ ವಯಸ್ಸಾಗುತ್ತಿದ್ದಂತೆ ತಮ್ಮನ್ನು ನೋಡಿಕೊಳ್ಳಲು ಒಂದು ಮಗುವು ತಡವಾಗಿ ಹುಟ್ಟುವುದು ಅಪೇಕ್ಷಣೀಯವಾಗಿತ್ತು; ಇಲ್ಲಿ ನಮಗೆ ಮಕ್ಕಳು ಮಾಡಬೇಕಾದ ಇನ್ನೊಂದು ಕೆಲಸದ ಸೂಚನೆ ಸಿಗುತ್ತದೆ.). ಆಧುನಿಕಪೂರ್ವ ಜರ್ಮನ್ನರು ಈ ರೀತಿ ತಡವಾಗಿ ಹುಟ್ಟುವ ಮಗುವಿಗೆ ಇಟ್ಟ ಹೆಸರೇ ವುನ್ಶ್ ಕಿಂಡ್ (Wunschkind) ಎಂದು, ಅಂದರೆ ಅದರ ಅರ್ಥ ಅಪೇಕ್ಷಣೀಯ ಮಗು.). ಹೀಗೆ ಕೃಷಿ-ಆಧಾರಿತ ಜೀವನಪದ್ಧತಿ ಬೆಳೆಯುತ್ತಾ ಹೋದಂತೆ, ಬಾಲ್ಯದ ಪ್ರಕ್ರಿಯೆಯಲ್ಲಿ ಕೂಡ ಸಾಕಷ್ಟು ಗುಣಾತ್ಮಕ ಮತ್ತು ಪರಿಮಾಣಾತ್ಮಕ ಬದಲಾವಣೆಗಳು ಆಗುತ್ತಾ ಹೋದವು. ಹಾಗೆಯೇ ಮನುಷ್ಯನ ಜೀವಿತಾವಧಿಯಲ್ಲಿ ಹೆಚ್ಚಳವಾಗುತ್ತಾ ಹೋದಂತೆ, ಕುಟುಂಬದಲ್ಲಿ ಅಜ್ಜ ಅಜ್ಜಿಯರು ಮತ್ತು ಮಕ್ಕಳು ಒಂದೇ ಕಾಲಘಟ್ಟದಲ್ಲಿ ಇರತೊಡಗಿ, ಮಕ್ಕಳ ಪಾಲನೆ ಪೋಷಣೆಯಲ್ಲಿ ಹೆಚ್ಚಿನ ಸಹಾಯ ದೊರಕತೊಡಗಿತು ಮತ್ತು ಇದು ಬಾಲ್ಯದ ಅನುಭವಗಳನ್ನು ಇತರ ರೀತಿಯಲ್ಲಿ ಕೂಡ ಬದಲಾಯಿಸಿತು.[16]

ಇದೇ ರೀತಿಯಾಗಿ, ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಸಮುದಾಯಗಳಿಗಿಂತ ಭಿನ್ನವಾಗಿ ಕೃಷಿ-ಆಧಾರಿತ ಸಮುದಾಯಗಳಲ್ಲಿ ಎಳವೆಯಿಂದಲೇ ಮಕ್ಕಳು ವ್ಯಾಪಕವಾಗಿ ದುಡಿಮೆಯಲ್ಲಿ ತೊಡಗಿಕೊಳ್ಳುತ್ತಿದ್ದ ಕಾರಣದಿಂದಾಗಿ ಅವರು ವಯಸ್ಕರು ಎಂದು ಎನಿಸಿಕೊಳ್ಳುವ ಮಾನಸಿಕ ಸ್ಥಿತಿಗಳಲ್ಲಿಯೂ ಬದಲಾವಣೆಯಾಗಿ, ಮಕ್ಕಳು ಆ ಹಂತವನ್ನು ತಲುಪುವುದು ಒಂದು ಅಸ್ಪಷ್ಟ ಪ್ರಕ್ರಿಯೆಯಾಗಿ ಬದಲಾಯಿತು. ಕೃಷಿ-ಆಧಾರಿತ ಸಮುದಾಯಗಳಲ್ಲಿ ಕುಶಲಕರ್ಮಿಗಳ ಮಕ್ಕಳ ಶಿಷ್ಯವೃತ್ತಿ ಔಪಚಾರಿಕವಾಗಿ ಮುಗಿಯುತ್ತಿದ್ದರೂ, ಕೃಷಿ ಕುಟುಂಬಗಳಲ್ಲಿ ಇದು ವಿಶೇಷವಾಗಿ ಗಮನಕ್ಕೆ ಬಾರದ ಪ್ರಕ್ರಿಯೆಯಾಗಿರುತ್ತಿತ್ತು. ಮಕ್ಕಳು ಹೆಚ್ಚಿನ ಸಂದರ್ಭಗಳಲ್ಲಿ ಧಾರ್ಮಿಕ ಪ್ರಬುದ್ಧತೆಯನ್ನು ಪಡೆಯುವುದು ಸಾಮಾನ್ಯವಾಗಿ ಸುಮಾರು ಹದಿಮೂರು ವರ್ಷ ಆಗುವಷ್ಟರಲ್ಲಿ. ಇದು ಕೆಲವು ಸಾಮಾನ್ಯವಾದ ಧಾರ್ಮಿಕ ಪರೀಕ್ಷಾ ವಿಧಿ ಮತ್ತು ಅಂಗೀಕಾರ ಪ್ರಕ್ರಿಯೆಗಳ ಮೂಲಕ ನಡೆಯುತ್ತಿತ್ತು. ಈ ಪ್ರಕ್ರಿಯೆಗಳು ಮುಖ್ಯವೂ, ಗಂಭೀರವೂ ಆಗಿದ್ದರೂ, ಇದಕ್ಕೂ ಆರ್ಥಿಕ ವಿಷಯಗಳಿಗೂ ಸಂಬಂಧವಿರುತ್ತಿರಲಿಲ್ಲ ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಆರ್ಥಿಕ ವಿಷಯಗಳಲ್ಲಿ ಅವರ ಪ್ರಬುದ್ಧತೆಯ ಗಡಿಯನ್ನು ಗುರುತಿಸುತ್ತಿರಲಿಲ್ಲ. ಆರ್ಥಿಕ ವಿಷಯಗಳಲ್ಲಿ ಪ್ರಬುದ್ಧತೆಯ ಅಳತೆಗೋಲು ಸಾಮಾನ್ಯವಾಗಿ, ಮದುವೆಯಾಗುವ

[16] *Louis Henry, "Some Data on Natural Fertility," Eugenics Quarterly 8 (1961): 81–91; Henri Léridon, Human Fertility: The Basic Components, trans. Judith F. Helzner (Chicago: University of Chicago Press, 1977)*

ಮತ್ತು/ಅಥವಾ ತನ್ನದೇ ಕುಟುಂಬವನ್ನು ರೂಪಿಸುವ ಸಾಮರ್ಥ್ಯದ ಮೇಲೆ ಅವಲಂಬಿತವಾಗಿತ್ತು. ಇದು ಹೆಚ್ಚಾಗಿ ಸಾಮಾಜಿಕ ವರ್ಗ, ಲಿಂಗ ಮತ್ತು ಆಯಾ ಸಮುದಾಯಗಳ ಪದ್ಧತಿಗಳಿಗನುಸಾರವಾಗಿ ಭಿನ್ನವಾಗಿರುತ್ತಿತ್ತು. ವಯಸ್ಸಿಗೆ ಬಂದ ಮಕ್ಕಳನ್ನು ಕೆಲಸಕ್ಕಾಗಿ ಅವಲಂಬಿಸಬೇಕಾದ ಆವಶ್ಯಕತೆ ಇದ್ದ ಕಾರಣಕ್ಕಾಗಿ ಕೃಷಿ-ಆಧಾರಿತ ಸಮುದಾಯಗಳಲ್ಲಿ, ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಸಮುದಾಯಗಳಿಗಿಂತ ಹೆಚ್ಚಾಗಿ ಪ್ರೌಢಾವಸ್ಥೆಯ ಕಾಲವು ಹೆಚ್ಚಿನ ರೀತಿಯಲ್ಲಿ ಭಿನ್ನವಾಗಿರುತ್ತಿತ್ತು.

ಹೆಚ್ಚಿನ ಪ್ರಮಾಣದ ಬಾಲಕಾರ್ಮಿಕ ಪದ್ಧತಿಯ ಆಚರಣೆಯ ಕಡೆಗೆ ಆದ ಸ್ಥಿತ್ಯಂತರವನ್ನು ಚರ್ಚಿಸಿದ ಅನಂತರ, ಬದಲಾವಣೆಗಳು ಕೃಷಿ ಸಮಾಜಗಳಲ್ಲಿದ್ದ ಬಾಲ್ಯವನ್ನು ನೋಡುವ ದೃಷ್ಟಿಯನ್ನು ಮತ್ತೊಮದು ಬಗೆಯಲ್ಲಿ ವಿಶ್ಲೇಷಣಾತ್ಮಕವಾಗುವಂತೆ ಮಾಡಿದವು. ಪ್ರೌಢ ವಯಸ್ಕರಾದ ಮಕ್ಕಳಿಗೆ ಸಂಬಂಧಿಸಿದಂತೆ ಚರ್ಚೆಯ ಮುಖ್ಯ ವಿಷಯವು ದುಡಿಮೆ ಮತ್ತು ಪ್ರಾಬಲ್ಯಕ್ಕೆ ಸಂಬಂಧಪಟ್ಟದ್ದಾಗಿದ್ದರೆ, ಕಿರಿಯ ಮಕ್ಕಳಿಗೆ ಸಂಬಂಧಿಸಿದಂತೆ ಅದು ಅಪೇಕ್ಷಿತ ಮಕ್ಕಳ ಸಂಖ್ಯೆ ಮತ್ತು ಸಂತಾನ ನಿಯಂತ್ರಣದ ನಡುವಿನ ಸೂಕ್ಷ್ಮ ಸಮತೋಲನವನ್ನು ಕುರಿತಾಗಿತ್ತು; ಈ ಎರಡೂ ಸಂದರ್ಭಗಳ ಲೆಕ್ಕಾಚಾರದಲ್ಲಿಯೂ ಕೂಡ ಮಗುವಿನ ಲಿಂಗ ಒಂದು ಪ್ರಮುಖವಾಗಿ ಪರಿಗಣಿಸಬೇಕಾದ ಅಂಶವಾಗಿತ್ತು.

ಮಕ್ಕಳ ಸಂಖ್ಯೆ ಹೆಚ್ಚಿದಂತೆ ಕುಟುಂಬದ ಮೇಲಿನ ಆರ್ಥಿಕ ಹೊರೆ ಕೂಡ ಹೆಚ್ಚಾಗುತ್ತದೆ ಎಂಬ ಸ್ಪಷ್ಟ ಅರಿವಿನ ಕಾರಣಕ್ಕೆ ಹೆಚ್ಚಿನ ಕೃಷಿ-ಆಧಾರಿತ ಕುಟುಂಬಗಳಲ್ಲಿ, ನಿರ್ದಿಷ್ಟವಾಗಿ ಸಂತಾನಾಭಿವೃದ್ಧಿಯ ಸಾಮರ್ಥ್ಯ ಇಲ್ಲದಿದ್ದ ಸಂದರ್ಭಗಳನ್ನು ಹೊರತು ಪಡಿಸಿ, ಜನನ ಪ್ರಮಾಣದ ನಿಯಂತ್ರಣ ಮತ್ತು ಭಾವನಾತ್ಮಕ ಹಾಗೂ ಲೈಂಗಿಕ ಆಸೆಗಳ ಮೇಲಿನ ಹತೋಟಿ ಒಂದು ಸವಾಲಾಗಿತ್ತು. ಇಲ್ಲಿ ವರ್ಗದ ಪ್ರಶ್ನೆ ಕೂಡ ಪ್ರವೇಶಿಸಿತು. ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಸಣ್ಣ ಕೃಷಿಕರು ಮತ್ತು ಕುಶಲಕರ್ಮಿಗಳಿಗಿಂತ ಕೃಷಿ-ಆಧಾರಿತ ಸಮುದಾಯಗಳಲ್ಲಿದ್ದ ಶ್ರೀಮಂತರು ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಹಡೆದು ಬೆಳೆಸಬಲ್ಲವರಾಗಿದ್ದರು ಮತ್ತು ಅದನ್ನು ಅವರು ಮಾಡುತ್ತಿದ್ದರು ಕೂಡ. ಇದರಿಂದಾಗಿ ಉತ್ತರಾಧಿಕಾರಿಗಳನ್ನು ನೇಮಿಸುವುದು ಮತ್ತು ಪೂರಕ ನೇಮಕಾತಿಗಳನ್ನು ಮಾಡುವುದು ಮತ್ತು ಮದುವೆ ಸಂಬಂಧಗಳನ್ನು ಸ್ಥಾಪಿಸುವುದು ಮತ್ತು ತನ್ಮೂಲಕವಾಗಿ ತಮ್ಮ ಸಂತಾನಾಭಿವೃದ್ಧಿಯ ಸಾಮರ್ಥ್ಯವನ್ನು ಸ್ಪಷ್ಟವಾಗಿ ಪ್ರದರ್ಶಿಸುವುದು ಅವರಿಗೆ ಸುಲಭವಿತ್ತು. ಹೆಚ್ಚು ಮಕ್ಕಳಿರುವುದು ಮೇಲ್ವರ್ಗದ ಸ್ಥಾನಮಾನವನ್ನು ಹೆಚ್ಚಿಸುವುದಕ್ಕಲ್ಲದೆ, ಅದನ್ನು ಪ್ರದರ್ಶಿಸಲು ಕೂಡ ಅನುಕೂಲವಾಗಿತ್ತು. ಹೆಚ್ಚಿನ ಸಮುದಾಯಗಳು ಈ ಸಮೃದ್ಧಿಯನ್ನು ಬಹುಪತ್ನಿತ್ವ ಮತ್ತು ಉಪಪತ್ನಿತ್ವದ ಮೂಲಕ ಮುಂದುವರಿಸುತ್ತಿದ್ದವು. ಅವರಿಗೆ ಲಭ್ಯವಿದ್ದ ಸಂಪನ್ಮೂಲಗಳನ್ನು ಮತ್ತು ಮಕ್ಕಳ ಸಂಖ್ಯೆಯನ್ನು ಪರಿಗಣಿಸಿ, ಕೃಷಿ-ಆಧಾರಿತ ಮೇಲ್ವರ್ಗಗಳಲ್ಲಿ ಕೌಟುಂಬಿಕ ಶಿಶುಪಾಲನಾ ವ್ಯವಸ್ಥೆ ಮತ್ತು ಸ್ತನ್ಯದಾದಿಯರ ವ್ಯವಸ್ಥೆ ಇರುತ್ತಿತ್ತು. ಆದರೆ ಇದು ಯಾವುದೇ ರೀತಿಯಿಂದ ಮಕ್ಕಳ ಬಗೆಗಿನ ತೀವ್ರ ಭಾವನಾತ್ಮಕ ಸಂಬಂಧವನ್ನೇನೂ ಕಡಿಮೆ ಮಾಡಿರಲಿಲ್ಲ. ಇದು ಸಮಾಜದ ಬಹುಜನರ ಪರಿಸ್ಥಿತಿಗಿಂತ ಭಿನ್ನವಾಗಿತ್ತು;

ಅವರಿಗೆ ಕುಟುಂಬದ ಗಾತ್ರವನ್ನು ಹತೋಟಿಯಲ್ಲಿಡಲು ತಮ್ಮ ಲೈಂಗಿಕ ಬಯಕೆಗಳ ಮೇಲೆ ಹತೋಟಿ ಸಾಧಿಸುವ ಅಗತ್ಯವಿತ್ತು.[17]

ಮಗುವಿನ ಲಿಂಗದ ಪರಿಗಣನೆಯು ಕೂಡ ಪ್ರಮುಖವಾಗಿತ್ತು. ಕೃಷಿ-ಆಧಾರಿತ ಸಮುದಾಯಗಳು ಪಿತೃಪ್ರಧಾನ ವ್ಯವಸ್ಥೆಗಳಾಗಿದ್ದವು ಮತ್ತು ಎಲ್ಲಾ ಸಾಮಾಜಿಕ ಸ್ತರಗಳಲ್ಲೂ ಅಧಿಕಾರ ಮತ್ತು ಸಂಪತ್ತು ಗಂಡುಮಕ್ಕಳಿಗೆ ವರ್ಗಾವಣೆಯಾಗುತ್ತಿದ್ದುದರಿಂದ ಹೆಣ್ಣು ಮಕ್ಕಳಿಗೆ ಸಾಕಷ್ಟು ಪ್ರಾಮುಖ್ಯವಿರಲಿಲ್ಲ; ಅಷ್ಟೇ ಅಲ್ಲದೆ, ಉತ್ತರಾಧಿಕಾರಿಯಾಗಿ ಒಂದಾದರೂ ಗಂಡು ಮಗು ಇರಬೇಕು ಎಂಬ ಕಾರಣದಿಂದಾಗಿ ಜನನ ಪ್ರಮಾಣವನ್ನು ಕೂಡ ಹೆಚ್ಚುಮಾಡಲು ಪ್ರಯತ್ನಿಸಲಾಗುತ್ತಿತ್ತು. ಹೆಚ್ಚಿನ ಕೃಷಿ-ಆಧಾರಿತ ಸಮುದಾಯಗಳಲ್ಲಿ, ಮೇಲ್ವರ್ಗದವರು ಮತ್ತು ಹೆಚ್ಚಿನ ಸಂಖ್ಯೆಯಲ್ಲಿದ್ದ ಕೆಳವರ್ಗದವರು ಕುಟುಂಬದ ಗಾತ್ರವನ್ನು ಸೀಮಿತಗೊಳಿಸಲು ಹೆಣ್ಣು ಶಿಶುಗಳ ಹತ್ಯೆ ಮಾಡುತ್ತಿದ್ದರು ಅಥವಾ ಹೆಣ್ಣು ಶಿಶುವನ್ನು ತ್ಯಜಿಸುತ್ತಿದ್ದರು. ಪ್ರವಾಸದ ಮೇಲೆ ಹೋಗುತ್ತಿದ್ದ ರೋಮ್ ಮತ್ತು ಗ್ರೀಸ್ ದೇಶಗಳ ಕುಲೀನ ವರ್ಗದ ಪುರುಷರು ತಮ್ಮ ಗರ್ಭಿಣಿ ಹೆಂಡತಿಯರಿಗೆ ಮಗುವೇನಾದರೂ ಹೆಣ್ಣಾಗಿ ಹುಟ್ಟಿದಲ್ಲಿ ಅದನ್ನು ದೂರದಲ್ಲೆಲ್ಲೋ ಬಿಟ್ಟುಬರುವಂತೆ ಸೂಚನೆಗಳನ್ನು ಬರೆದಿಡುತ್ತಿದ್ದರು. ಅಭಿಜಾತ ಕಾಲದಲ್ಲಿ, ಅದರಲ್ಲಿಯೂ ಗ್ರೀಸ್ ದೇಶದ ಕುಟುಂಬದ ಹಿರಿತಲೆಗಳು ತಮ್ಮ ಪಾಪಪ್ರಜ್ಞೆಯನ್ನು ಕಡಿಮೆ ಮಾಡಿಕೊಳ್ಳಲು ಹುಟ್ಟಿದ ಮಕ್ಕಳನ್ನು ನೇರವಾಗಿ ಸಾಯಿಸಿಬಿಡುವ ಬದಲು, ನವಜಾತ ಶಿಶುಗಳನ್ನು ನಿರಾಕರಿಸಬಹುದಿತ್ತು.[18] ಈ ಪದ್ಧತಿ ಚೀನದಲ್ಲಿ ವ್ಯಾಪಕವಾಗಿದ್ದು, ಇನ್ನೂ ಆಳವಾಗಿ ಬೇರೂರಿತ್ತು.

ಜನಸಾಮಾನ್ಯರು ತಮಗೆ ಹುಟ್ಟುವ ಮಕ್ಕಳು ಮತ್ತು ದುಡಿಯುವ ಕೈಗಳ ನಡುವೆ ಸಮತೋಲನ ಕಾಯ್ದುಕೊಳ್ಳಬೇಕಾಗಿದ್ದ ಕಾರಣಕ್ಕಾಗಿ ಉದ್ದೇಶಪೂರ್ವಕ ಶಿಶುಹತ್ಯೆಗಳ ಜೊತೆಗೆ, ಇತರ ಕಾರಣಗಳಿಂದ ಉಂಟಾಗುವ ಮಕ್ಕಳ ಸಾವನ್ನು ಕುರಿತು ಹೆಚ್ಚು ನಿರ್ಲಿಪ್ತರಾಗಿರುತ್ತಿದ್ದರು. ಹೀಗೆ ಹೇಳುವ ಸಂದರ್ಭದಲ್ಲಿ ನಾವು ಎಚ್ಚರವಹಿಸುವುದು ಅಗತ್ಯ. ಬಾಲ್ಯದ ಮೊದಲ ತಲೆಮಾರಿನ ಇತಿಹಾಸಕಾರರು ಆಧುನಿಕ ಮತ್ತು ಆಧುನಿಕಪೂರ್ವ ಪದ್ಧತಿಗಳಲ್ಲಿದ್ದ ವ್ಯತ್ಯಾಸಗಳನ್ನು ಗುರುತಿಸುವ ತರಾತುರಿಯಲ್ಲಿ, ದೈಹಿಕ ಶಿಸ್ತಿನ ಕ್ರಮಗಳನ್ನು ಮತ್ತು ಸತ್ತ ಮಕ್ಕಳ ಹೆಸರುಗಳ ಮರುಬಳಕೆಯ ಪದ್ಧತಿಯನ್ನು ಮಕ್ಕಳನ್ನು ಕುರಿತ ಪಾಲಕರಿಗೆ ಇರುವ ಭಾವನಾತ್ಮಕ ಸಂಬಂಧದ ಕೊರತೆ ಎಂದು ತಪ್ಪಾಗಿ ಅರ್ಥೈಸಿಕೊಂಡು, ಒಂದು ಮಗುವಿನ ಸಾವು ಯಾವ ರೀತಿಯ ನೋವು ತರಬಲ್ಲುದು ಎಂಬುದನ್ನು ಗುರುತಿಸುವಲ್ಲಿ ವಿಫಲರಾದರು.[19] ಹಲವು ಕುಟುಂಬಗಳು ತಮ್ಮ ಪಂಚಾಂಗದ ಮೇಲೂ ಧಾರ್ಮಿಕ ವಸ್ತುಗಳ ಮೇಲೂ ತಮ್ಮ ಎಳೆಯ ಮಕ್ಕಳ ಸಾವುಗಳನ್ನು ದಾಖಲಿಸುತ್ತಿದ್ದರು. ಸಾವಿನ ನೋವು ಪ್ರಾಯಶಃ ತಾಯಂದಿರಿಗೆ ದೀರ್ಘಕಾಲ ಕಾಡುತ್ತಿದ್ದರೂ, ತಂದೆಯರನ್ನು

---

[17] *G. Robina Quale, Families in Context: A World History of Population (New York: Greenwood Press, 1992); Angus McLaren,A History of Contraception: From Antiquity to the Present Day (Cambridge, MA: Basil Blackwell, 1990).*

[18] *Mark Golden, Children and Childhood in Classical Athens (Baltimore: Johns Hopkins University Press, 1990); Robert Garland, The Greek Way of Life: From Conception to Old Age (Ithaca: Cornell University Press, 1990).*

[19] *Shorter, Making of the Modern Family; deMause, Childhood.*

ಕೂಡ ಅದು ಬಿಡುತ್ತಿರಲಿಲ್ಲ. ಆದರೆ, ಇದೇ ಸಂದರ್ಭದಲ್ಲಿ, ಸಾವುಗಳೇ ಸಂಭವಿಸದಿದ್ದರೆ ಮಕ್ಕಳ ಸಂಖ್ಯೆ ಅತಿಯಾಗಿ, ಕೌಟುಂಬಿಕ ಆರ್ಥಿಕತೆಯನ್ನು ನಿರ್ವಹಿಸುವುದು ಕಷ್ಟವಾಗುತ್ತಿತ್ತು. ನಿರ್ದಿಷ್ಟವಾಗಿ ಆರ್ಥಿಕ ನೆಲೆಯಿಂದ ನೋಡಿದರೆ, ಕೇವಲ ಕೃಷಿಯನ್ನು ಮಾತ್ರ ಅವಲಂಬಿಸಿದ್ದ ಕುಟುಂಬಗಳಲ್ಲಿ, ಎಷ್ಟು ಜಮೀನು ಲಭ್ಯವಿದೆ ಎಂಬ ಆಧಾರದ ಮೇಲೆ, ಒಂದು ಕುಟುಂಬದಲ್ಲಿ ನಾಲ್ಕು ಜನ ಮಕ್ಕಳು ಮಾತ್ರ ಪ್ರೌಢತೆಯನ್ನು ತಲುಪಬೇಕು ಎನ್ನುವ ನಿರೀಕ್ಷೆ ಇರುತ್ತಿತ್ತು; ಇದರ ಅರ್ಥ, ಸುಮಾರು ಆರರಿಂದ ಎಂಟು ಮಕ್ಕಳು ಹುಟ್ಟಿದಲ್ಲಿ, ಹೆಚ್ಚಿನವು ಸತ್ತುಹೋಗುತ್ತವೆ ಎಂಬ ಲೆಕ್ಕಾಚಾರ ಕೆಲಸ ಮಾಡುತ್ತಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಎಳೆಯ ಮಕ್ಕಳು ಇದ್ದರೆ, ಅವು ಕುಟುಂಬದ ಸಂಪನ್ಮೂಲಗಳ ಮೇಲೆ ಹೆಚ್ಚಿನ ಹೊರೆ ಹೊರಿಸುವುದಷ್ಟೇ ಅಲ್ಲದೆ ಅವೆಲ್ಲವೂ ಪ್ರಾಪ್ತವಯಸ್ಸಿಗೆ ಬಂದರೆ ಅವೆಲ್ಲವುಗಳಿಗೂ ಸೂಕ್ತವಾದ ಕೆಲಸ ಮತ್ತು ಆಸ್ತಿಯನ್ನು ಹಂಚುವಲ್ಲಿ ಕುಟುಂಬವು ಅಸಮರ್ಥವಾಗುವ ಪರಿಸ್ಥಿತಿ ಉಂಟಾಗುತ್ತಿತ್ತು. ದುಃಖ ಸಹಜವಾಗಿದ್ದರೂ, ಪ್ರತಿ ಕುಟುಂಬದ ಸುಸ್ಥಿರತೆಯನ್ನು ಕಾಪಾಡಲು ಅವರು ಸಾಕಷ್ಟು ಮಟ್ಟಿಗೆ ಮಕ್ಕಳ ಸಾವನ್ನು ನಿರೀಕ್ಷಿಸುತ್ತಿದ್ದರು.; ಮಕ್ಕಳ ಸಾವಿನ ಪ್ರಮಾಣ ಸರಿಸುಮಾರು 30%-50%ರಷ್ಟು ಇದ್ದ ಆ ಕಾಲಮಾನದಲ್ಲಿ ಇದು ಸಾಕಷ್ಟು ನಿರೀಕ್ಷಿತವಾಗಿತ್ತು ಕೂಡ. ಪ್ರೌಢ ವಯಸ್ಸಿನ ಮಕ್ಕಳಿಗೆ ಮತ್ತು ಹಿರಿಯರಿಗೆ ಲಭ್ಯವಿದ್ದ ವೈದ್ಯಕೀಯ ಸೌಲಭ್ಯಗಳನ್ನು ಕಿರಿಯ ಮಕ್ಕಳಿಗೆ ಬಳಸುವುದು ಅತಿ ಕಡಿಮೆಯಾಗಿತ್ತು ಇವೆಲ್ಲವೂ ಒಂದು ವಿಶೇಷ ವಿಧಿಯಾಟದ ಸೂಚನೆ ಎನ್ನುವಂತೆ ಇರುತ್ತಿತ್ತು. ಆಧುನಿಕಪೂರ್ವ ಸಮಾಜದಲ್ಲಿ ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಕೂಡಾ ಮಹತ್ವವಿರಲಿಲ್ಲ; ಉದಾಹರಣೆಗೆ, ಎತ್ತರವಾದ ಸ್ಥಳ, ನೀರಿನ ತಾಣಗಳು, ಬಾವಿ ಇತ್ಯಾದಿಗಳ ಸುತ್ತ ಇದ್ದ ನಿರ್ಲಕ್ಷ್ಯವೂ ಸಾಕಷ್ಟು ಕುಖ್ಯಾತವಾದ ವಿಧಿಯಾಟ ಎನ್ನುವಂತೆ ಕಾಣುತ್ತಿತ್ತು. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಕೃಷಿ ಕುಟುಂಬಗಳು, ಮೇಲ್ವರ್ಗದ ಕುಟುಂಬಗಳೂ ಸೇರಿದಂತೆ, ಮುಖ್ಯವಾಗಿ ಜನಸಾಮಾನ್ಯರು ಆಧುನಿಕ ಸಮಾಜದಲ್ಲಿರುವುದಕ್ಕಿಂತ ಭಿನ್ನವಾಗಿ ಭಾವನಾತ್ಮಕ ಸಂಬಂಧಗಳನ್ನು, ಬದುಕಿನ ಕುರಿತು ನಿರೀಕ್ಷೆಗಳನ್ನು, ಸಾವಿನ ಅನಿವಾರ್ಯತೆಯನ್ನೂ ಕೂಡ, ಸರಿದೂಗಿಸುತ್ತಿದರು. ಇಲ್ಲಿ ಹಾಸುಹೊಕ್ಕಾಗಿದ್ದ ಭಾವನಾತ್ಮಕ ಲೆಕ್ಕಾಚಾರಗಳನ್ನು ಊಹಿಸುವುದು ಕಷ್ಟ.[20] ಇಲ್ಲಿ ನಾವು ಇನ್ನೊಂದು ಮುಖ್ಯ ವಿಷಯವನ್ನು ಗಮನಿಸಬೇಕು: ಕೃಷಿ-ಆಧಾರಿತ ಸಮುದಾಯಗಳಲ್ಲಿ ಮಕ್ಕಳು ತಮ್ಮನ್ನು ಸುತ್ತುವರಿದಿರುತ್ತಿದ್ದ ಸಾವಿನ ವಾತಾವರಣದಲ್ಲಿಯೇ ಬೆಳೆಯುತ್ತಿದ್ದರು. ಒಡಹುಟ್ಟಿದವರ ಸಾವು ಸಾಮಾನ್ಯವಾಗಿದ್ದ ಕಾರಣಕ್ಕೆ ಅವರ ಬದುಕಿನ ಹೊಂದಾಣಿಕೆಗಳನ್ನು, ನಿರೀಕ್ಷೆಗಳನ್ನು ಅದಕ್ಕೆ ತಕ್ಕಂತೆ ಹೊಂದಿಸಿಕೊಳ್ಳುವ ಅಗತ್ಯ ಆ ಮಕ್ಕಳಿಗೆ ಇರುತ್ತಿತ್ತು.

ಇತರ ಕ್ರಮಗಳು ಆರ್ಥಿಕ ಸಮತೋಲನವನ್ನು ಕಾಪಾಡಲು ಸಹಾಯ ಮಾಡುತ್ತಿದ್ದವು. ಅತ್ಯಂತ ಕೆಳಮಟ್ಟದ ಆರ್ಥಿಕ ಪರಿಸ್ಥಿತಿಯಲ್ಲಿ, ಅದರಲ್ಲಿಯೂ ಮುಖ್ಯವಾಗಿ ಆಧುನಿಕಪೂರ್ವದ ನಗರಗಳಲ್ಲಿ, ಮಕ್ಕಳನ್ನು ನೋಡಿಕೊಳ್ಳುವ

[20] *Mary Lindemann, Medicine and Society in Early Modern Europe (New York: Cambridge University Press, 1999).*

ಸಾಮರ್ಥ್ಯ ಇಲ್ಲದ ಕಾರಣ ಎಳವೆಯಲ್ಲಿಯೇ ಅವರನ್ನು ಮತ್ತೆ ಹಿಂದಿರುಗದ ಹಾಗೆ ಮಾಡಿ ಮನೆಯಿಂದ ಹೊರಹಾಕಲಾಗುತ್ತಿತ್ತು. ಈ ಪದ್ಧತಿಯನ್ನು ಬ್ರೆಜಿಲ್‌ನಂತಹ ದೇಶಗಳಲ್ಲಿ ಇಂದೂ ಕಾಣಬಹುದು. ಇಲ್ಲಿ ಇಂತಹ ಪರಿತ್ಯಕ್ತ ಮಕ್ಕಳನ್ನು ನೋಡಿಕೊಳ್ಳಲೆಂದೇ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಆಧುನಿಕ ಕಾಲಕ್ಕೆ ಹತ್ತಿರವಿದ್ದರೂ ಕೂಡ, ಇಂತಹ ಕ್ರಮಗಳನ್ನು ತೆಗೆದುಕೊಳ್ಳುವ ಅನಿವಾರ್ಯತೆ ಬಡ ಕುಟುಂಬಗಳದ್ದಾಗಿರುತ್ತದೆ. ಇಲ್ಲಿ ಮಕ್ಕಳನ್ನು ಹೊರಹಾಕುವ ಉದ್ದೇಶ ಅವರನ್ನು ಶಾಶ್ವತವಾಗಿ ದೂರವಿಡುವುದಕ್ಕಾಗಿರುವುದಿಲ್ಲ; ಬಹುತೇಕ ಕುಟುಂಬಗಳು ತಮ್ಮ ಪರಿಸ್ಥಿತಿ ಸುಧಾರಿಸಿದಾಗ ತಮ್ಮ ಮಕ್ಕಳನ್ನು ಹಿಂಪಡೆಯುವ ಭರವಸೆಯನ್ನು ಇಟ್ಟುಕೊಂಡಿರುತ್ತಿದ್ದರು.[21]

ಹಲವು ಸಾಮಾನ್ಯ ಕುಟುಂಬಗಳು ತಮ್ಮ ಮಕ್ಕಳನ್ನು ಕೆಲಸಕ್ಕೆಂದು ಉಳ್ಳವರ ಮನೆಯಲ್ಲಿ ಬಿಡುತ್ತಿದ್ದರು ಅಥವಾ ಸಂಪನ್ಮೂಲಗಳ ಸಮತೋಲನ, ಕೆಲಸದ ಅಗತ್ಯ ಮತ್ತು ಮಕ್ಕಳ ಸಂಖ್ಯೆ ಸರಿದೂಗಿಸುವ ನಿಟ್ಟಿನಲ್ಲಿ ಸಂಬಂಧಿಕರ ಮನೆಯಲ್ಲಿ ಬಿಡುತ್ತಿದ್ದರು. ಹೀಗೆ ಸ್ವಲ್ಪ ವಯಸ್ಸಿಗೆ ಬಂದ ಮಕ್ಕಳು ಯಾರಾದರೂ ಮಕ್ಕಳಿಲ್ಲದವರ ಮನೆಯಲ್ಲಿ ಅಥವಾ ವಯಸ್ಸಾದವರು ಮಾತ್ರ ಇರುವ ಮನೆಗಳಲ್ಲಿ ಕೆಲವು ವರ್ಷ ಕೆಲಸ ಮಾಡುತ್ತಿದ್ದರು. ಮಕ್ಕಳ ಲಾಲನೆ ಪಾಲನೆಯ ಜವಾಬ್ದಾರಿಯನ್ನು ಪರಸ್ಪರ ಹಂಚಿಕೊಂಡು ನಿರ್ವಹಿಸುತ್ತಿದ್ದ ಸಮಾಜಗಳಲ್ಲಿ, ಅನೌಪಚಾರಿಕವಾಗಿ ದತ್ತು ತೆಗೆದುಕೊಳ್ಳುವಿಕೆ ಮತ್ತು ಮಕ್ಕಳು ಸಂಬಂಧಿಕರ ಮನೆಯಲ್ಲಿ ಕೆಲಸ ಮಾಡುವುದರಿಂದ ಸಂಪನ್ಮೂಲಗಳನ್ನು ಸರಿದೂಗಿಸುವುದು ಸಾಧ್ಯವಿತ್ತು. ಅಭಿಜಾತ ರೋಮ್ ನಾಗರಿಕತೆಯಲ್ಲಿ ಕೂಡ, ಬಡತನದ ಅಥವಾ ತಂದೆತಾಯಿಗಳ ಸಾವಿನ ಕಾರಣಕ್ಕೆ ಮಗುವನ್ನು ನೇರವಾಗಿ ದತ್ತುತೆಗೆದುಕೊಳ್ಳುವ ಪದ್ಧತಿ ಜಾರಿಯಲ್ಲಿ ಇತ್ತು. ಇಲ್ಲಿ ಯಾವುದೇ ಏಕಸೂತ್ರ ಎಂಬುದಿರಲಿಲ್ಲ; ಇರುತ್ತಿದ್ದ ವಾಸ್ತವತೆ ಎಂದರೆ, ಮಕ್ಕಳ ಸಂಖ್ಯೆ ಮತ್ತು ಸಂಪನ್ಮೂಲದ ಲಭ್ಯತೆಯನ್ನು ಸರಿದೂಗಿಸುವುದು ಮತ್ತು ತಮ್ಮ ಮಗುವಿನೊಂದಿಗಿನ ಸಂಬಂಧದಲ್ಲಿ ಹೊಂದಾಣಿಕೆಯನ್ನು ತೋರಿಸುವುದು.[22]

ಹಿರಿಯ ಮಕ್ಕಳು, ಅಂದರೆ ನಾವು ಹದಿಹರೆಯದವರು ಅಥವಾ ಯುವಕರು ಎಂದು ಕರೆಯಬಹುದಾದ ವಯೋಮಾನಕ್ಕೆ ಸೇರಿದವರು ಒಂದೆಡೆ ತಮ್ಮ ಸಾಮರ್ಥ್ಯ ಮತ್ತು ಮಾಡಬೇಕಾದ ಕೆಲಸದ ಅಗತ್ಯಗಳು ಮತ್ತು ಇನ್ನೊಂದೆಡೆ ತಮ್ಮ ಹಿರಿತನದ ಅಧಿಕಾರವನ್ನು ರಕ್ಷಿಸಬೇಕಾದ ಪರಿಸ್ಥಿತಿಯ ನಡುವಿನ ಸಂಘರ್ಷಗಳತ್ತ ಗಮನಹರಿಸಬೇಕಾಗಿ ಬಂರುತ್ತಿತ್ತು. ವಾಸ್ತವ ವಿಷಯ ಏನೆಂದರೆ, ಹದಿನೈದು ವರ್ಷ

---

[21] *David Ransel, Mothering, Medicine and Infant Mortality in Russia (Washington, D.C.: Kennan Institute for Advanced Russian Studies, 1990) and Mothers of Misery: Child Abandonment in Russia (Princeton: Princeton University Press, 1988); Elizabeth Kuznesof, "The House, the Street, Global Society: Latin American Families and Childhood in the 21st Century," Journal of Social History 38 (2005): forthcoming; Rachel Fuchs, Abandoned Children: Foundlings and Child Welfare in Nineteenth-Century France (Albany: State University of New York, 1984).*

[22] *John Gillis, Youth and History: Tradition and Change in European Age Relations, 1770–Present (New York: Academic Press, 1974); Joan Lane, Apprenticeship in England, 1600–1914 (London: UCL Press, 1996).*

ಆಗುವಷ್ಟರಲ್ಲಿ ಹೆಚ್ಚಿನ ಮಕ್ಕಳು ವಯಸ್ಕರು ಮಾಡುವ ಕೆಲಸಗಳನ್ನು, ಅದರಲ್ಲಿಯೂ ಮುಖ್ಯವಾಗಿ ಕೃಷಿಗೆ ಸಂಬAಧಪಟ್ಟ ಕೆಲಸಗಳನ್ನು ಮಾಡಲು ಸಮರ್ಥರಾಗುತ್ತಿದ್ದರು. ಆದರೆ ಆಸ್ತಿಪಾಸ್ತಿ ಮತ್ತು ಸಾಮಾಜಿಕ ಶ್ರೇಣಿಪದ್ಧತಿಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಒಂದು ಸ್ಪಷ್ಟವಾದ ಕೌಟುಂಬಿಕ ಅವಲಂಬನೆ ಇರುವುದು ಮುಖ್ಯವಾಗಿರುತ್ತಿತ್ತು. ಹದಿಹರೆಯದ ಹೆಣ್ಣುಮಕ್ಕಳ ವಿಚಾರದಲ್ಲಿ ಸಾಮಾನ್ಯವಾಗಿ ಕಿರಿಯ ವಯಸ್ಸಿನಲ್ಲಿಯೇ - ಹದಿಹರೆಯದ ಪ್ರಾರಂಭದಲ್ಲಿ ಅಥವಾ, ಕೆಲವೊಮ್ಮೆ ಮೈನೆರೆಯುವ ಮೊದಲೇ - ಮದುವೆ ಮಾಡಿಕೊಡಲಾಗುತ್ತಿತ್ತು. (ವಯಸ್ಸಾದ) ಗಂಡ ಮತ್ತು ಅವನ ಹೆತ್ತವರು ಮತ್ತು ಅವರ ವಿಸ್ತೃತವಾದ ಕೂಡುಕುಟುಂಬದಲ್ಲಿ ಮೇಲಿರುವ ಎಲ್ಲರಿಗೂ ಅಡಿಯಾಳಾಗಿ. ಹೆಣ್ಣುಮಕ್ಕಳು ಬಾಲ್ಯದಿಂದ ನೇರವಾಗಿ ನಡುವೆ ಹರೆಯದ ಯಾವ ಅನುಭವವೂ ಇಲ್ಲದೆ, ಬದುಕುವ ಸ್ಥಿತಿಗೆ ಆ ಹೆಣ್ಣುಮಕ್ಕಳು ತಲುಪುತ್ತಿದ್ದರು. (ಕೆಲವೊಮ್ಮೆ ಮದುವೆಯ ಮೊದಲ ಎರಡು ವರ್ಷ ಸಾಂಪ್ರದಾಯಿಕ ಕಾರಣಗಳಿಂದ ಲೈಂಗಿಕ ಸಂಪರ್ಕವನ್ನು ನಿರ್ಬಂಧಿಸಲಾಗುತ್ತಿತ್ತು). ಜನನ ಪ್ರಮಾಣವನ್ನು ನಿಯಂತ್ರಿಸಲು ಮತ್ತು ಪಿತೃಪ್ರಧಾನ ಪದ್ಧತಿಯನ್ನು ಸಮಾಜದಲ್ಲಿ ಮುಂದುವರಿಸಿಕೊAಡು ಹೋಗಲು ಕುಟುಂಬದಲ್ಲಿ ಹೆಣ್ಣುಮಕ್ಕಳ ವರ್ತನೆಯನ್ನು ಎಚ್ಚರದಿಂದ ನಿರ್ಬಂಧಿಸುವ ಅಥವಾ ಬಾಲ್ಯದಲ್ಲಿಯೇ ಅವರಿಗೆ ಮದುವೆಮಾಡುವ ಪದ್ಧತಿ ಅಥವಾ ಇವೆರಡೂ ಪದ್ಧತಿಗಳು ಜಾರಿಯಲ್ಲಿದ್ದವು.

ಗಂಡುಮಕ್ಕಳ ಪರಿಸ್ಥಿತಿ ಇನ್ನೂ ಕ್ಲಿಷ್ಟಕರವಾಗಿತ್ತು. ಕೆಲವೇ ಕುಟುಂಬಗಳಲ್ಲಿ ಮಾತ್ರ ಗಂಡುಮಕ್ಕಳು ತಾವೇ ಹೊಸ ಸಂಸಾರ ಹೂಡುವಂತೆ ಮಾಡಲು ಅಗತ್ಯವಾದ ಸಂಪನ್ಮೂಲಗಳು ಇರುತ್ತಿದ್ದವು. ಹಾಗೆ ಮಾಡಲು ಅವರು ಕನಿಷ್ಠ ಇಪ್ಪತ್ತು ವರ್ಷ ಅಥವಾ ಅದಕ್ಕಿಂತಲೂ ಹೆಚ್ಚಿನ ಕಾಲ ಕಾಯಬೇಕಿತ್ತು. ಈ ಕಾರಣದಿಂದ ಪುರುಷರ ಯೌವನಾವಸ್ಥೆ ಹೆಚ್ಚು ದೀರ್ಘಕಾಲೀನವಾಗಿತ್ತು. ಆದರೆ ಕೆಲವೊಮ್ಮೆ ಯುದ್ಧದಂತಹ ಆಪತ್ತಿನ ಸಂದರ್ಭಗಳಲ್ಲಿ ಒಟ್ಟಾರೆಯಾಗಿ ಜನಸಂಖ್ಯೆಯನ್ನು ಕಡಿಮೆಗೊಳಿಸಿದಾಗ, ಬೇಗನೆ ಮದುವೆಯಾಗಲು ಸಾಧ್ಯವಾಗುವಂತೆ ಸಂಪನ್ಮೂಲಗಳನ್ನು ಒಟ್ಟುಗೂಡಿಸಲಾಗುತ್ತಿತ್ತು. ಇತರರ ಮನೆಗಳಲ್ಲಿ ಕೆಲಸಕ್ಕೆ ಬಿಡುವುದರಿಂದ ಯುವಕರ ನಡುವೆ ಉಂಟಾಗುವ ಪರಸ್ಪರ ಸಂಘರ್ಷಗಳನ್ನು ಮತ್ತು ಅವಲಂಬನೆಗಳನ್ನು ಕಡಿಮೆಗೊಳಿಸುವ ಸಾಧ್ಯತೆ ಇತ್ತು; ಇಲ್ಲಿ ಅವರು ತಮ್ಮ ತಂದೆತಾಯಿಗಳ ಮನೆಗಿಂತ ಹೆಚ್ಚಿನ ಕಠಿಣ ಶಿಸ್ತಿನ ವಾತಾವರಣದಲ್ಲಿ ಕೆಲಸ ಮಾಡಬೇಕಾಗಿತ್ತು. ಸಂಪನ್ಮೂಲಗಳ ಹಂಚಿಕೆಯ ಕಾರಣದ ಹೊರತಾಗಿ ಇತರರ ಮನೆಗಳಲ್ಲಿ ಹದಿಹರೆಯದವರನ್ನು ಕೆಲಸಕ್ಕೆ ಬಿಡಲು ಇದ್ದ ಮತ್ತೊಂದು ಮುಖ್ಯ ಕಾರಣವೆಂದರೆ ಹೆತ್ತವರು ಮತ್ತು ಮಕ್ಕಳ ನಡುವಿನ ಸಂಘರ್ಷವನ್ನು ಕಡಿಮೆ ಮಾಡುವುದು,. ಯುರೋಪ್ ಮತ್ತು ಏಷ್ಯಾದ ನಗರ ಪ್ರದೇಶಗಳಲ್ಲಿ ಯುವ ಕುಶಲಕರ್ಮಿಗಳ ತರಬೇತಿಯ ಅವಧಿ ಮುಗಿದು ಅವರು ವಯಸ್ಕರಾಗುವುದಕ್ಕೆ ಮೊದಲು ಅವರು ತಿರುಗಾಟದಲ್ಲಿ ತೊಡಗಿಕೊಳ್ಳಬೇಕಾಗಿತ್ತು; ಜರ್ಮನ್ನರು ಇದನ್ನು ವಾಂಡರ್ಸ್ಯಾರ್ (Wandersjahre) ಎಂದು ಕರೆಯುತ್ತಿದ್ದರು. ಈ ಅವಧಿಯಲ್ಲಿ ಅವರು ಒಂದು ಕೆಲಸದಿಂದ ಇನ್ನೊಂದು ಕೆಲಸಕ್ಕಾಗಿ ಅಲೆಯಬೇಕಿತ್ತು ಮತ್ತು ಅವರು ತಮ್ಮ ಸಹೋದ್ಯೋಗಿಗಳೊಂದಿಗೆ ಕುಡಿತದಲ್ಲಿ ತೊಡಗುವುದು ಮತ್ತು ಲೈಂಗಿಕ ಸಂಬಂಧಗಳನ್ನು ಇಟ್ಟುಕೊಳ್ಳುವುದು ಸಾಮಾನ್ಯವಾಗಿರುತ್ತಿತ್ತು. ಮೇಲ್ವರ್ಗದ ವಿದ್ಯಾರ್ಥಿಗಳ ಇಂತಹ ಮೋಜಿನ ಕೂಟಗಳ

ಬಗೆಗೆ ಸಮಾಜದಲ್ಲಿ ಇದ್ದ ಸಹಿಷ್ಣುತೆಯು ಸ್ವಚ್ಛಂದತೆ ಮತ್ತು ಹತೋಟಿ ಎರಡನ್ನೂ ಅವರಿಗೆ ನೀಡುತ್ತಿತ್ತು. ಗ್ರಾಮೀಣ ಯುವಕರಿಗೆ ಇಂತಹ ಅವಕಾಶಗಳು ಇರಲಿಲ್ಲ. ಅವರೇನಿದ್ದರೂ ನೇರವಾಗಿ ಸೇನೆ ಸೇರಬಹುದಿತ್ತು ಅಥವಾ ನಗರ ಪ್ರದೇಶಗಳಿಗೆ ಓಡಿ ಹೋಗಬಹುದಿತ್ತು, ಅಥವಾ ಹಿಂದಕ್ಕೆ ಬಾರದಂತೆ ಬೇರೆಡೆಗೆ ಸಂಪೂರ್ಣ ವಲಸೆ ಹೋಗಬಹುದಿತ್ತು. ಗ್ರಾಮೀಣ ಜಾತ್ರೆಗಳು ಗಂಡು ಹುಡುಗರಿಗೆ ಸ್ವಾತಂತ್ರ್ಯದ ಅನುಭವ ಕೊಡುತ್ತಿದ್ದವು; ತಮ್ಮ ಧಣಿಗಳನ್ನು, ಹಳ್ಳಿಯ ಗಣ್ಯರನ್ನು, ಸ್ಥಳೀಯ ಅಧಿಕಾರಸ್ಥರನ್ನು ಅಣಕವಾಡುವ ಅವಕಾಶ ಅವರಿಗೆ ಇಂತಹ ಸಂದರ್ಭಗಳಲ್ಲಿ ಸಿಗುತ್ತಿದ್ದುದರಿಂದ, ಅಧಿಕಾರದ ಸಂಬಂಧಗಳು ಯಥಾಸ್ಥಿತಿಗೆ ಮರುಕಳಿಸಿದಾಗ ಅದಕ್ಕೆ ಹೊಂದಿಕೊಳ್ಳುವುದು ಅವರಿಗೆ ಸುಲಭವಾಗುತ್ತಿತ್ತು.[23] ಕೆಲವೊಮ್ಮೆ ಹಗ್ಗ ಜಗ್ಗಾಟದಂತಹ ಆಟಗಳಲ್ಲಿ ಎಳೆಯ ಅವಿವಾಹಿತ ಹುಡುಗರನ್ನು ತರುಣ ವಿವಾಹಿತರೊಂದಿಗೆ ಎದುರುಬದುರು ಮಾಡಲಾಗುತ್ತಿತ್ತು. ಈ ಗೊಂದಲ ಗಲಾಟೆಗಳಲ್ಲಿ ತರುಣ ವಿವಾಹಿತರನ್ನು ತೊಡಗಿಸುವ ಹಳ್ಳಿಯ ಸಾಂಪ್ರದಾಯಿಕ ಪದ್ಧತಿಗಳ ಮೂಲಕ ಅವರ ಮದುವೆಗಳು ಸಂಪೂರ್ಣವಾಗಿ ನೆರವೇರುವಂತೆ ನೋಡಿಕೊಳ್ಳಲಾಗುತ್ತಿತ್ತು. ಹಬ್ಬಗಳ ಕಾಲದಲ್ಲಿ ಎಳೆಯ ಹುಡುಗರು ಮನೆಗಳ ಹೊಗೆಕೊಳವೆಗಳನ್ನು ಒಡೆದುಹಾಕುವಂತಹ ದುಂಡಾವರ್ತಿ ವರ್ತನೆಗಳ ಬಗೆಗೆ ಹಳ್ಳಿಯ ಜನರು ತಕ್ಕಮಟ್ಟಿಗೆ ಸಹನಶೀಲರಾಗಿರುತ್ತಿದ್ದರು. ಇಷ್ಟಾದರೂ ಕೆಲವೊಮ್ಮೆ ಹೊಡೆದಾಟದ ಸನ್ನಿವೇಶಗಳೂ ಹುಟ್ಟಿಕೊಳ್ಳುತ್ತಿದ್ದವು. ಹದಿನೆಂಟನೆಯ ಶತಮಾನದಲ್ಲಿ ಫ್ರಾನ್ಸಿನಲ್ಲಿ, ಕೆಲಸ ಮತ್ತು ಸಂಯಮ ಎರಡೂ ಇಲ್ಲದ ಗಂಡುಮಕ್ಕಳಿಂದ ಹತರಾಗುವ ಮಧ್ಯವಯಸ್ಸು ಮೀರಿದ ತಂದೆಯರ ಸಂಖ್ಯೆ ಅತಿ ಹೆಚ್ಚಾಗಿತ್ತು. ಯುವಕರ ಸಾಮರ್ಥ್ಯ ಮತ್ತು ಔದ್ಯೋಗಿಕ ಆವಶ್ಯಕತೆಯನ್ನು ಕೌಟುಂಬಿಕ ಮತ್ತು ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯಲ್ಲಿ ಸರಿದೂಗಿಸುವುದು ಸುಲಭದ ಕಾರ್ಯವಾಗಿರಲಿಲ್ಲ.[24]

ಎಲ್ಲಾ ಕೃಷಿ-ಆಧಾರಿತ ಸಮಾಜಗಳು, ಕೊನೆಗೂ, ಅತಿ ಹೆಚ್ಚು ಪ್ರಾಮುಖ್ಯವನ್ನು ಕೊಡುತ್ತಿದ್ದುದು ವಿಧೇಯತೆ ಮತ್ತು ಕಠಿಣ ಶಿಸ್ತಿಗೆ – ಇದು ದೈಹಿಕ ದಂಡನೆಯನ್ನು ಕೂಡ ಒಳಕೊಂಡಿರುತ್ತಿತ್ತು. ಈ ಮೂಲಕ ಧಾರ್ಮಿಕ ಮತ್ತು ಇತರ ಹಲವು ಉದ್ದೇಶಗಳನ್ನು ನೆರವೇರಿಸುವುದು ಸುಲಭವಿತ್ತು. ಮಕ್ಕಳಲ್ಲಿ ಹದಿಹರೆಯದಿಂದಲೇ ಸ್ಪಷ್ಟವಾಗಿ ಕೌಟುಂಬಿಕ ಆರ್ಥಿಕತೆಗೆ ಕೊಡಬೇಕಾದ ಕೊಡುಗೆಯ ಬಗೆಗಿನ ಬದ್ಧತೆಯನ್ನು ಬೆಳೆಸುವುದು ಇದರ ಉದ್ದೇಶವಾಗಿತ್ತು. ಈ ಪ್ರಯತ್ನ ಎಲ್ಲಾ ಸಂದರ್ಭಗಳಲ್ಲೂ ಕೈಗೂಡುತ್ತಿರಲಿಲ್ಲ ನಿಜ, ಆದರೆ ಕಾರ್ಮಿಕ ಶಕ್ತಿಗೆ ಯುವಕರು ಸಾಧ್ಯವಾದಷ್ಟು ತಮ್ಮ ಶ್ರಮವನ್ನು ಸೇರಿಸುತ್ತಿದ್ದುದರಿಂದ ಕೆಲಸದ ಸಾಮರ್ಥ್ಯ ಮತ್ತು ಕೌಟುಂಬಿಕ ಆರ್ಥಿಕತೆಯ ಅಗತ್ಯಗಳನ್ನು ಸರಿದೂಗಿಸುವುದಕ್ಕೆ ವಾಸ್ತವವಾಗಿ ಸಹಾಯವಾಗುತ್ತಿತ್ತು.

---

[23] *Natalie Davis, Society and Culture in Early Modern France: Eight Essays (Stanford: Stanford University Press, 1975); Robert Muchembled, Popular Culture and Elite Culture in France, 1400–1750, trans. Lydia Cochrane (Baton Rouge: Louisiana State University Press, 1985); Robert Malcolmson, Popular Recreations in English Society, 1700–1850 (Cambridge: Cambridge University Press, 1973).*

[24] *Peter N. Stearns, Old Age in European Society: The Case of France (New York: Holmes & Meier, 1976).*

ನಾವು ಇಲ್ಲಿಯ ತನಕ ಜಾಗತಿಕವಾಗಿ ಕೃಷಿ-ಆಧಾರಿತ ಸಮಾಜಗಳ ಸಾಮಾನ್ಯ ಗುಣಲಕ್ಷಣಗಳು ಆಯಾ ಸಮಾಜಗಳನ್ನು ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಮತ್ತು ಆಧುನಿಕ ಸಮಾಜಗಳೆರಡರಿಂದಲೂ ಹೇಗೆ ಭಿನ್ನವಾಗಿಸಿದ್ದವು ಎಂಬುದನ್ನು ಕೂಡ ಬೃಹತ್ ಚರಿತ್ರೆಯ ಚೌಕಟ್ಟಿನಲ್ಲಿ ನೋಡಿದೆವು. ಆದರೆ ಮಾನವ ಜನಾಂಗದ ವಿಕಾಸದ ಅವಧಿಯಲ್ಲಿ ದೀರ್ಘವಾದ ಕೃಷಿ-ಆಧಾರಿತ ನಾಗರಿಕತೆಯಲ್ಲಿ ಬಾಲ್ಯದ ಒಂದು ಜಾಗತಿಕ ಐತಿಹಾಸಿಕ ನೋಟವು ಪರಸ್ಪರ ಸಂಬಂಧ ಇರುವ ಮೂರು ಕಾರ್ಯಗಳನ್ನು ಒಳಕೊಂಡಿದೆ: ಅವುಗಳೆಂದರೆ, 1. ಕೃಷಿ-ಆಧಾರಿತ ಆರ್ಥಿಕತೆಯಲ್ಲಿ ನಾಗರಿಕತೆಯ ಪ್ರವೇಶದ ಪರಿಣಾಮವನ್ನು ಒಂದು ಸಾಂಸ್ಥಿಕ ರಚನೆಯಾಗಿ ನೋಡುವುದು; 2. ಕೃಷಿಯ ಮೇಲಿನ ಸಾಮಾನ್ಯ ಅವಲಂಬನೆಯ ಹೊರತಾಗಿಯೂ ವಿವಿಧ ನಾಗರಿಕತೆಗಳ ಪರಿಸ್ಥಿತಿಗಳನ್ನು ಸಾಂಸ್ಕೃತಿಕ ಮತ್ತು ರಚನಾತ್ಮಕ ವ್ಯತಾಸಗಳ ಹೋಲಿಕೆಯ ಮೂಲಕ ನೋಡುವುದು; ಮತ್ತು 3. ಒಂದು ಚಾಲ್ತಿಯಲ್ಲಿರುವ ಕೃಷಿ-ಆಧಾರಿತ ಸಮಾಜವು ಸಂಪೂರ್ಣ ಆಧುನಿಕ ಪ್ರಭಾವಕ್ಕೆ ಒಳಗಾಗುವ ಮೊದಲು ಅಲ್ಲಿ ಆಂತರಿಕವಾಗಿ ಆಗಬಹುದಾದ ಪ್ರಮುಖ ಬದಲಾವಣೆಗಳನ್ನು ಪರಿಶೀಲಿಸುವುದು. ನಾವು ಈ ಕೆಲಸಗಳನ್ನು ಕೈಗೆತ್ತಿಕೊಳ್ಳೋಣ. ಜಾಗತಿಕ ಇತಿಹಾಸದ ಅಧ್ಯಯನದಲ್ಲಿ ಇವು ನಿಗದಿತ ಕಾರ್ಯಗಳು. ಆದರೆ ಇವುಗಳನ್ನು ವ್ಯವಸ್ಥಿತವಾಗಿ ಬಾಲ್ಯದ ಇತಿಹಾಸಕ್ಕೆ ಅನ್ವಯಿಸಿದ್ದಿಲ್ಲ. ಕ್ರಮಪ್ರಕಾರವಾಗಿ ಹೋಗುವುದಾದರೆ, ಮೊದಲು ನಾಗರಿಕತೆ, ಅನಂತರ ತುಲನಾತ್ಮಕ ನಾಗರಿಕತೆ, ಅನಂತರ ತುಲನಾತ್ಮಕ ವಿಷಯವನ್ನು ಒಳಕೊಂಡಿರುರುವ ಮತ್ತು ಈ ಸಂದರ್ಭದಲ್ಲಿ ಪಶ್ಚಿಮ ಯುರೋಪಿನಲ್ಲಿ ನಡೆದ ಬೆಳವಣಿಗೆಗಳನ್ನು ಕುರಿತಂತೆ ಹೆಚ್ಚಿನ ಗಮನವನ್ನು ಹರಿಸಬೇಕಾಗಿರುವ ಹೆಚ್ಚುವರಿ ಬದಲಾವಣೆಗಳು.

ಬಹುಸಂಖ್ಯಾತವಾಗಿರುವ ಗ್ರಾಮೀಣ ಸಮುದಾಯಗಳ ನಡುವೆಯೇ, ನಗರಗಳ ಉದಯ, ಬರವಣಿಗೆ ಮತ್ತು ಇತರ ಸಂರಚನಾತ್ಮಕ ಬದಲಾವಣೆಗಳನ್ನು ತಂದAತಹ ಹೊಸ ನಾಗರಿಕತೆಯು ಬಂದಾಗ ಅದು ಬಾಲ್ಯದ ಮೇಲೆ ಮೂರು ಪ್ರಮುಖ ಪರಿಣಾಮಗಳನ್ನು ಬೀರಿತು. ಮೊದಲನೆಯದಾಗಿ, ಸಂಘಟಿತ ಸರಕಾರಗಳು ಮಕ್ಕಳನ್ನು ಅವುಗಳು ಹುಟ್ಟಿದ ಸಮಾಜದ ಭಾಗಿಗಳಾಗಿ ಇರುವಂತೆ ಮಾಡುವ ಕಾನೂನುಗಳನ್ನು ಜಾರಿಗೆ ತಂದವು. ಇದು ಹೊಸ ಪದ್ಧತಿಯಾಗಿರದಿದ್ದರೂ, ಕಾನೂನು ಸಂಹಿತೆ ಹೆಚ್ಚು ಸ್ಪಷ್ಟವಾಗಿತ್ತು: ಹಾಗಾಗಿ, ಗುಲಾಮರ ಮಕ್ಕಳು ಗುಲಾಮರಾಗಿಯೇ ಇರಬೇಕೆನ್ನುವುದು ಇದರಿಂದ ಹೆಚ್ಚು ಸ್ಪಷ್ಟವಾಗಿತ್ತು.

ಕಾನೂನು ಕಟ್ಟಳೆಗಳು, ಬಾಲ್ಯವನ್ನು, ಮಕ್ಕಳನ್ನು ಕುರಿತು ಹಿರಿಯರ ಕರ್ತವ್ಯಗಳನ್ನು ಮತ್ತು ಪ್ರತಿಯಾಗಿ ಹಿರಿಯರ ಬಗೆಗೆ ಮಕ್ಕಳ ಕರ್ತವ್ಯಗಳನ್ನು ಹೆಚ್ಚು ಔಪಚಾರಿಕವಾಗಿ ನಿರೂಪಿಸಿದವು. ಆರಂಭ ಕಾಲದ ಹಲವು ನಾಗರಿಕತೆಗಳು ವಿಧೇಯತೆಯ ಪ್ರಾಮುಖ್ಯವನ್ನು ಎತ್ತಿಹಿಡಿಯಲು ಕಾನೂನು ಕ್ರಮಗಳನ್ನು ಬಳಸಿದವು. ಮೆಸಪೊಟೇಮಿಯನ್ ಅಷ್ಟೇ ಅಲ್ಲದೆ, ಯಹೂದ್ಯರ ಕಾನೂನು ಕೂಡ ಅವಿಧೇಯ ಮಕ್ಕಳನ್ನು ಶಿಕ್ಷೆಗೆ ಒಳಪಡಿಸುವ ಅಧಿಕಾರವನ್ನು ತಂದೆಯರಿಗೆ ಕೊಟ್ಟಿತ್ತು; ಯಹೂದ್ಯರ ಕಾನೂನಿನಲ್ಲಿ ಇದು ಗಲ್ಲುಶಿಕ್ಷೆಯನ್ನೂ ಒಳಕೊಂಡಿತ್ತು: ಹೆತ್ತವರು ಸಾರ್ವಜನಿಕವಾಗಿ ತಮ್ಮ ಮಗ "ಹಟಮಾರಿ ಮತ್ತು ಅವಿಧೇಯ, ಹಾಗಾಗಿ

ಸಾರ್ವಜನಿಕರು ಅವನನ್ನು ಕಲ್ಲುಹೊಡೆದು ಸಾಯಿಸಬೇಕು"ಎಂದು ಘೋಷಿಸಬಹುದಿತ್ತು.[25]

ಕೊನೆಯದಾಗಿ, ಆರಂಭಿಕ ನಾಗರಿಕತೆಗಳಲ್ಲಿ ಬರವಣಿಗೆ ಇತ್ತು, ಇದರರ್ಥ, ಕೆಲವು ಮಕ್ಕಳಿಗೆ ಶಾಲಾಭ್ಯಾಸದ ಅವಕಾಶವಿತ್ತು. ಮೆಸೊಪೊಟೇಮಿಯಾದ ಅಳಿದುಳಿದ ಮಣ್ಣಿನ ಫಲಕಗಳಲ್ಲಿ ವಿದ್ಯಾರ್ಥಿಗಳ ಪಾಠಗಳ ಮತ್ತು ಪಾಠಗಳನ್ನು ಸರಿಯಾಗಿ ಕಲಿಯುವಂತೆ ಹೆತ್ತವರು ಮಕ್ಕಳಿಗೆ ಬೈದು ಬುದ್ಧಿಹೇಳುವುದರ ದಾಖಲೆ ಇದೆ. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿ, ತರಗತಿಗೆ ತಡವಾಗಿ ಬರುವ ವಿದ್ಯಾರ್ಥಿ ಭಯಭೀತನಾಗಿ, ಡವಗುಟ್ಟುವ ಎದೆಯೊಂದಿಗೆ ನಿಲ್ಲುವ, ಏಟು ತಿನ್ನುವ ದಾಖಲೆಗಳು ಮತ್ತು ಇದೇ ಸಂದರ್ಭದಲ್ಲಿ ಶಿಕ್ಷಕರು ತಮ್ಮನ್ನು ವಿದ್ಯಾರ್ಥಿಗಳ ಮನೆಗೆ ಊಟಕ್ಕೆ ಆಮಂತ್ರಿಸಿಕೊಳ್ಳುತ್ತಿರುವ ದಾಖಲೆಗಳು ಕೂಡ ಇವೆ. ಎಲ್ಲಾ ಕೃಷಿ-ಆಧಾರಿತ ನಾಗರಿಕತೆಗಳಲ್ಲಿ ಕೆಲಸಕ್ಕಾಗಿ ಬಹುತೇಕವಾಗಿ ಮಕ್ಕಳನ್ನು ಅವಲಂಬಿಸಿರುವುದರಿAದ ಶಾಲಾಭ್ಯಾಸವು ಬಾಲ್ಯದ ಪ್ರಮುಖ ಗುರುತಾಗಿ ಕಾಣಿಸಿಕೊಳ್ಳುತ್ತದೆ. ಇದು ವಿವಿಧ ಸಾಮಾಜಿಕ ವರ್ಗಗಳನ್ನು ರೂಪಿಸುತ್ತಿತ್ತು ಮತ್ತು ಗಂಡು ಹೆಣ್ಣುಗಳನ್ನು ಪರಸ್ಪರ ಬೇರ್ಪಡಿಸುತ್ತಿತ್ತು.[26]

ಆರಂಭದ ಹಲವು ನಾಗರಿಕತೆಗಳು ಬಾಲ್ಯವನ್ನು ಕೆಲವು ನಿರ್ದಿಷ್ಟ ರೀತಿಯಲ್ಲಿ ನೋಡಿದವು ಎಂಬುದು ಸ್ಪಷ್ಟವಾಗಿದ್ದರೂ –ಉದಾಹರಣೆಗೆ, ಫಿನೀಶಿಯನ್ನರು, ಸಾಮಾನ್ಯ ಪದ್ಧತಿಯಲ್ಲದಿದ್ದರೂ, ಕೆಲವು ಧಾರ್ಮಿಕ ಉದ್ದೇಶಗಳಿಗಾಗಿ ಮಕ್ಕಳನ್ನು ಬಲಿ ಕೊಡುತ್ತಿದ್ದರು; ಈಜಿಪ್ಟಿನ ಜನರು ಶಿಶುಹತ್ಯೆ ಮಾಡುತ್ತಿರಲಿಲ್ಲ. ಇದನ್ನು ನೋಡಿ ಗ್ರೀಸ್ ದೇಶದ ಪ್ರವಾಸಿಗರಿಗೆ ಆಶ್ಚರ್ಯವಾಗುತ್ತಿತ್ತು. ಈ ಹೋಲಿಕೆಗಳನ್ನು ಇನಷ್ಟು ಅರ್ಥಪೂರ್ಣಗೊಳಿಸಲು ಬೇಕಾಗುವಷ್ಟು ದಾಖಲೆಗಳು ನಮಗೆ ಲಭ್ಯವಿಲ್ಲ. ಇದಕ್ಕಾಗಿ ನಾವು ಇತಿಹಾಸದ ಅನಂತರದ ಘಟ್ಟಕ್ಕೆ, ಅಂದರೆ ಸುಮಾರು ಕ್ರಿ.ಪೂ 1000ದಿಂದ ಸರಿಸುಮಾರು ಕ್ರಿ.ಶ 500ರತನಕದ ಅಭಿಜಾತ ಇತಿಹಾಸದ ಅವಧಿಗೆ ಬರಬೇಕು. ಇದು ಬೃಹತ್ ನಾಗರಿಕತೆಗಳು ದೀರ್ಘಕಾಲ ಬಾಳುವ ವಿಶೇಷ ಸಂಸ್ಕೃತಿಗಳನ್ನು ಮತ್ತು ಸಂಸ್ಥೆಗಳನ್ನು ರೂಪಿಸುತ್ತಿದ್ದ ಕಾಲ; ಈ ಕಾಲವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ನಾವು ಅನಿವಾರ್ಯವಾಗಿ ಹೋಲಿಕೆಯನ್ನು ವಿಶ್ಲೇಷಣೆಯ ಪ್ರಮುಖ ಅಂಶವಾಗಿಸಬೇಕಾಗುತ್ತದೆ ಮತ್ತು ಇದನ್ನು ಬಾಲ್ಯಕ್ಕೆ ಅನ್ವಯಿಸುವುದು ಆಸಕ್ತಿದಾಯಕ ಸಾಧ್ಯತೆಗಳನ್ನು ಹುಟ್ಟುಹಾಕುತ್ತದೆ.

ಜಾಗತಿಕ ಇತಿಹಾಸದ ಪಠ್ಯ ಮತ್ತು ಕೆಲಮಟ್ಟಿನ ವಿದ್ವತ್ತೆ ಅಭಿಜಾತ ನಾಗರಿಕತೆಗಳನ್ನು ಪರಸ್ಪರ ಭಿನ್ನ ನೆಲೆಗಳಲ್ಲಿ ನೋಡುತ್ತವೆ. ಚೀನೀಯರ ವಿಜ್ಞಾನವು ಗ್ರೀಕರ ಸೈದ್ಧಾಂತಿಕ ವಿಜ್ಞಾನಕ್ಕಿಂತ ಹೆಚ್ಚು ಪ್ರಾಯೋಗಿಕವಾಗಿತ್ತು; ಚೀನೀ ಕೇಂದ್ರೀಕರಣಕ್ಕೆ ಪ್ರತಿಯಾಗಿ ಭಾರತೀಯ ಮತ್ತು ಸಾಮಾನ್ಯವಾಗಿ ಮೆಡಿಟರೇನಿಯನ್ ರಾಷ್ಟ್ರಗಳಲ್ಲಿ ಕಾಣಸಿಗುವ ರಾಜಕೀಯ ವಿಕೇಂದ್ರಿಕರಣ; ಮೆಡಿಟರೇನಿಯನ್ ಗುಲಾಮಗಿರಿಗೆ ಪ್ರತಿಯಾಗಿ ಭಾರತೀಯ ಜಾತಿವ್ಯವಸ್ಥೆ ಮತ್ತು ಚೀನಾದ

[25] *Deuteronomy 21:18-21 KJV.*

[26] *A. R. Colon with P. A. Colon, A History of Children: A Socio-cultural Survey across Millennia (Westport, CT: Greenwood Press, 2001).*

ಕನ್‌ಫ್ಯೂಶಿಯನ್ ಶ್ರೇಣೀಕರಣ; ಭಾರತೀಯ ಧಾರ್ಮಿಕತೆಗೆ ಪ್ರತಿಯಾಗಿ ಹೆಚ್ಚಿನ ಮಟ್ಟಿಗೆ ಜಾತ್ಯತೀತವಾಗಿದ್ದ ಮೆಡಿಟರೇನಿಯನ್ ಮತ್ತು ಚೀನದ ಮೇಲ್ವರ್ಗದವರ ಸಂಸ್ಕೃತಿ – ಈ ಪಟ್ಟಿ ದೊಡ್ಡದಿದೆ ಮತ್ತು ಅದು ರಾಜಕೀಯ, ಬೌದ್ಧಿಕ, ಸಾಮಾಜಿಕ ಹಾಗೂ ತಾಂತ್ರಿಕ ಇತಿಹಾಸದವರೆಗೆ ವಿಶಾಲ ನೆಲೆಯಲ್ಲಿ ಹಲವಾರು ಸಂಸ್ಥೆಗಳಿಗೆ ಮತ್ತು ವರ್ತನೆಗಳಿಗೆ ಅನ್ವಯವಾಗುತ್ತದೆ. ಆದರೆ ಇವೆಲ್ಲದರ ನಡುವೆ ಕೆಲವು ಸಾಮಾನ್ಯ ಅಂಶಗಳಿವೆ: ಈ ಮೂರೂ ಅಭಿಜಾತ ನಾಗರಿಕತೆಗಳು ತಮ್ಮ ಸಾಮ್ರಾಜ್ಯ ವಿಸ್ತರಣಾ ಪ್ರವೃತ್ತಿಗೆ ಹೆಸರಾಗಿದ್ದವು; ತಮ್ಮ ವಿಸ್ತಾರವಾದ ಭೂಪ್ರದೇಶಗಳನ್ನು ಸಾಂಸ್ಕೃತಿಕ, ರಾಜಕೀಯ ಮತ್ತು ವ್ಯಾವಹಾರಿಕ ಸಂಬಂಧಗಳ ಮೂಲಕ ಒಗ್ಗೂಡಿಸುವುದಕ್ಕೆ ಕಠಿಣ ಶ್ರಮಪಡುತ್ತಿದ್ದವು ಮತ್ತು ಇವುಗಳೆಲ್ಲವೂ ಪಿತೃಪ್ರಧಾನವಾಗಿದ್ದವು. ಇಲ್ಲಿ ಪ್ರಶ್ನೆ ಏನೆಂದರೆ, ಬಾಲ್ಯದಂತಹ ಹೆಚ್ಚು ಅನ್ವೇಷಣೆಗೆ ಒಳಗಾಗದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಭಿನ್ನತೆ ಮತ್ತು ಸಾಮಾನ್ಯತೆಯಲ್ಲಿ ಯಾವುದಕ್ಕೆ ಹೆಚ್ಚು ಪ್ರಾಧಾನ್ಯವನ್ನು ಕೊಡಬೇಕು? ಇವೆರಡರಲ್ಲಿ ಯಾವುದು ಪ್ರಧಾನ ತುಲನಾತ್ಮಕ ಚೌಕಟ್ಟನ್ನು ಪರಿಣಾಮಕಾರಿಯಾಗಿ ವಿವರಿಸುತ್ತದೆ? ಇದನ್ನು ನಾವು ಒಂದು ಚೀನೀ ಸನ್ನಿವೇಶವನ್ನು ವಿಶ್ಲೇಷಿಸಿ ಅನಂತರ ಮತ್ತು ಒಂದು ಅಭಿಜಾತ ಮೆಡಿಟರೇನಿಯನ್ ಸನ್ನಿವೇಶದೊಂದಿಗೆ ತುಲನೆ ಮಾಡೋಣ.

ಚೀನಾದಲ್ಲಿ ಬಾಲ್ಯಾವಸ್ಥೆಯ ವೈಶಿಷ್ಟ್ಯವನ್ನು ನಿರೂಪಿಸಿದ ಎರಡು ಪ್ರಮುಖ ಅಂಶಗಳಲ್ಲಿ ಒಂದು ನಮ್ಮ ಸಾಮಾನ್ಯ ಊಹೆಗೆ ನಿಲುಕುವಂತಹದ್ದು, ಇನ್ನೊಂದು ಅಷ್ಟರ ಮಟ್ಟಿಗೆ ಊಹೆಗೆ ದಕ್ಕುವಂತಹುದಲ್ಲ. ಹಾನ್ ರಾಜವಂಶದ ಬೆಂಬಲವಿದ್ದ ಕನ್‌ಫ್ಯೂಶಿಯನ್ ಮತದ ಪ್ರಭಾವ ವ್ಯಾಪಕವಾಗಿದ್ದು, ಇದು ಮುಖ್ಯವಾಗಿ ಮೇಲ್ವರ್ಗದಲ್ಲಿ ಬಾಲ್ಯಕಾಲವನ್ನು ಹಲವು ಆಚರಣೆಗಳಿಗೆ ಒಳಪಡಿಸಿತ್ತು. ಮಕ್ಕಳು ಪ್ರತಿದಿನ ಹೆತ್ತವರಿಗೆ ಔಪಚಾರಿಕವಾಗಿ ವಂದಿಸಿ, ಚಳಿಗಾಲವಾಗಿದ್ದರೆ ಅವರು ಸಾಕಷ್ಟು ಬೆಚ್ಚಗಿನ ಉಡುಪನ್ನು ಧರಿಸಿದ್ದಾರೆಯೇ ಅಥವಾ ಬೇಸಿಗೆಯಾಗಿದ್ದರೆ ಸಾಕಷ್ಟು ತಂಪಾದ ಬಟ್ಟೆಯನ್ನು ಹಾಕಿಕೊಂಡಿರುವರೆ ಎಂದು ವಿಚಾರಿಸಿಕೊಳ್ಳಬೇಕಾಗಿತ್ತು. ಕೂಡು ಕುಟುಂಬಗಳಲ್ಲಿ ಆಗಾಗ್ಗೆ ನಡೆಯುವ ಆಚರಣೆಗಳು ಸಾಕಷ್ಟು ದೀರ್ಘವಾಗಿರುತ್ತಿದ್ದವು: ಉದಾಹರಣೆಗೆ, ಹಿರಿಯ ಮಗ ದ್ವಾರದ ಎಡಗಡೆ ಹೋಗಬೇಕು, ಹಿರಿಯ ಮಗಳು ದ್ವಾರದ ಬಲಗಡೆ ಹೋಗಬೇಕು (ಇಬ್ಬರೂ ದಕ್ಷಿಣಕ್ಕೆ ಮುಖಮಾಡಿ ನಿಲ್ಲಬೇಕು) ಮತ್ತು ಅವರ ಇತರ ಎಲ್ಲ ಸಹೋದರ ಸಹೋದರಿಯರು ಅವರಿಗೆ ತಲೆಬಾಗಿ ನಮಸ್ಕರಿಸಬೇಕು.[27] ಕನ್‌ಫ್ಯೂಶಿಯನ್ ಮತವು ಮಕ್ಕಳ ವೈಯಕ್ತಿಕತೆಗಿಂತ ಮಿಗಿಲಾಗಿ ಕುಟುಂಬದ ಒಕ್ಕಟ್ಟನ್ನು ಪ್ರೋತ್ಸಾಹಿಸುತ್ತಿತ್ತು; ಚೀನೀ ಕಲೆ ಮತ್ತು ಕಥೆಗಳು ಇದಕ್ಕೆ ತಕ್ಕಂತೆ ಮಕ್ಕಳನ್ನು ಆದರ್ಶ ಮಾದರಿಗಳಾಗಿ ಚಿತ್ರಿಸುತ್ತಿದ್ದವೇ ಹೊರತು ವ್ಯಕ್ತಿಗಳಾಗಿ ಅಲ್ಲ. ಈ ಸಾಮಾನ್ಯ ಸಂಸ್ಕೃತಿಯಿಂದ ವಿಧೇಯತೆಗೆ ಹೆಚ್ಚಿನ ಮಹತ್ವ ಬಂದಿತು ಮತ್ತು ಕಾನೂನಿನ ಪ್ರಕಾರ ಕೂಡ ತಂದೆತಾಯಿಗಳಿಗೆ ಮಕ್ಕಳನ್ನು ಶಿಸ್ತಿಗೆ ಒಳಪಡಿಸುವಲ್ಲಿ ಅನಿರ್ಬಂಧಿತ ಅಧಿಕಾರವಿತ್ತು –ಎಷ್ಟರ ಮಟ್ಟಿಗೆ ಎಂದರೆ, ಅವರು ಮಕ್ಕಳನ್ನು ಮರಣದಂಡನೆಗೆ ಒಳಪಡಿಸಿದರೂ

[27] *Anne Kinney, ed., Chinese Views of Childhood (Honolulu: University of Hawaii Press, 1995).*

ಅವರಿಗೆ ಅದಕ್ಕೆ ಯಾವುದೇ ಕಠಿಣ ಶಿಕ್ಷೆಯಾಗುತ್ತಿರಲಿಲ್ಲ; ಆದರೆ ಮಕ್ಕಳು ಮಾತ್ರ ಒಂದು ಸಾಮಾನ್ಯ ಅಶಿಸ್ತಿನ ಕಾರಣಕ್ಕೂ ಕೂಡ ಮರಣದಂಡನೆಗೆ ಒಳಗಾಗಬಹುದಿತ್ತು. ಬಹಳ ಪ್ರಚಲಿತವಿದ್ದ ಒಂದು ಗಾದೆಮಾತಿನ ಪ್ರಕಾರ, "ಜಗತ್ತಿನ ಯಾವ ತಂದೆ ತಾಯಿಯೂ ತಪ್ಪು ಮಾಡುವುದಿಲ್ಲ." ಕೊನೆಯದಾಗಿ, ಕನ್‌ಫ್ಯೂಶಿಯನ್ ಮತವು ಮೇಲ್ವರ್ಗದ ಮಕ್ಕಳ ಅದರಲ್ಲೂ ಮುಖ್ಯವಾಗಿ ಗಂಡುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿತ್ತು. ಇದು ಮಕ್ಕಳು ತಮ್ಮ ಅಧ್ಯಯನವನ್ನು ಅಚ್ಚುಕಟ್ಟಾಗಿ ಮಾಡುವಂತೆ ತಂದೆತಾಯಿಗಳು ಅವರತ್ತ ಗಮನಹರಿಸುವಂತೆ ಪ್ರೋತ್ಸಾಹಿಸಿತು.[28]

ಚೀನಿ ಬಾಲ್ಯದ ಎರಡನೆ ಪ್ರಮುಖ ಲಕ್ಷಣ ಅವರ ಕೌಟುಂಬಿಕ ವ್ಯವಸ್ಥೆಗೆ ಸಂಬಂಧಪಟ್ಟಿದ್ದಾಗಿದೆ. ಇದು ಕೆಲವೊಮ್ಮೆ ಕನ್‌ಫ್ಯೂಶಿಯನ್ ಬೋಧನೆಯೊಂದಿಗೆ ಸಂಘರ್ಷಕ್ಕೆ ಈಡಾಗುತ್ತಿತ್ತು ಕೂಡ. ಗಂಡಸರು ಉಪಪತ್ನಿಯರನ್ನು ಇಟ್ಟುಕೊಳ್ಳುವ ಪದ್ಧತಿಯಿಂದಾಗಿ ಬೇರೆ ಬೇರೆ ತಾಯಂದಿರ ಮಕ್ಕಳ ನಡುವೆ ತೀವ್ರ ವಿವಾದ ಉಂಟಾಗುತ್ತಿತ್ತು. ಇದರ ಬಗೆಗೆ ಅಧಿಕೃತವಾಗಿ ಮಾತಾಡಬಲ್ಲವರೊಬ್ಬರ ಪ್ರಕಾರ, ತಾಯಂದಿರಿಗೆ ತೀವ್ರವಾದ ಭಾವನೆಗಳು ಇರುವುದರಿಂದ ಗಂಡುಮಕ್ಕಳು ಬೇರೆಬೇರೆ ಗುಂಪುಗಳಾಗುತ್ತಿದ್ದರು. ಇದೇ ಸಂದರ್ಭದಲ್ಲಿ ಗಂಡುಮಕ್ಕಳು ತಾಯಂದಿರ ಬಗೆಗೆ ಬೆಳೆಸಿಕೊಳ್ಳುತ್ತಿದ್ದ ಅಸಾಮಾನ್ಯ ಅಕ್ಕರೆಯನ್ನೂ ಕೂಡ ಗಮನಿಸಬೇಕು. ಇದು ತಂದೆತಾಯಿಗಳ ಬಗೆಗೆ ಇರಬೇಕಾದ ನಿಷ್ಠೆಯ ಮಹತ್ವವನ್ನು ತೋರಿಸಿದರೂ, ಇಲ್ಲಿ ನಮಗೆ ಕಾಣುವ ಮಾತೃಪ್ರೇಮವು ಕೆಲವು ಕನ್‌ಫ್ಯೂಶಿಯನ್ ಗುಣಲಕ್ಷಣಗಳಿಗೆ ವಿರೋಧಾತ್ಮಕ ಪ್ರತಿಕ್ರಿಯೆಯಾಗಿ ಬೆಳೆದಂತೆ ಕಾಣಿಸುತ್ತದೆ. ಕುಟುಂಬದ ಶ್ರೇಣೀವ್ಯವಸ್ಥೆಯಲ್ಲಿ ಬಹುಶಃ ತಂದೆಯರು ಮೇಲೆ ಇದ್ದುದರಿಂದ, ಅವರ ಬಗೆಗೆ ಇಷ್ಟು ಗೌರವ ಇರುತ್ತಿರಲಿಲ್ಲ. ಹಾನ್ ರಾಜವಂಶ ಕಾಲದ ಚಿತ್ರವೊಂದು ತಾಯಿಯ ಬಗೆಗೆ ಆಜೀವಪರ್ಯಂತ ಇರುವ ಆಳವಾದ ಭಕ್ತಿಯ ಮಾದರಿಯೊಂದನ್ನು ತೋರಿಸುತ್ತದೆ: ವಯಸ್ಸಾದ ತಾಯಿಯೊಬ್ಬಳು ತನ್ನ ವಯಸ್ಸಿಗೆ ಬಂದ ಮಗನಿಗೆ ಹೊಡೆಯಲು ಸಜ್ಜಾಗಿ ನಿಂತಿದ್ದಾಳೆ ಆದರೆ ಮಗನ ಚಿಂತೆಯೆಂದರೆ ತನಗೆ ಹೊಡೆಯುವಾಗ ಬಡಕಲು ದೇಹದ ತನ್ನ ತಾಯಿಗೆ ಎಲ್ಲಿ ನೋವಾಗುತ್ತದೆಯೋ ಎಂಬುದು. ಕನ್‌ಫ್ಯೂಶಿಯನ್ ಮತದ ಊಹೆಗೆ ನಿಲುಕದ ಬಾಂಧವ್ಯಗಳು ಸಹಜವಾಗಿ ಬೆಳೆದವು ಮತ್ತು ಇವುಗಳು ಬಾಲ್ಯದ ಮೇಲೆ ಮತ್ತು ಮುಂದುವರಿದು ಮನುಷ್ಯನ ವ್ಯಕ್ತಿತ್ವದ ಮೇಲೆ ಬಲವಾದ ಪ್ರಭಾವವನ್ನು ಬೀರಿದವು.[29]

ಸಮಕಾಲೀನ ಸಮಾಜ ಕಲ್ಪಿಸಿಕೊಳ್ಳಬಹುದಾದಂತಹ ಮತ್ತು ಬಹುತೇಕ ಖಾಸಗಿ ವಿಷಯಕ್ಕೆ ಸಂಬಂಧಿಸಿದಂತೆ ಆಧುನಿಕ ಇತಿಹಾಸಕಾರರು ಒಂದು ಒಳನೋಟ ಗಳಿಸಿಕೊಳ್ಳಲು ಕನ್‌ಫ್ಯೂಶಿಯನ್ ಮತವು ವಿಧಿಸಿದ ಅನುಕೂಲಕರವಾದ ಬಾಲ್ಯದ ಅವಸ್ಥೆಯನ್ನು ಕುರಿತ ಕಟ್ಟುಪಾಡುಗಳನ್ನು ಮತ್ತು ಸಾಂಸ್ಕೃತಿಕ ಪದ್ಧತಿಗಳನ್ನು ಅಭಿಜಾತ ಮೆಡಿಟರೇನಿಯನ್ ಸಮಾಜಕೊಡಲಿಲ್ಲ. ಸಂತೋಷದ

[28] *Michael Loewe, Everyday Life in Early Imperial China During the Han Period 202 B.C.–A.D. 220 (New York: Putnam, 1968).*

[29] *Patricia Ebrey, Women and the Family in Chinese History (London: Routledge, 2003).*

ವಿಚಾರವೆಂದರೆ, ಗ್ರೀಸ್ ಮತ್ತು ಅದರಲ್ಲೂ ಮುಖ್ಯವಾಗಿ ರೋಮ್ ಕುರಿತ ಐತಿಹಾಸಿಕ ವಿದ್ವತ್ತೆ ನಮಗೆ ತುಲನಾತ್ಮಕ ಅಧ್ಯಯನ ಕೈಗೊಳ್ಳಲು ಅಗತ್ಯವಾದ ಕುತೂಹಲಕಾರಿ ಮಾಹಿತಿಗಳನ್ನು ಒದಗಿಸುತ್ತದೆ.

ಚೀನಾದ ಜೊತೆ ಹೋಲಿಸಿ ನೋಡಿದರೆ, ಅಭಿಜಾತ ಮೆಡಿಟರೇನಿಯನ್ ಕಾಲದ ಬಾಲ್ಯದ ಮೂರು ಲಕ್ಷಣಗಳು ಎದ್ದುಕಾಣುತ್ತವೆ. (ಲಭ್ಯವಿರುವ ಸಂಪನ್ಮೂಲಗಳು ಮತ್ತು ಕೆಲವು ಪ್ರಮುಖ ಪ್ರಾದೇಶಿಕ ವ್ಯತ್ಯಾಸಗಳ ಹೊರತಾಗಿ ಇವು ದೊರೆಯುತ್ತವೆ. ಉದಾಹರಣೆಗೆ, ಅಥೆನ್ಸಿಗೆ ಹೋಲಿಸಿದರೆ, ಸ್ಪಾರ್ಟಾದಲ್ಲಿ ನಮಗೆ ಶಿಶು ಹತ್ಯೆಯ ಪ್ರಕರಣಗಳು ಕಾಣಸಿಗುವುದಿಲ್ಲ.)

- ಮೊದಲಿಗೆ, ಚೀನಾದಲ್ಲಿ ನಮಗೆ ದೊರೆಯುವಷ್ಟು ತಂದೆತಾಯಿಗಳ ಜೊತೆಗೆ, ಅದರಲ್ಲೂ ಮುಖ್ಯವಾಗಿ ತಾಯಿಯ ಜೊತೆಗೆ ಮಕ್ಕಳ ತೀವ್ರವಾದ ಬಾಂಧವ್ಯದ ಬಗೆಗಿನ ದಾಖಲೆಗಳು ನಮಗೆ ಅಭಿಜಾತ ಮೆಡಿಟರೇನಿಯನ್ ನಾಗರಿಕತೆಯಲ್ಲಿ ದೊರಕುವುದಿಲ್ಲ. ಇದರ ಅರ್ಥ, ಮನುಷ್ಯನ ಅನುಭವದ ಭಾಗವಾಗಿ ಈ ಸಂಬಂಧಗಳು ಬೆಳೆಯಲೇ ಇಲ್ಲ ಎಂದಲ್ಲ; ಅವು ಒಂದು ಮಾದರಿಯಾಗಿ ಎದ್ದುಕಾಣುವುದಿಲ್ಲ ಅಷ್ಟೇ. ಹಲವಾರು ಮನೆಗಳಲ್ಲಿ, ಅದರಲ್ಲೂ ಮುಖ್ಯವಾಗಿ ಗಣ್ಯಮನೆತನಗಳಲ್ಲಿ, ಸ್ತನ್ಯದಾದಿಯರು ಒಳಕೊಂಡಂತೆ ಮಕ್ಕಳಿಗೆ ಒಡನಾಡಲು ಹೆಚ್ಚಿನ ಸಂಖ್ಯೆಯಲ್ಲಿ ಇತರ ವಯಸ್ಕರು ಸಿಗುತ್ತಿದ್ದ ಕಾರಣಕ್ಕೆ ಮಕ್ಕಳ ಭಾವನಾತ್ಮಕ ಗಮನವು ಹೆತ್ತವರ ಬಗೆಗೆ ಚೀನಾದಲ್ಲಿರುವುದಕ್ಕಿಂತ ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಿರುವ ಸಾಧ್ಯತೆ ಇದೆ. ತಂದೆಯರು ಶಿಸ್ತಿನ ಮೂರ್ತರೂಪಗಳಾಗಿದ್ದರೂ, ಬಾಲ್ಯದ ಆರಂಭಕಾಲದಲ್ಲಿ ಮಕ್ಕಳೊಂದಿಗೆ ಹೆಚ್ಚು ತೊಡಗಿಕೊಂಡಿರುವ ಸಾಧ್ಯತೆ ಇರುವುದರಿಂದ ಇದು ತಾಯಂದಿರ ಮೇಲೆ ಇರಬಹುದಾದ ಪ್ರೀತಿಯನ್ನು ಕಡಿಮೆ ಮಾಡುತ್ತದೆ. ಹೆಚ್ಚಾಗಿ ರೋಮನ್ ಕಾಲದಲ್ಲಿ ಮೆಡಿಟರೇನಿಯನ್ ಕುಟುಂಬಗಳು ವಿಚ್ಛೇದನದ ಹೆಚ್ಚಿನ ಪ್ರಮಾಣ ಮತ್ತು ಇತರ ವ್ಯತ್ಯಯಗಳಿಂದಾಗಿ ಚೀನೀ ಕುಟುಂಬಗಳಿಗಿಂತ ಹೆಚ್ಚು ಅಸ್ಥಿರವಾಗಿದ್ದವು. ಆದರೆ ಅದೇ ಸಮಯದಲ್ಲಿ ಚೀನಾದಲ್ಲಿ ತಾಯಂದಿರು ತಮ್ಮ ಮಕ್ಕಳ ಬಗೆಗೆ ತೀವ್ರವಾದ ಗಮನಕೊಡಲು ಕಾರಣವಾಗುತ್ತಿದ್ದ ಪತ್ನಿ-ಉಪಪತ್ನಿಯರ ನಡುವಿನ ಜಗಳಗಳು ಮತ್ತು ಆಂತರಿಕ ವೈರವು ಮೆಡಿಟರೇನಿಯನ್ ನಾಗರಿಕತೆಗಳಲ್ಲಿ ಪತ್ನಿ ಮತ್ತು ಉಪಪತ್ನಿಯರ ನಡುವೆ ಕಾಣಸಿಗುವುದಿಲ್ಲ. ಭಾವನಾತ್ಮಕ ಸಂಬಂಧಗಳು ಮತ್ತು ಪರಸ್ಪರ ಸಂವಹನದ ರೀತಿ ಸ್ವಲ್ಪ ಬೇರೆಯೇ ರೀತಿಯದ್ದಾಗಿದ್ದವು.[30]
- ವೈಯಕ್ತಿಕ ಗುಣಲಕ್ಷಣಗಳನ್ನು ವಿವರಿಸುವುದಕ್ಕೆ ಬದ್ಧವಾಗಿರುವಂತೆ ಗ್ರೀಸ್ ಮತ್ತು ರೋಮ್‌ಗಳಲ್ಲಿ ಅಭಿವೃದ್ಧಿಪಡಿಸಿದ ಕಲಾತ್ಮಕ ಶೈಲಿಗಳು ಮಕ್ಕಳ ಬಾಲ್ಯದ ಪ್ರತೀಕಗಳಾಗಿರುವಂತೆ ಹರಡಿದ್ದವು. ಇದು ಮಕ್ಕಳ ಬಾಲ್ಯವನ್ನು ಕುರಿತಂತೆ ಸಮಾಜಕ್ಕಿದ್ದ ಆಳವಾದ ಆಸಕ್ತಿಯನ್ನು ಕೂಡ ಪ್ರತಿಫಲಿಸುತ್ತದೆ; ಇಲ್ಲಿ ಶೈಲಿ ಅಥವಾ ಬಾಲ್ಯವನ್ನು ಕುರಿತ ಧೋರಣೆಗಳಲ್ಲಿ ಯಾವುದು ಮೊದಲು ಎಂಬ ಪ್ರಶ್ನೆ ಬರುತ್ತದೆ.) ತಾರಸಿ ಕೆಳಗೆ, ಗೋಡೆಯುದ್ದಕ್ಕೂ

[30] *Thomas Wiedemann, Adults and Children in the Roman Empire (New Haven: Yale University Press, 1989).*

ಇರುತ್ತಿದ್ದ ಅಲಂಕರಣಪಟ್ಟಿಗಳಲ್ಲಿ ಮತ್ತು ಇತರ ಕಲಾತ್ಮಕ ಪ್ರದರ್ಶನಗಳಲ್ಲಿ ಮಕ್ಕಳ ಚಿತ್ರಗಳು ಕಾಣಸಿಗುತ್ತವೆ ಮತ್ತು ಅವರ ಚಿತ್ರಗಳು ಚೀನದಲ್ಲಿ ಕಾಣುವುದಕ್ಕಿಂತ ಕಡಿಮೆ ಲಕ್ಷಣೀಕರಣಗೊಂಡಿರುತ್ತವೆ.[31]

- ಗ್ರೀಸ್ ಮತ್ತು ಅದರಲ್ಲೂ ಮುಖ್ಯವಾಗಿ ರೋಮ್‌ನಲ್ಲಿ ಬಾಲ್ಯದ ಬಗೆಗೆ ನಡೆದ ಚರ್ಚೆಗಳು ಚೀನದಲ್ಲಿ ಕಂಡುಬರುವುದಕ್ಕಿಂತ ಹೆಚ್ಚಾಗಿ ಯುವಕರ ಬಗೆಗೆ ತಮ್ಮ ಹೆಚ್ಚಿನ ಕಾಳಜಿಯನ್ನು ವ್ಯಕ್ತಪಡಿಸುತ್ತಿದ್ದವು; ಚೀನಾದಲ್ಲಿ ಕನ್‌ಫ್ಯೂಶಿಯನ್ ಮತವು ಕಟ್ಟುನಿಟ್ಟಾಗಿ ಹೇರಿದ ಶ್ರೇಣೀಕರಣ ಮತ್ತು ವಿಧೇಯತೆಯ ಮಾದರಿಗಳ ಕಾರಣದಿಂದ ಅಲ್ಲಿ ಯಾವುದೇ ಮುಕ್ತ ಚರ್ಚೆಗೆ ಅವಕಾಶ ಇರಲಿಲ್ಲ. ಮೆಡಿಟರೇನಿಯನ್ ಸಂಸ್ಕೃತಿಯು ಯೌವನ ಮತ್ತು ಯೌವನದ ಸುಪುಷ್ಟ ದೇಹರಚನೆಯ ಬಗೆಗೆ ಮೆಚ್ಚುಗೆಯನ್ನು ಹೊಂದಿತ್ತು. ಆದರೆ, ಯೌವನವನ್ನು ಅಷ್ಟೇ ಕಳವಳಕಾರಿಯಾದ, ಪ್ರಕ್ಷುಬ್ಧ ಮತ್ತು ಆಪತ್ಕಾರಿ ಕಾಲ ಎಂದು ಕೂಡ ಅವರು ಪರಿಗಣಿಸುತ್ತಿದ್ದರು. ಇದರಿಂದ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಹೊರಬಂದು ಪ್ರಬುದ್ಧತೆಯನ್ನು ಸಾಧಿಸುವುದನ್ನು ಎದುರುನೋಡಲಾಗುತ್ತಿತ್ತು. ಹೇಳಬೇಕೆಂದರೆ, ಯೌವನದ ಒಂದು ಅಪೇಕ್ಷಣೀಯ ಗುಣವಾಗಿ ಯುವಕರಲ್ಲಿ ಹೆಚ್ಚಿನ ವಿಮರ್ಶಾಶಕ್ತಿಯನ್ನು ಬೆಳೆಸುವ ಪ್ರಯತ್ನವನ್ನು ಸಾಕ್ರೆಟಿಸ್ ಮಾಡುತ್ತಾರೆ, ಆದರೆ, ಅವರಿದ್ದ ಸಮಾಜಕ್ಕೆ ಯೌವನ ಎಚ್ಚರ ತಪ್ಪುವ ಬಗೆಗೆ ಹೆಚ್ಚಿನ ಆತಂಕವಿದ್ದದುದರಿಂದ ಅವರ ಈ ಪ್ರಯತ್ನಕ್ಕಾಗಿಯೇ ಅವರು ಶಿಕ್ಷೆಗೊಳಗಾಗುತ್ತಾರೆ. ಗ್ರೀಕ್ ಗಣ್ಯಸಮುದಾಯದಲ್ಲಿ (ಇದು ರೋಮನ್ನರಲ್ಲಿ ಕೂಡ ಇತ್ತು, ಆದರೆ ರೋಮನ್ನರಲ್ಲಿ ನಡುವೆ ಗ್ರೀಕರ ಅಭ್ಯಾಸಗಳಿಗೆ ಮನ್ನಣೆ ಇರಲಿಲ್ಲ) ಹಿರಿಯ ಮತ್ತು ಯುವಕರ ನಡುವೆ ಆಗಾಗೆ ಸಂಬಂಧಗಳು ಏರ್ಪಡುತ್ತಿದ್ದವು: ಇದು ಯೌವನದ ಧನಾತ್ಮಕ ಅಂಶಗಳ ಬಗೆಗೆ, ಅದರಲ್ಲೂ ರಸಾಭಿಜ್ಞತೆಯನ್ನು ಮತ್ತು ಲೈಂಗಿಕತೆಯನ್ನು ಒಪ್ಪಿಕೊಳ್ಳುವುದರೊಂದಿಗೆ ಹಿರಿಯರ ಮಾರ್ಗದರ್ಶನದ ಆವಶ್ಯಕತೆಯನ್ನು ಕೂಡ ಸೂಚಿಸುತ್ತದೆ. ಕೊನೆಯದಾಗಿ, ಚೀನಾದಲ್ಲಿ ಇದ್ದುದಕ್ಕಿಂತ ಹೆಚ್ಚಾಗಿ ಅಭಿಜಾತ ಮೆಡಿಟರೇನಿಯನ್ ನಾಗರಿಕತೆಯಲ್ಲಿ ಹದಿಹರೆಯದ ಯುವಕನ ಸಾವಿನ ಬಗೆಗೆ ಹೆಚ್ಚಿನ ದುಃಖ ವ್ಯಕ್ತವಾಗುತ್ತಿತ್ತು. ಸವಿಸ್ತಾರವಾದ ಅಂತ್ಯಕ್ರಿಯಾವಿಧಿಗಳನ್ನು ಆಚರಿಸುವ ಮೂಲಕ ಅಕಾಲಿಕವಾಗಿ ಮರಣಹೊಂದಿದ ಯುವಕನ ಕುಟುಂಬದ ಭವಿಷ್ಯತ್ತಿನ ಆಧಾರ ಸ್ತಂಭ ಕುಸಿದು ಹೋದ ಕಾರಣದಿಂದ ಆದ ಭರಿಸಲಾರದ ನಷ್ಟಕ್ಕೆ ಮುಕ್ತ ಶೋಕವನ್ನು ಆಚರಿಸಲಾಗುತ್ತಿತ್ತು. ಇನ್ನೊಮ್ಮೆ, ಒಟ್ಟಾರೆಯಾಗಿ ಹೇಳುವುದಾದರೆ, ಚೀನಾಕ್ಕೆ ಹೋಲಿಸಿದರೆ ಮೆಡಿಟರೇನಿಯನ್ ನಾಗರಿಕತೆಯಲ್ಲಿ ನಮಗೆ ಯೌವನದ ಸಂಕೀರ್ಣತೆಯು ಅದರ ವಿವಿಧ ಆವೇಗಗಳು ಮತ್ತು ಮೌಲ್ಯಮಾಪನಗಳಿಂದ ತನ್ನದೇ ಆದ ಒಂದು ಪ್ರತ್ಯೇಕ ವರ್ಗವಾಗಿ ಕಾಣಿಸುತ್ತದೆ. ಕಲಾಪ್ರಕಾರಗಳಲ್ಲಿ ಮಕ್ಕಳ ವಿಶಿಷ್ಟತೆಯನ್ನು

[31] Geoffrey Nathan, The Family in Late Antiquity: The Rise of Christianity and the Endurance of Tradition(New York: Routledge, 2000); Sarah Pomeroy, Families in Classical and Hellenistic Greece: Representations and Realities (Oxford: Clarendon Press, 1997); Beryl Rawson, Marriage, Divorce and Children in Ancient Rome (Oxford: Clarendon Press, 1991).

ಗುರುತಿಸುವಲ್ಲಿ ಹೆಚ್ಚಿನ ಆಸಕ್ತಿಯು ಅವರನ್ನು ಕುರಿತಾಗಿ ಸಮಾಜಕ್ಕೆ ಇದ್ದ ಮೂಲಭೂತ ನಿಲವನ್ನು ಕೂಡ ಪ್ರತಿನಿಧಿಸುತ್ತದೆಯೇ?[32]

ಈ ಎರಡು ಸಮಾಜಗಳ ನಡುವೆ ಯಾವುದೇ ರೀತಿಯ ಅರ್ಥಪೂರ್ಣ ಸಂಪರ್ಕ ನಮಗೆ ಎಲ್ಲೂ ಕಂಡುಬರದಿದ್ದ ಸಂದರ್ಭದಲ್ಲಿ ಕೂಡ ಅವುಗಳ ಭಿನ್ನ ಸಾಮಾಜಿಕ ಮತ್ತು ಕೌಟುಂಬಿಕ ಸಂರಚನೆಗಳಿಂದ ಹುಟ್ಟಿಕೊಂಡ ಕೌತುಕಮಯ ವ್ಯತ್ಯಾಸಗಳಿಗಿಂತ ಹೆಚ್ಚಾಗಿ ಅವುಗಳ ನಡುವೆ ಇರುವ ಸಾಮ್ಯತೆಗಳು ನಮಗೆ ಅಚ್ಚರಿ ಹುಟ್ಟಿಸುತ್ತವೆ. ಕೆಲವೊಂದು ಸಾಮ್ಯತೆಗಳನ್ನು ನಾವು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು, ಆದರೆ ಬಾಲ್ಯಕ್ಕೆ ಸಂಬಂಧಪಟ್ಟಂತೆ, ಪ್ರಬಲವಾದ ಎರಡು ಪ್ರತ್ಯೇಕವಾದ ಸಂಸ್ಕೃತಿ ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿ ಸಾಮ್ಯತೆಗಳು ನಿರೀಕ್ಷೆಯನ್ನೂ ಮೀರಿರುತ್ತವೆ ಎಂಬುದನ್ನೂ ಇವು ಸೂಚಿಸುತ್ತವೆ.

ಸ್ಪಷ್ಟವಾಗಿ ಕಂಡುಬರುವ ಕೆಲವು ಸಾಮ್ಯತೆಗಳು ಕೃಷಿ-ಆಧಾರಿತ ಸಮುದಾಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಜನನ ಪ್ರಮಾಣ ನಿಯಂತ್ರಣ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಶಿಶು ಮರಣದ ಕಾರಣಕ್ಕೆ ಸಂಬಂಧಪಟ್ಟವುಗಳು. ಹೆಣ್ಣು ಶಿಶುಗಳ ಹತ್ಯೆ ವ್ಯಾಪಕವಾಗಿತ್ತು. ಅಥೆನ್ಸಿನಲ್ಲಿ ಹುಟ್ಟಿದ ಹೆಣ್ಣುಮಕ್ಕಳ ಪೈಕಿ 20%ದಷ್ಟು ಹತ್ಯೆಗೀಡಾಗುತ್ತಿದ್ದರು ಎಂಬ ಅಂದಾಜಿದೆ. ರೋಮ್‌ನಲ್ಲಿ ಈ ಸಂಖ್ಯೆ ಕಡಿಮೆ ಇರಬಹುದು, ಆದರೆ ಅವರಲ್ಲಿ ಸ್ವಲ್ಪಮಟ್ಟಿಗೆ ಗಂಡುಮಕ್ಕಳನ್ನು ಕೂಡಾ ತ್ಯಜಿಸುವ ಪದ್ಧತಿ ಇತ್ತು. ರೋಮ್ ಸಾಮ್ರಾಜ್ಯವು (ಚೀನಾದಲ್ಲಿದ್ದಂತೆಯೇ) ಈ ಪದ್ಧತಿಯ ವಿರುದ್ಧ ಕಾನೂನುಗಳನ್ನು ಜಾರಿ ಮಾಡಿದ್ದರೂ, ಈ ಕಾನೂನುಗಳು ದುರ್ಬಲವಾಗಿದ್ದವು. ರೋಮನ್ನರು ಗರ್ಭನಿರೋಧಕ ಮತ್ತು ಗರ್ಭಪಾತದಂತಹ ಪ್ರಯೋಗಗಳನ್ನು ಕೂಡ ಮಾಡುತ್ತಿದ್ದರು. ಚೀನಾದಲ್ಲಿದ್ದಂತೆಯೇ ಇಲ್ಲಿ ಕೂಡ ಎಳೆಯ ಮಕ್ಕಳ ಸಾವಿಗೆ ಹೆಚ್ಚಿನ ಮಹತ್ವ ಇರಲಿಲ್ಲ. ಎಪಿಕ್ಟೆಟಸ್ ಎಂಬ ಬರಹಗಾರ, "ನೀವು ನಿಮ್ಮ ಮಗುವಿಗೆ ಮುತ್ತಿಡುವ ಸಂದರ್ಭದಲ್ಲಿ ಬಹುಶಃ ನಾಳೆ ಬೆಳಿಗ್ಗೆಯಷ್ಟು ಹೊತ್ತಿಗೆ ಈ ಮಗು ಬದುಕುಳಿಯದೆ ಇರಬಹುದು ಎಂದು ನಿಮಗೆ ನೀವೇ ಹೇಳಿಕೊಳ್ಳುತ್ತಿರುತ್ತೀರಿ," ಎಂದು ಹೇಳುತ್ತಾನೆ. ರೋಮನ್ ಬರಹಗಾರ ಪ್ಲುಟಾರ್ಕ್ ಹೇಳುವಂತೆ, ಎಳೆಯ ಮಕ್ಕಳ ಅಂತ್ಯಕ್ರಿಯೆಯಲ್ಲಿ ಜನರು ಹೆಚ್ಚು ಹೊತ್ತು ಹಾಜರಿರುತ್ತಿರಲಿಲ್ಲ ಮತ್ತು ಅವರ ಸಮಾಧಿಯ ಬಳಿ ಯಾವುದೇ ಕಾವಲು ಕೂಡ ಇರುತ್ತಿರಲಿಲ್ಲ. ಮಗು ಹುಟ್ಟಿ ಎಂಟು ದಿನಗಳ ಅನಂತರ ಅದಕ್ಕೆ ಜನ್ಮವಿಧಿಗಳನ್ನು ನೆರವೇರಿಸಿ, ಕೆಟ್ಟದೃಷ್ಟಿ ತಾಕದಂತೆ ಅದಕ್ಕೆ ತಾಯಿತವನ್ನು ಕಟ್ಟಲಾಗುತ್ತಿತ್ತು.[33] ಚೀನಾದಲ್ಲಿದ್ದಂತೆ ಅಭಿಜಾತ ಮೆಡಿಟರೇನಿಯನ್ ಕುಟುಂಬಗಳಲ್ಲಿ ಕೂಡ ಹುಡುಗರಿಗೆ ಹದಿನೈದು ವರ್ಷ ತುಂಬುತ್ತಿದ್ದಂತೆ ಅವರು ಪ್ರೌಢಾವಸ್ಥೆಗೆ ಬಂದುದನ್ನು ಸಂಭ್ರಮಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು; ರೋಮಿನಲ್ಲಿ ಈ ಸಂದರ್ಭದಲ್ಲಿ ಹುಡುಗರಿಗೆ ವಯಸ್ಕರ ಬಟ್ಟೆಯಾದ ಟೋಗಾವನ್ನು ಧರಿಸಲು ಕೊಟ್ಟು, ಮಗುವಾಗಿದ್ದಾಗ ಅವರಿಗೆ ಕಟ್ಟಿದ್ದ ತಾಯಿತವನ್ನು ತೆಗೆದುಹಾಕಲಾಗುತ್ತಿತ್ತು.

[32] Emiel Eyben, Restless Youth in Ancient Rome, trans. Patrick Daly (London: Routledge, 1993).
[33] *From his Art of Living (San Francisco: Harper, 1997), p. 42; see also Suzanne Dixon, ed., Childhood, Class and Kin in the Roman World (London: Routledge, 2001).*

ಮಕ್ಕಳ ಓದುಬರಹಗಳಿಗೆ ಕೊಟ್ಟ ಗಮನ ಅತ್ಯಲ್ಪವಾಗಿರುತ್ತಿತ್ತು., ವೈದ್ಯಕೀಯ ಬರವಣಿಗೆಗಳನ್ನು ಕುರಿತು ಯಾವುದೇ ಆಸಕ್ತಿ ಅವರಲ್ಲಿ ಕಂಡುಬರುತ್ತಿರಲಿಲ್ಲ.

ಚೀನಾದಲ್ಲಿ ಇದ್ದಂತೆಯೇ ಸಂಪೂರ್ಣವಾಗಿ ಅಲ್ಲದಿದ್ದರೂ, ಅಭಿಜಾತ ಮೆಡಿಟರೇನಿಯನ್ ಸಮಾಜದಲ್ಲಿ ಕೂಡ ಗಂಡು ಮತ್ತು ಹೆಣ್ಣು ಮಕ್ಕಳ ನಡುವಿನ ವ್ಯತ್ಯಾಸಗಳನ್ನು ಬಲವಾಗಿ ಪ್ರತಿಪಾದಿಸಲಾಗುತ್ತಿತ್ತು. ಗಂಡುಮಕ್ಕಳ ಶಾಲಾಭ್ಯಾಸಕ್ಕೆ ಹೆಚ್ಚಿನ ಅವಕಾಶವಿತ್ತು. ಮೇಲ್ವರ್ಗದ ಹೆಣ್ಣುಮಕ್ಕಳಿಗೆ ಮಾತ್ರ ವೈಯಕ್ತಿಕವಾಗಿ ಶಿಕ್ಷಕರನ್ನು ನಿಯೋಜಿಸಲಾಗುತ್ತಿತ್ತು; ಅವರಿಗಾಗಿ ಕೆಲವು ಶಾಲೆಗಳು ಕೂಡ ಇದ್ದವು. ಈ ಎರಡೂ ಅಭಿಜಾತ ಸಮಾಜಗಳಲ್ಲಿ ಶಾಲೆಗೆ ಹೋಗುವ ಅವಕಾಶ ಕೇವಲ ಮೇಲ್ವರ್ಗದ ಮಕ್ಕಳಿಗೆ ಮಾತ್ರ ಇದ್ದದ್ದು ಆಶ್ಚರ್ಯವೆನಿಸುವುದಿಲ್ಲ. ಆದರೆ ತಮ್ಮ ಮಕ್ಕಳ ಭವಿಷ್ಯತ್ತಿನ ದೃಷ್ಟಿಯಿಂದ ಅವರಿಗೆ ವಿದ್ಯಾಭ್ಯಾಸ ಕೊಡಿಸುವ ಆಸಕ್ತಿ ಕೆಳವರ್ಗದಲ್ಲೂ ಕಂಡುಬರುತ್ತದೆ. ಚೀನಾ ಮತ್ತು ಮೆಡಿಟರೇನಿಯನ್ ಸಮಾಜಗಳಲ್ಲಿ ಪಠ್ಯದ ವಿಷಯ ಮತ್ತು ವಸ್ತುವಿನಲ್ಲಿ ವ್ಯತ್ಯಾಸವಿರುತ್ತಿತ್ತು – ಗ್ರೀಕ್ ಮತ್ತು ರೋಮನ್ ಶಿಕ್ಷಣದಲ್ಲಿ ಭಾಷಣ ಕಲೆಯ ಬಗೆಗೆ ಹೆಚ್ಚಿನ ಒತ್ತು ನೀಡುತ್ತಿದ್ದುದು ಕಂಡುಬರುತ್ತದೆ. ಆದರೆ, ಈ ಎರಡೂ ಸಮಾಜಗಳು ರಾಜಕೀಯ ಇತಿಹಾಸ ಮತ್ತು ಸಾಹಿತ್ಯದ ಮೇರುಕೃತಿಗಳ ಬಗೆಗೆ ಹೆಚ್ಚಿನ ಒಲವನ್ನು ತೋರಿಸುತ್ತಿದ್ದವು ಮತ್ತು ಕಂಠಪಾಠಕ್ಕೆ ಹೆಚ್ಚಿನ ಒತ್ತನ್ನು ಕೊಡಲಾಗುತ್ತಿತ್ತು. ಮೇಲ್ವರ್ಗದ ಮಕ್ಕಳು ಅನುಸರಿಸಬೇಕಾದ ವರ್ತನೆಯನ್ನು ಕುರಿತ ಪಾಠಗಳು ಕನ್‌ಫ್ಯೂಶಿಯನ್ ಚೀನಾದಲ್ಲಿ ಇದ್ದುದಕ್ಕಿಂತ ಮೆಡಿಟರೇನಿಯನ್ ಸಮಾಜದಲ್ಲಿ ಕಡಿಮೆ ಇದ್ದರೂ, “ನಡೆಯುವ ರೀತಿ... ಊಟ ಮಾಡುವ ರೀತಿ” ಇವು ಮಕ್ಕಳನ್ನು ಬೆಳೆಸುವ ಜವಾಬ್ದಾರಿಯ ಪ್ರಮುಖ ಭಾಗವಾಗಿದ್ದವು.[34]

ಈ ಎರಡೂ ನಾಗರಿಕತೆಗಳ ಸ್ಪಷ್ಟ, ಆದರೆ ಊಹೆಗೆ ಸುಲಭವಾಗಿ ನಿಲುಕದಂತಹ ಲಕ್ಷಣವಾಗಿ ನಮಗೆ ಕಾಣಿಸುವುದು ಶಿಸ್ತು ಮತ್ತು ವಿಧೇಯತೆಯ ಬಗೆಗೆ ಅವು ನೀಡುತ್ತಿದ್ದ ಹೆಚ್ಚಿನ ಮಹತ್ವ. ಈ ಎರಡೂ ಸಮಾಜಗಳಲ್ಲಿ ಚಾಲ್ತಿಯಲ್ಲಿದ್ದ ಬೋಧನೆ, ಸಾಹಿತ್ಯ ಮತ್ತು ಕಾನೂನು ಎಲ್ಲವೂ “ತಮ್ಮ ಮಕ್ಕಳ ಮೇಲೆ ಯಾಜಮಾನ್ಯ ಸಾಧಿಸದ ಹೊರತು ಯಾರಿಗೆ ತಾನೇ ಮಕ್ಕಳನ್ನು ಬೆಳೆಸಲು ಸಾಧ್ಯ?”ಎಂಬ ಪ್ರಶ್ನೆಯನ್ನು ಕೇಳುವ ಮೂಲಕ ಅಥವಾ ತಂದೆ ಮತ್ತು ಕುಟುಂಬದ ಯಜಮಾನ ಇಬ್ಬರೂ ಒಂದೇ ಎಂದು ಹೇಳುವ ಮೂಲಕ ತಂದೆಯ ಅಧಿಕಾರವನ್ನು ಎತ್ತಿಹಿಡಿಯುತ್ತಿದ್ದವು.. ಗುಲಾಮ ಮತ್ತು ಯಜಮಾನನ ಸಂಬಂಧದ ಧಾಟಿಯಲ್ಲಿ ತಂದೆ-ಮಕ್ಕಳ ಬಗೆಗೆ ಮೆಡಿಟರೇನಿಯನ್ ಸಮಾಜದಲ್ಲಿ ಕೇಳಲ್ಪಡುವ ಮಾತುಗಳು ನಮಗೆ ಕನ್‌ಫ್ಯೂಶಿಯನ್ ಚೀನಾದಲ್ಲಿಯೂ ಕೇಳಸಿಗುತ್ತವೆ: ಭಾಷೆ ಬೇರೆ ಬೇರೆಯಾಗಿರಬಹುದು ಆದರೆ ಎರಡರ ಪರಿಣಾಮ ಒಂದೇ. ತಮ್ಮ ಮಕ್ಕಳನ್ನು ವೈಯಕ್ತಿಕ ಶಿಕ್ಷಕರ ಬಳಿಗೆ, ಅನಂತರ ಶಾಲೆಗಳಿಗೆ ಕಳುಹಿಸುತ್ತಿದ್ದ ಮೇಲ್ವರ್ಗದ ತಂದೆತಾಯಿಗಳು ಕೂಡ ಹುಡುಗರನ್ನು ಹದ್ದುಬಸ್ತಿನಲ್ಲಿಡಲು ಶಿಸ್ತಿನ ಕ್ರಮ ಅತ್ಯಗತ್ಯ ಎಂದು ನಂಬಿದ್ದರು. ಮೇಲ್ವರ್ಗದ ಶಾಲೆಗೆ ಹೋಗುವ ಅವಕಾಶವಿದ್ದ ಮಕ್ಕಳು ಸಹಾ

[34] *Rawson, Marriage.*

ದುಡಿಮೆಗೆ ಹಚ್ಚಿದ ಮಕ್ಕಳು ಅನುಭವಿಸುತ್ತಿದ್ದಷ್ಟೇ ಉಸಿರುಗಟ್ಟಿದ ವಾತಾವರಣದಲ್ಲಿ ಬೆಳೆಯುತ್ತಿದ್ದರು. ಮಕ್ಕಳನ್ನು ನಾವು ಒಂದು ವರ್ಗವಾಗಿ ಪರಿಗಣಿಸಿ ಹೇಳುವುದಾದರೆ ಅವರು ಶಾಲೆಯಲ್ಲಿನ ವಿದ್ಯಾಭ್ಯಾಸವನ್ನು ಆನಂದಿಸುತ್ತಿದ್ದರು ಎಂದು ಹೇಳುವುದು ಕಷ್ಟಸಾಧ್ಯ.[35]

ಮೆಡಿಟರೇನಿಯನ್ ಸಂಸ್ಕೃತಿಯಲ್ಲಿ ಮಕ್ಕಳ ಗುಣಗಳ ಬಗೆಗೆ ಚೀನಾದಲ್ಲಿದ್ದುದಕ್ಕಿಂತ ಹೆಚ್ಚಿನ ಮೆಚ್ಚುಗೆಯೂ ಇರಲಿಲ್ಲ. ಮಕ್ಕಳ ಮುಗ್ಧತೆ ಮತ್ತು ಹುಡುಗಾಟದಲ್ಲಿ ವಯಸ್ಕರಿಗೆ ಮೌಲ್ಯವು ಸೀಮಿತವಾಗಿ ಕಾಣುತ್ತಿತ್ತು – ಮಕ್ಕಳಿಗೆ ಆಟಿಕೆಗಳನ್ನು ಆಗಾಗ ಕೊಡಲಾಗುತ್ತಿತ್ತು ಮತ್ತು ಧಾರ್ಮಿಕವಿಧಿಗಳಲ್ಲಿ ಮಕ್ಕಳಿಗೆ ವಿಶೇಷ ಪಾತ್ರವಿತ್ತು. ಆದರೆ, ಪ್ಲೇಟೊ ಮತ್ತು ಅರಿಸ್ಟಾಟಲ್ ಅವರಂತಹ ಹಲವು ಪ್ರಮುಖ ಚಿಂತಕರು ಮಕ್ಕಳಾಟವನ್ನು ಆರಂಭದಲ್ಲಿಯೇ ನಿರ್ಬಂಧಿಸುವ ಅಗತ್ಯವನ್ನು ಪ್ರತಿಪಾದಿಸಿದರು; ಯಾವ ಮಗುವು ವಯಸ್ಕರ ರೀತಿಯ ಗಾಂಭೀರ್ಯವನ್ನು ಪ್ರದರ್ಶಿಸುತ್ತದೋ ಅದು ಹೆಚ್ಚಿನ ಮೆಚ್ಚುಗೆಗೆ ಪಾತ್ರವಾಗುತ್ತಿತ್ತು. ಕೊಕ್ಕರೆ ಮರಿಗಳು ತಮ್ಮ ತಂದೆ ತಾಯಿಗಳಿಗೆ ಸಹಾಯ ಮಾಡುತ್ತವೆ ಎಂಬ ನಂಬಿಕೆ ಕೊಕ್ಕರೆಗಳಿಗೂ ಮಕ್ಕಳಿಗೂ ಸಂಬಂಧ ಕಲ್ಪಿಸಲು ಮುಖ್ಯ ಕಾರಣವಾಗಿತ್ತು. ರೋಮನ್ನರು ಹಿರಿಯ ಮಕ್ಕಳನ್ನು ಹೆಚ್ಚಾಗಿ ಹೊಗಳುತ್ತಿದ್ದರು; ಬರಹಗಾರ ಪ್ಲೀನಿ ಹೆಣ್ಣು ಮಗುವೊಂದನ್ನು ಅವಳ ಪ್ರೌಢ ವಿವೇಚನಾಶೀಲತೆ ಮತ್ತು ವಿವಾಹಿತ ಸ್ತ್ರೀಯಂತಹ ಗಾಂಭೀರ್ಯದ ಕಾರಣಕ್ಕಾಗಿ ವಿಶೇಷವಾಗಿ ಪ್ರಸ್ತಾಪಿಸುತ್ತಾನೆ. ಮಕ್ಕಳು ಇರುವುದು ಕೆಲಸ (ಅಥವಾ ವಿದ್ಯಾಭ್ಯಾಸ) ಮಾಡಲು ಮತ್ತು ಕೌಟುಂಬಿಕ ಸಂತತಿಯನ್ನು ಮುಂದುವರಿಸಲೇ ಹೊರತು ತಮ್ಮ ವೈಯಕ್ತಿಕ ಮಹಾತ್ವಾಕಾಂಕ್ಷೆಗಳನ್ನು ಅಥವಾ ವೈಯಕ್ತಿಕತೆಯನ್ನು ವ್ಯಕ್ತಪಡಿಸಲು ಅಲ್ಲ. ಕಾನೂನುಗಳು ಮುಖ್ಯವಾಗಿ ರಚಿಸಲ್ಪಡುತ್ತಿದ್ದುದು ತಂದೆತಾಯಿಗಳ ಅಧಿಕಾರವನ್ನು ಮತ್ತು ಅವರ ಮಾರ್ಗದರ್ಶನದ ಮೇರೆಗೆ ಮಕ್ಕಳು ಕೌಟುಂಬಿಕ ಸೌಹಾರ್ದತೆಯನ್ನು ಕಾಪಾಡಿಕೊಳ್ಳುವುದರ ಜೊತೆಗೆ ತಮ್ಮ ಕುಟುಂಬವನ್ನು ನೋಡಿಕೊಳ್ಳಲು ಅಗತ್ಯವಾಗಿರುವ ಸಂಪತ್ತು ದೊರಕುವಂತೆ ನೋಡಿಕೊಳ್ಳಲು. ಹಾಗಾಗಿ ರೋಮನ್ ಶಾಸನದ ಬಹುಭಾಗಗಳು ಕಾನೂನುಬಾಹಿರ ಮಕ್ಕಳಿಗೆ ಅಥವಾ ದತ್ತು ಪಡೆದುಕೊಂಡ ಮಕ್ಕಳಿಗೆ ಅಥವಾ ಗುಲಾಮ-ಸ್ವತಂತ್ರ ಹೆಣ್ಣುಗಂಡಿಗೆ ಹುಟ್ಟಿದ ಮಕ್ಕಳ ಸಾಮಾಜಿಕ ಸ್ಥಾನಮಾನ ನಿರೂಪಿಸಲು ಮತ್ತು ಅವರ ಸಂಪತ್ತಿನ ಹಕ್ಕನ್ನು ನಿರೂಪಿಸಲು ಮೀಸಲಾಗಿರುತ್ತಿದ್ದವು. ಯೌವನದ ಬಗೆಗೆ ಸರ್ವೇಸಾಮಾನ್ಯವಾಗಿದ್ದ ಕಾಳಜಿಯು ಕೌಟುಂಬಿಕ ಅಧಿಕಾರವನ್ನು ಗೌರವಿಸುವಲ್ಲಿ ಮತ್ತು ಮಕ್ಕಳು ಶೀಘ್ರವಾಗಿ ಪ್ರೌಢಾವಸ್ಥೆಗೆ ಬರುವಲ್ಲಿ ಇದ್ದ ಮೂಲಭೂತ ಆಸಕ್ತಿಯನ್ನು ತೋರಿಸುತ್ತದೆ.[36]

ಚೀನಾ ಮತ್ತು ಮೆಡಿಟರೇನಿಯನ್‌ನ ಎರಡೂ ನಾಗರಿಕತೆಗಳು ಶೀಘ್ರವಾದ ಆದರೆ ಅವಲಂಬಿತ ಪ್ರಬುದ್ಧತೆಯನ್ನು ಬಯಸುತ್ತಿದ್ದವು. ಉದಾಹರಣೆಗೆ ಹೇಳುವುದಾದರೆ, ಈ ಎರಡೂ ಸಮಾಜಗಳಲ್ಲಿ ಸಣ್ಣ ವಯಸ್ಸಿಗೆ (ರೋಮನ್ನರಲ್ಲಿ ಹುಡುಗಿಗೆ ಹನ್ನೆರಡು ವಯಸ್ಸಾಗುವಷ್ಟರಲ್ಲಿ) ಮದುವೆಮಾಡುವುದು ಸಾಧ್ಯವಿತ್ತು. ಆದರೂ ರೋಮನ್ ಬರಹಗಾರರು ಯೌವನದ ಕಾಲಾವಧಿಯನ್ನು ನಿರೂಪಿಸಿದ್ದೇ

[35] *Rawson, Children.*

[36] *Dixon, Childhood; Rawson, Children.*

ಅಲ್ಲದೆ ಮೂವತ್ತೊಂದನೆ ವಯಸ್ಸಿನ ಆಚೀಚೆ ತನಕವೂ ಯೌವನದ ಅವಧಿಯನ್ನು ವಿಸ್ತರಿಸಿದರು. ಈ ವಯೋಮಾನದವರಲ್ಲಿ ಸಂಪೂರ್ಣ ತಾರ್ಕಿಕ ಸಾಮರ್ಥ್ಯ ಬೆಳೆದಿರುವುದಿಲ್ಲ ಎಂದು ನಂಬಲಾಗಿತ್ತು; ಇದು ಹಿರಿಯರಿಗೆ ಯುವಜನರ ಮೇಲೆ ತಮ್ಮ ಹತೋಟಿಯನ್ನು ಕಾಪಾಡಲು ಉತ್ತಮ ಸಾಧನವಾಗಿತ್ತು. ಚೀನಾದಲ್ಲಿ ಕೂಡ ನಮಗೆ ಈ ಧೋರಣೆ ಕಾಣಸಿಗುತ್ತದೆ. ಇದು ಕೃಷಿ-ಆಧಾರಿತ ಆರ್ಥಿಕತೆಗಳಲ್ಲಿ ಮಕ್ಕಳು ಇಳಿಗಾಲದಲ್ಲಿ ತಮ್ಮ ತಂದೆತಾಯಿಗಳಿಗೆ ಆಸರೆಯಾಗಿ ಉಳಿಯುವ ಭರವಸೆಯನ್ನು ತೋರಿಸುತ್ತದೆ.

ಕೊನೆಯದಾಗಿ, ಈ ಸಾಮಾನ್ಯ ಚೌಕಟ್ಟನ್ನು ಅನುಸರಿಸಿ ನೋಡುವುದಾದರೆ, ಬಾಲ್ಯದ ಅವಸ್ಥೆಯನ್ನು ದಾಟಿದವರು ಬಾಲ್ಯವನ್ನು ಒಂದು ಆಹ್ಲಾದಕರ ಕಾಲಘಟ್ಟವಾಗಿ ಪರಿಗಣಿಸಿದ್ದು ಇಲ್ಲವೇ ಇಲ್ಲ ಎನ್ನಬಹುದು – ಇದು ಈ ಎರಡೂ ಅಭಿಜಾತ ಸಮಾಜಗಳ ನಡುವೆ ನಮಗೆ ಕಾಣುವ ಕುತೂಹಲಭರಿತ ಸಾಮ್ಯತೆ. ಮೆಡಿಟರೇನಿಯನ್ ಸಮಾಜಗಳಲ್ಲಿ ಚೀನಾದಲ್ಲಿದ್ದಂತೆಯೇ ವಯಸ್ಸಾದವರು ತಮ್ಮ ಬಾಲ್ಯವನ್ನು ತಾಯಿಯ ನೆನಪೊಂದನ್ನು ಬಿಟ್ಟರೆ ಉಳಿದಂತೆ ಆಪ್ತವಾಗಿ ನೆನಪಿಸಿಕೊಳ್ಳುವುದು ಅಪರೂಪವಾಗಿತ್ತು.[37]

ಚೀನಾದಲ್ಲಿ ಕಾಣುವ ಮಾತೃವಾತ್ಸಲ್ಯ ಮತ್ತು ಮೆಡಿಟರೆನಿಯನ್ ಸಮಾಜದಲ್ಲಿಕಾಣುವ ಯೌವನದ ಬಗೆಗಿನ ಹೆಚ್ಚಿನ ಕಾಳಜಿಯಂತಹ ಸೂಕ್ಷ್ಮತೆಗಳ ಹೊರತಾಗಿಯೂ, ಅಭಿಜಾತ ಕಾಲದ ಬಾಲ್ಯದಲ್ಲಿ ನಮಗೆ ಭಿನ್ನತೆಗಳಿಗಿಂತ ಸಾಮ್ಯತೆಗಳೇ ಹೆಚ್ಚು ಕಾಣುತ್ತವೆ. ನಮಗೆ ಆಶ್ಚರ್ಯ ಹುಟ್ಟಿಸುವ ಮಟ್ಟಿಗೆ ಬೇರೆ ಬೇರೆ ಸಂಸ್ಕೃತಿಗಳಲ್ಲಿ ಬಾಲ್ಯಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ವ್ಯತ್ಯಾಸಗಳೇನೂ ಕಾಣಿಸುವುದಿಲ್ಲ. ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರ ಮಟ್ಟಿಗೆ ಹಿರಿಯರಿಗೆ ಸಹಾಯವಾಗುವಂತೆ ಇರುವುದು ಬಾಲ್ಯದ ಉದ್ದೇಶವಾಗಿತ್ತು. ಮಕ್ಕಳ ಹೆಚ್ಚಿನ ಮರಣ ಪ್ರಮಾಣವನ್ನು ಒಪ್ಪಿಕೊಂಡಂತೆಯೇ, ಮಕ್ಕಳಲ್ಲಿನ ಪ್ರಕ್ಷುಬ್ಧತೆಯನ್ನು ಹದ್ದುಬಸ್ತಿನಲ್ಲಿಡುವುದು ಕೂಡ ಅವರ ಗುರಿಯಾಗಿತ್ತು. ಅಭಿಜಾತ ಭಾರತವನ್ನು ಕುರಿತಂತೆ ನಮಗೆ ಸಿಗುವ ಗ್ರಂಥಾಧಾರ ಕಡಿಮೆ. ಇಲ್ಲಿ ನಮಗೆ ಹೆಚ್ಚು ಎದ್ದು ಕಾಣುವುದು ಅದರ ಸಾಂಸ್ಕೃತಿಕ ಪ್ರಭಾವ. ಹಿಂದೂಧರ್ಮ ಬೆಳೆದಂತೆ, ಮಗು ಹುಟ್ಟಿ ಕೆಲವು ದಿನಗಳಲ್ಲೇ ಅಗತ್ಯ ಧಾರ್ಮಿಕ ವಿಧಿಗಳನ್ನು ಪೂರೈಸಿ, ಅದನ್ನು ಒಬ್ಬ ವ್ಯಕ್ತಿಯಾಗಿ, ಧಾರ್ಮಿಕ ಸಮುದಾಯದ ಒಂದು ಭಾಗವಾಗಿ ನೋಡುವ ದೃಷ್ಟಿಕೋನವನ್ನು ಪ್ರೋತ್ಸಾಹಿಸಿತು. ಇದು ಚೀನಾ ಮತ್ತು ಮೆಡಿಟರೇನಿಯನ್ ನಾಗರಿಕತೆಗಳಲ್ಲಿ ಇದ್ದುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಮಕ್ಕಳ ಬಗೆಗಿನ ಕಕ್ಕುಲಾತಿಯನ್ನು ಮತ್ತು ದೈಹಿಕ ದಂಡನೆಯ ಬಗೆಗೆ ಇದ್ದ ತಿರಸ್ಕಾರವನ್ನು ತೋರಿಸುತ್ತದೆ. ಉಳಿದೆರಡು ಜಾತ್ಯತೀತ ನಾಗರಿಕತೆಗಳಿಗಿಂತ ಭಿನ್ನವಾಗಿ ಭಾರತದಲ್ಲಿ ಧರ್ಮವು ಮಕ್ಕಳಲ್ಲಿ ಕೆಲವು ವಿಶಿಷ್ಟ ಗುಣಲಕ್ಷಣಗಳನ್ನು ಬೆಳೆಸುವಲ್ಲಿ ಪ್ರಧಾನ ಪಾತ್ರವಹಿಸಿರುವುದು ಕಾಣಿಸುತ್ತದೆ.[38]

[37] *Rawson, Children.*

[38] *Jeanine Ruboyer, Daily Life in Ancient India from Approximately 200 B.C. to 700 A.D., trans. Simon Watson Taylor (New York: Macmillan, 1965).*

ಚೀನಾ ಮತ್ತು ಮೆಡಿಟರೇನಿಯನ್ನಿನಲ್ಲಿ ಕೂಡ ಸಾಮಾಜಿಕ ಚೌಕಟ್ಟುಗಳ ಆಚೆಗೆ, ವೈಯಕ್ತಿಕ ನೆಲೆಯಲ್ಲಿ ಕುಟುಂಬಗಳು ತಮ್ಮ ಮಕ್ಕಳ ಬಗೆಗೆ ಅಪಾರ ಪ್ರೀತಿಯನ್ನು ತೋರಿಸುತ್ತ ಅವರ ಆಟಪಾಠಗಳಲ್ಲಿ ಸಂತೋಷವನ್ನು ಕಾಣುತ್ತಿದ್ದವು. ಈ ಎರಡೂ ಸಮಾಜಗಳಲ್ಲಿ ಕಾಲಕ್ರಮೇಣ, ಅಂದರೆ ರೋಮಿನ ಸಾಮ್ರಾಜ್ಯದ ಆಧಿಪತ್ಯದ ಕಾಲದಲ್ಲಿ ಮತ್ತು ಚೀನಾದ ಮಧ್ಯಯುಗದ ಚಾಂಗ್ ವಂಶಾಡಳಿತದ ಕಾಲದಲ್ಲಿ ಮಕ್ಕಳ ಬಗೆಗೆ ಹೆಚ್ಚಿನ ಕಕ್ಕುಲಾತಿ ಕಂಡುಬರುತ್ತದೆ. ಹೆಚ್ಚಿದ ಆರ್ಥಿಕ ಸಮೃದ್ಧಿ ಮತ್ತು ರಾಜಕೀಯ ಸುಸ್ಥಿರತೆಯು ಈ ಹೊಸ ಆಯ್ಕೆಗಳಿಗೆ ಅವಕಾಶ ಕಲ್ಪಿಸಿತ್ತು. ಉದಾಹರಣೆಗೆ, ಕೆಲವು ರೋಮನ್ ಲೇಖಕರು, "ಯಾವ ರೀತಿಯಾಗಿ ತಂದೆತಾಯಿಗಳಯ ಮಕ್ಕಳನ್ನು ಅವುಗಳನ್ನು ಹುಟ್ಟಿದಾಗಿನಿಂದ ಮುದ್ದುಮಾಡಿ ಕೆಡಿಸುತ್ತಿದ್ದಾರೆ,"[39] ಎಂದು ದೂರುತ್ತಾರೆ. ಆದರೆ ಈ ತಾತ್ಕಾಲಿಕ ಒಲವು ಈ ಎರಡು ಪ್ರಮುಖ ಅಭಿಜಾತ ನಾಗರಿಕತೆಗಳ ನಡುವೆ ಇದ್ದ ಆಶ್ಚರ್ಯಕರ ಸಾಮ್ಯತೆಯನ್ನು ಇನ್ನಷ್ಟು ಸ್ಫುಟಗೊಳಿಸಿದೆ. ಇವುಗಳ ನಡುವೆ ನಿಚ್ಚಳವಾಗಿ ಗೋಚರಿಸಿದ ಭಿನ್ನತೆಗಳು ಮಾತ್ರ ಆಯಾ ನಾಗರಿಕತೆಯ ಭಿನ್ನ ಸಂಸ್ಕೃತಿಗಳ ಹಾಗೂ ಕುಟುಂಬ ಸ್ವರೂಪಗಳಿಂದ ಉಂಟಾಗಿರುವಂತಹದು. ಇನ್ನಷ್ಟು ಸ್ಪಷ್ಟವಾದ ತುಲನಾತ್ಮಕ ಅಧ್ಯಯನದ ಆವಶ್ಯಕತೆಯನ್ನು ಗಮನದಲ್ಲಿಟ್ಟುಕೊಂದು ಹೇಳಿದರೂ, ಕೃಷಿ-ಆಧಾರಿತ ನಾಗರಿಕತೆಗಳ ಮೂಲಭೂತ ಅಗತ್ಯಗಳಾದ ದುಡಿಮೆಯ ಮೇಲಿನ ಅವಲಂಬನೆ ಮತ್ತು ಅದರಿಂದಾಗಿ ವಯಸ್ಕ ಮಕ್ಕಳಿಂದ ಹಿರಿಯರು ನಿರೀಕ್ಷಿಸುವ ವಿಧೇಯತೆ; ಮಕ್ಕಳು ಹಿರಿಯರಿಗೆ ಅಡಿಯಾಳುಗಳಾಗಿ ಇರುವಂತೆ ನೋಡಿಕೊಳ್ಳುವುದು; ಗಣ್ಯ ಅಥವಾ ಸಾಮಾನ್ಯ ಬಾಲ್ಯವನ್ನು ನಿರ್ಧರಿಸುವ ಮೂಲಭೂತ ಅಂಶವಾಗಿ ಶಿಕ್ಷಣದ ಪಾತ್ರ – ಇವು ವಿವಿಧ ನಂಬಿಕೆಗಳು, ಪದ್ಧತಿಗಳು ಮತ್ತು ಕೆಲವು ಕೌಟುಂಬಿಕ ರಚನೆಗಳ ಆಯಾಮಗಳ ಪರಿಣಾಮಗಳನ್ನು ಕೂಡ ಅಲ್ಲಗಳೆಯುವ ಸಾಮರ್ಥ್ಯ ಹೊಂದಿದ್ದವು. ಅದೇ ಸಮಯದಲ್ಲಿ, ದೊಡ್ಡ ಮಟ್ಟದ ರಾಜಕೀಯ ವಿಶಿಷ್ಟತೆಗಳ ಪರಿಣಾಮ ಕೂಡ ನಗಣ್ಯವಾಗಿತ್ತು, ಏಕೆಂದರೆ, ಪ್ರಭುತ್ವವೆಂಬುದು ಸಾಮಾನ್ಯ ಜನರ ಬದುಕಿನಿಂದ ದೂರವಿತ್ತು ಮತ್ತು ಕಾನೂನಿನ ವಿವಿಧ ವ್ಯವಸ್ಥೆಗಳು ತಂದೆತಾಯಿಗಳ ಬಲವಾದ ಅಧಿಕಾರವನ್ನು ಎತ್ತಿಹಿಡಿಯುತ್ತಿದ್ದವು. ಬೇಟೆಯಾಡಿ ಜೀವನ ಸಾಗಿಸುತ್ತಿದ್ದ, ಹರಿಹಂಚಾಗಿದ್ದ ಸಮಾಜಗಳಿಗಿಂತ ಅಭಿಜಾತ ನಾಗರಿಕತೆಗಳಲ್ಲಿ ಬಾಲ್ಯಕಾಲದಲ್ಲಿ ನಮಗೆ ಕಡಿಮೆ ವ್ಯತ್ಯಾಸಗಳು ಕಂಡುಬರುತ್ತವೆ, ಏಕೆಂದರೆ ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಸಮಾಜಗಳಲ್ಲಿ ಮಕ್ಕಳ ದುಡಿಮೆಯ ಆವಶ್ಯಕತೆ ಕಡಿಮೆ ಇದ್ದುದರಿಂದ ಅವರಿಗೆ ಹೆಚ್ಚಿನ ಆಯ್ಕೆಗಳಿದ್ದವು.

ಸುಮಾರು ಕ್ರಿ.ಶ. 300ರ ಇಸವಿಯ ತನಕ, ಬಾಲ್ಯಕಾಲದಲ್ಲಿನ ಬದಲಾವಣೆ, ನಿರಂತರತೆ ಮತ್ತು ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಜಾಗತಿಕ ಇತಿಹಾಸವು ಮುಂದೆ ಹೇಳಿರುವಂತೆ ಹಲವು ಮಹತ್ವದ ಬದಲಾವಣೆಗಳ ಮಜಲುಗಳನ್ನು ದಾಟಿ ಹೋಗುತ್ತದೆ: ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಜನರು ಕೃಷಿ-ಆಧಾರಿತ ಜೀವನ ಪದ್ಧತಿಯನ್ನು ಅನುಸರಿಸಲು ತೊಡಗಿದುದು ಅತ್ಯಂತ ಮಹತ್ವದ ಬದಲಾವಣೆ; ಪ್ರಮಾಣ ಕಡಿಮೆಯಾದರೂ, ನಾಗರಿಕತೆಯನ್ನು ವ್ಯವಸ್ಥಿತವಾಗಿ ಕೃಷಿಯೊಂದಿಗೆ

[39] *Rawson, Children*

ಬೆಸೆದಾಗ ಆದ ಗಮನಾರ್ಹ ಪರಿಣಾಮ ಮತ್ತು ಇನ್ನೂ ಕಡಿಮೆ ಪ್ರಮಾಣದಲ್ಲಿದ್ದರೂ ನಿರ್ದಿಷ್ಟ ಅಭಿಜಾತ ನಾಗರಿಕತೆಗಳು ಬೀರಿದ ಪ್ರಭಾವಗಳು. ಒಂದು ಸಾರ್ವತ್ರಿಕ ವಿದ್ಯಮಾನವಾಗಿ ಮತ್ತು ಭಿನ್ನತೆಯ ಹೊಸ ಗುರುತಾಗಿ ಪ್ರಮುಖ ಜಾಗತಿಕ ಧರ್ಮಗಳ ಪಸರಿಸುವಿಕೆಯು ಕೂಡ ಕೃಷಿ-ಆಧಾರಿತ ಸಮಾಜದಲ್ಲಿ ಬಾಲ್ಯಕ್ಕೆ ಹೊಸ ಸವಾಲುಗಳನ್ನು ಒಡ್ಡಿದವು.

ಕ್ರಿ.ಶ 600-1450 ನಡುವಣ ಜಾಗತಿಕ ಇತಿಹಾಸದ ಮಧ್ಯಯುಗೀನ ಅವಧಿಯು ಹಲವು ಪ್ರಮುಖ ಬದಲಾವಣೆಗಳನ್ನು ಒಳಕೊಂಡಿತ್ತು, ಮತ್ತು ಈ ಬದಲಾವಣೆಗಳಲ್ಲಿ ಬಾಲ್ಯದ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರಿದ್ದು ಯಾವುದು ಎಂಬ ಪ್ರಶ್ನೆ ಏಳುತ್ತದೆ. ಏಕೆಂದರೆ, ನನ್ನ ಪ್ರಕಾರ, ಅದು ಒಂದು ಹೊಸ ಅನ್ವೇಷಣೆಗೆ ದಾರಿ ಮಾಡಿ ಕೊಟ್ಟಿತು. ಭಾರತ ಮತ್ತು ಚೀನಾದಲ್ಲಿ ರೂಢಿಗತವಾದ ಪದ್ಧತಿಗಳು ಹಲವು ರೀತಿಯಲ್ಲಿ ಮುಂದುವರಿದವು. ಉದಾಹರಣೆಗೆ, ಚೀನಾದಲ್ಲಿ ಒಂದು ಹಂತದ ತನಕ ಹೆಣ್ಣುಶಿಶುಹತ್ಯೆಯ ಮೇಲಿನ ಅವಲಂಬನೆ - ಹಾಗಾಗಿ ಬದಲಾವಣೆಯನ್ನು ಉತ್ಪ್ರೇಕ್ಷೆ ಮಾಡುವುದರ ಆವಶ್ಯಕತೆ ಇಲ್ಲ. ಪ್ರಮುಖ ಕೃಷಿ-ಆಧಾರಿತ ಸಮಾಜಗಳಲ್ಲಿ ದುಡಿಮೆಗಾಗಿ ಬಾಲಕಾರ್ಮಿಕರ ಮೇಲೆ ಯಾವತ್ತೂ ಬಹಳವಾಗಿ ಇದ್ದ ಅವಲಂಬನೆಯೂ ಮುಂದುವರಿಯಿತು.

ಏಷ್ಯಾ, ಆಫ್ರಿಕಾ ಮತ್ತು ಯುರೋಪುಗಳ ನಡುವೆ ಅಸ್ತಿತ್ವಕ್ಕೆ ಬಂದ ವ್ಯಾಪಾರ ಸಂಬಂಧಗಳು ಈ ಹೊಸಕಾಲದ ಪ್ರಮುಖ ಬೆಳವಣಿಗೆಗಳು. ಹಲವು ಜಾಗತಿಕ ಇತಿಹಾಸಕಾರರು ಇದನ್ನು ಒಂದು ಮಹತ್ವದ ಮೈಲಿಗಲ್ಲೆಂದು ಪರಿಗಣಿಸುತ್ತಾರೆ. ಈ ಬೆಳವಣಿಗೆಗಳ ಕಾರಣದಿಂದಾಗಿ ನಗರ ಪ್ರದೇಶಗಳು ವಿಸ್ತಾರಗೊಂಡವು, ಉತ್ಪಾದನೆಯ ಪ್ರಮಾಣದಲ್ಲಿ ಏರಿಕೆ ಉಂಟಾಯಿತು ಮತ್ತು ಮಕ್ಕಳು ಹಲವು ವಿಧದ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಕೊಂಡರು. ಇದರ ಹೊರತಾಗಿ ಬಾಲ್ಯದ ಮೇಲೆ ಇದು ಯಾವ ರೀತಿಯ ಪರಿಣಾಮ ಬೀರಿತು ಎಂಬುದು ಸ್ಪಷ್ಟವಿಲ್ಲ. ಉದಾಹರಣೆಗೆ, ಮಂಗೋಲ್ ಉಪಾವಧಿಯಲ್ಲಿ ಕಂಡುಬರುವಂತಹ ನಿರ್ದಿಷ್ಟ ವ್ಯಾಪಾರ ಮಾದರಿಗಳು ಬಾಲ್ಯದ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ಜಪಾನ್, ರಷ್ಯಾ, ಉತ್ತರ ಯುರೋಪ್, ಆಫ್ರಿಕಾ ಮತ್ತು ಅಮೆರಿಕಾಗಳ ಹೊಸ ಭಾಗಗಳನ್ನು ಒಳಕೊಂಡಂತೆ ನಾಗರಿಕತೆಯ ಭೌಗೋಳಿಕಾ ವ್ಯಾಪ್ತಿ ಹೆಚ್ಚುತ್ತಿದ್ದಂತೆ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಅದರ ಗುಣಲಕ್ಷಣಗಳ ಪ್ರಭಾವಕ್ಕೆ ಒಳಗಾದರು. ಆದರೆ ಇದು ಹೊಸದಾಗಿಯೇನೂ ಇರಲಿಲ್ಲ. ಬೇರೆ ಕೆಲವು ಕಡೆ ಅದು ಆಗಲೇ ಅನುಭವಕ್ಕೆ ಬಂದಿತ್ತು. ಶಿಕ್ಷಣದ ಪದ್ಧತಿ ಬಿಟ್ಟರೆ, ಹಿರಿಯ ನಾಗರಿಕತೆಗಳನ್ನು ಅನುಸರಿಸುವ ಪ್ರಯತ್ನಗಳು, ಉದಾಹರಣೆಗೆ, ಜಪಾನ್ ಚೀನಾವನ್ನು ಅನುಸರಿಸಲು ಪ್ರಾರಂಭಿಸಿದುದು ಕಡಿಮೆ ಎಂದೇ ಹೇಳಬಹುದು. ಚೀನಾದಲ್ಲಿ ಹೆಂಗಸರ ಸೌಂದರ್ಯವರ್ಧನೆಯ ಹೆಸರಲ್ಲಿ ಅವರ ಪಾದಗಳನ್ನು ಬಿಗಿಯಾಗಿ ಕಟ್ಟುವಂತಹ ಮತ್ತು ಭಾರತದಲ್ಲಿ ಸತಿಯಂತಹ (ಸಾರ್ವತ್ರಿಕವಲ್ಲವಾದರೂ) ಪದ್ಧತಿಗಳು ಮಹಿಳೆಯರ ಸ್ಥಾನಮಾನದಲ್ಲಿ ಆದ ಇಳಿಕೆಗೆ ಉದಾಹರಣೆಯಾಗಿದ್ದವು. ಮಕ್ಕಳ ಮೇಲೆ ಇದು ನೇರ ಪರಿಣಾಮ ಬೀರತೊಡಗಿತು. ಲಿಂಗ ತಾರತಮ್ಯವೂ ಹೆಚ್ಚು ಗಂಭೀರವಾಗತೊಡಗಿತು – ಇದು ನಮಗೆ ಯುರೋಪ್, ಜಪಾನ್ ಮತ್ತು ಮಧ್ಯ

ಏಷ್ಯಾದಲ್ಲಿ ಕೂಡ ಕಾಣಸಿಗುತ್ತದೆ. ಇದರಿಂದ ಬಾಲ್ಯದ ಮೇಲೆ ಹೆಚ್ಚಿನ ದುಷ್ಪರಿಣಾಮ ಉಂಟಾಯಿತು.

ಬಾಲ್ಯದ ಮೇಲೆ ಅತಿ ಹೆಚ್ಚಿನ ಪ್ರಭಾವ ಬೀರಿದ ಅಂಶ ಎಂದರೆ ಬೌದ್ಧ, ಕ್ರಿಸ್ತ ಮತ್ತು ಇಸ್ಲಾಂ ಧರ್ಮಗಳ ಪ್ರಸಾರ, ಅದರಲ್ಲಿಯೂ ಮುಖ್ಯವಾಗಿ ಇಸ್ಲಾಂ ಧರ್ಮದ ಹುಟ್ಟು ಮತ್ತು ಅದರ ಅಸಾಮಾನ್ಯ ಯಶಸ್ಸು. ಸರಳವಾಗಿ ಹೇಳುವುದಾದರೆ, ಮಧ್ಯಯುಗದಲ್ಲಿ ಧರ್ಮವು ಹಲವು ಜನರ ಬದುಕಿನಲ್ಲಿ ಅತ್ಯಂತ ಪ್ರಮುಖ ಶಕ್ತಿಯಾಯಿತು. ಈ ಅಭಿಜಾತತೆಯ ಅನಂತರದ ಕಾಲವು ಬಾಲ್ಯಕ್ಕೆ ಸಂಬಂಧಿಸಿದಂತೆ ಎಲ್ಲ ಸಂಸ್ಕೃತಿಗಳಿಗೂ ಸಮಾನವಾದ ಹಲವು ಬದಲಾವಣೆಗಳಿಗೆ ದಾರಿಮಾಡಿಕೊಟ್ಟಿದ್ದಲ್ಲದೆ, ಪರಸ್ಪರ ಹೋಲಿಸಿ ವೈಶಿಷ್ಟ್ಯಗಳನ್ನು ಪ್ರತ್ಯೇಕವಾಗಿ ತೋರಿಸಬಹುದಾದ ಅವಕಾಶಕ್ಕೂ ಎಡೆಮಾಡಿಕೊಟ್ಟಿತು.

ಈ ಎಲ್ಲ ಪ್ರಮುಖ ಧರ್ಮಗಳ ಬರವಣಿಗೆಗಳು ಹಿಂದೆ ಯೆಹೂದಿ ಧರ್ಮದಲ್ಲಿ ಇದ್ದಂತೆ, ಬಾಲ್ಯದ ಮಹತ್ವವನ್ನು ಎತ್ತಿಹಿಡಿದವು. ಕ್ರೈಸ್ತ, ಇಸ್ಲಾಂ, ಹಾಗೆಯೇ ಯೆಹೂದಿ ಮತಗಳು ಮಕ್ಕಳನ್ನು ಕುರಿತಂತೆ ಪಾಲಕರ ಹೆಮ್ಮೆ ಮತ್ತು ಜವಾಬ್ದಾರಿಯನ್ನು, ಅದರಲ್ಲೂ ಮುಖ್ಯವಾಗಿ ತಂದೆಯ ಪಾತ್ರವನ್ನು ಎತ್ತಿಹಿಡಿದವು. ಕ್ರೈಸ್ತ ಧರ್ಮವು ತನ್ನ ತ್ರಿಮೂರ್ತಿ ಪಿತೃತ್ವದ ಆಧಾರದ ಮೇಲೆ ತಂದೆಯ ಸ್ಥಾನಮಾನಕ್ಕೆ ವಿಶೇಷ ಮಹತ್ವ ಕೊಟ್ಟಿತು ಮತ್ತು ಅದೇ ಸಂದರ್ಭದಲ್ಲಿ ಮಾತೃತ್ವದ ಪ್ರಭಾವಿ ಪ್ರತೀಕವಾಗಿರುವ ಮೇರಿಯ ಸ್ಥಾನಮಾನದ ಮೂಲಕ ಸಮತೋಲನ ಸಾಧಿಸುವುದನ್ನು ಗಮನಿಸಬೇಕು. ಎಲ್ಲ ಧರ್ಮಗಳೂ ಬೈಬಲ್ಲಿನಲ್ಲಿ ಹೇಳಿರುವಂತೆ, "ನಿನ್ನ ತಂದೆ ತಾಯಂದಿರನ್ನು ಗೌರವಿಸು" ಎಂದು ಹೇಳಿ ತಂತೆತಾಯಿಯರಿಗೆ ಮಕ್ಕಳು ತೋರಬೇಕಾದ ವಿಧೇಯತೆಗೆ ಹೆಚ್ಚಿನ ಪ್ರಾಮುಖ್ಯವನ್ನು ನೀಡಿದ್ದವು.

ಈ ಧರ್ಮಗಳು ಇನ್ನೂ ಎರಡು ಸಮಾನವಾದ ಗುಣಲಕ್ಷಣಗಳನ್ನು ಹೊಂದಿದ್ದವು: ಎಲ್ಲ ಧರ್ಮಗಳು ಒಂದಲ್ಲ ಒಂದು ರೀತಿಯಲ್ಲಿ ಪ್ರತಿ ವ್ಯಕ್ತಿಯಲ್ಲಿ ಒಂದು ದೇವತಾಂಶ, ಅಂದರೆ ಒಂದು ಆತ್ಮ ಇರುವುದನ್ನು ಅಥವಾ ಯಾವುದೋ ಒಂದು ರೂಪದಲ್ಲಿ ದೇವಾಂಶದ ಇರುವುದನ್ನು ನಂಬುತ್ತವೆ. ಈ ನಂಬಿಕೆಯು ಮಕ್ಕಳನ್ನು ದೈವೀಸಂಭೂತವೆಂದು ಅಥವಾ ದೈವೀ ಸಂಪರ್ಕದಲ್ಲಿ ಭಾಗಿಗಳು ಮತ್ತು ಭವಿಷ್ಯತ್ತಿನ ಶ್ರದ್ಧಾಳುಗಳೆಂದು ಪರಿಗಣಿಸಿ ಅವರನ್ನು ಸಂರಕ್ಷಿಸಬೇಕಾದ ಜವಾಬ್ದಾರಿಯನ್ನು ಹೆಚ್ಚಿಸಿತು. ಪ್ರಮುಖ ಧರ್ಮಗಳು ಮತ್ತು ಯಹೂದಿ ಧರ್ಮ ಕೂಡ, ಶಿಶುಹತ್ಯೆಯನ್ನು ತೀವ್ರವಾಗಿ ವಿರೋಧಿಸಿ ಈ ಪದ್ಧತಿಯನ್ನು ಸಾಕಷ್ಟು ಮಟ್ಟಿಗೆ ಇಲ್ಲವಾಗಿಸಿದವು ಅಥವಾ ಬೇಡವಾದ ಮಗುವಿನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಅದನ್ನು ಯಾವುದೋ ಧಾರ್ಮಿಕ ಸ್ಥಳದಲ್ಲಿ ಬಿಡುವಂತಹ ಪದ್ಧತಿಯನ್ನು ಪ್ರೋತ್ಸಾಹಿಸಿದವು (ಹೆಚ್ಚಿನ ಸಂದರ್ಭದಲ್ಲಿ ಇದು ಮಗುವಿನ ಸಾವಿಗೆ ಕೂಡ ಕಾರಣವಾಗುತಿತ್ತು). ರೋಮನ್ ಸಾಮ್ರಾಜ್ಯದಲ್ಲಿ ಕ್ರೈಸ್ತ ಧರ್ಮವು ಮಕ್ಕಳ ಮೇಲೆ ಬೀರಿದ ಪ್ರಭಾವಗಳಲ್ಲಿ ಮೊದಲನೆಯದೆಂದರೆ, ಶಿಶುಹತ್ಯೆಯನ್ನು ಮತ್ತು ಮಕ್ಕಳ ವ್ಯಾಪಾರವನ್ನು ಪ್ರತಿಬಂಧಿಸಲು ಮತ್ತು ಇದನ್ನು ಉಲ್ಲಂಘಿಸಿದಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯನ್ನು ವಿಧಿಸಲು ಹಿಂದೆಂದೂ ಕಂಡರಿಯದಂತಹ ಕಾನೂನುಗಳನ್ನು ಮಾಡುವುದಕ್ಕೆ ರಾಜ್ಯಾಡಳಿತಕ್ಕೆ ಕೊಟ್ಟಂತಹ ಪ್ರೋತ್ಸಾಹ. ಕ್ರಿ.ಶ.

374ರಲ್ಲಿ ಕ್ರೈಸ್ತ ಧರ್ಮಕ್ಕೆ ಸೇರಿದ ಸಾಮ್ರಾಜ್ಯಾಧಿಪತಿಯು ಯಾವುದೇ ವ್ಯಕ್ತಿ, ಗಂಡಸಾಗಿರಲಿ ಅಥವಾ ಹೆಂಗಸಾಗಿರಲಿ, ಮಗುವೊಂದನ್ನು ಕೊಂದರೆ ಅಂತಹ ವ್ಯಕ್ತಿಗೆ ಮರಣದಂಡನೆಯನ್ನು ವಿಧಿಸುವ ಆಜ್ಞೆಯನ್ನು ಜಾರಿಗೆ ತಂದನು. ಕ್ರೈಸ್ತ ಧರ್ಮಕ್ಕೆ ಸೇರಿದ ಆರಂಭ ಕಾಲದ ಸಾಮ್ರಾಜ್ಯಾಧಿಪತಿಗಳು ಸಾಮಾನ್ಯವಾಗಿ ಮಕ್ಕಳಿಗೆ ಸಂಬಂಧಪಟ್ಟ ಶಾಸನಗಳ ವ್ಯಾಪ್ತಿಯನ್ನು ಅಪಾರವಾಗಿ ವಿಸ್ತರಿಸಿದರು. ಇದೇ ರೀತಿಯಾಗಿ ಶಿಶುಹತ್ಯೆಯನ್ನು ತಡೆಯುವ ಕಾನೂನನ್ನು ಇಸ್ಲಾಂ ಧರ್ಮವು ತನ್ನ ಪ್ರಾರಂಭಕಾಲದಲ್ಲಿಯೇ ಜಾರಿಗೆ ತಂದಿತ್ತು.[40]

ಕೊನೆಯದಾಗಿ, ಎಲ್ಲ ಜಾಗತಿಕ ಧರ್ಮಗಳು ಮಕ್ಕಳ ಧಾರ್ಮಿಕ ಶಿಕ್ಷಣಕ್ಕೆ ವಿಶೇಷ ಗಮನಕೊಟ್ಟಿದ್ದವು. ಕ್ರೈಸ್ತ ಧರ್ಮದಲ್ಲಿ ಪವಿತ್ರ ಸ್ನಾನದ ವಿಧಿ ಅಥವಾ ಮಧ್ಯಪ್ರಾಚ್ಯದಲ್ಲಿ ಇಸ್ಲಾಂ ಧರ್ಮ ಪದ್ಧತಿಯಂತೆ ಮಕ್ಕಳ ಅಂಗುಳಿನ ಮೇಲೆ ಖರ್ಜೂರದ ಹಣ್ಣನ್ನು ಉಜ್ಜಿ ಅವರಿಗೆ ಆಶೀರ್ವಾದ ಮಾಡುವ ಪದ್ಧತಿಯಂತೆ, ಕೆಲವು ನಿರ್ದಿಷ್ಟ ವಿಧಿಗಳ ಮೂಲಕ ಮಕ್ಕಳಿಗೆ ಧಾರ್ಮಿಕ ಸಂಸ್ಕಾರವನ್ನು ಕೊಡಲಾಗುತ್ತಿತ್ತು; ಮುಂದೆ ಕೆಲವು ಮಕ್ಕಳಿಗಾದರೂ ಹೆಚ್ಚಿನ ಧಾರ್ಮಿಕ ಶಿಕ್ಷಣದ ಅವಕಾಶ ದೊರಕುತ್ತಿತ್ತು. ಬಾಲಕಾರ್ಮಿಕರ ಮೇಲೆ ಅವಲಂಬಿತವಾದ ಹಲವು ಕೆಳವರ್ಗದ ಕುಟುಂಬಗಳಲ್ಲಿ ಇದು ಮಕ್ಕಳಿಗೆ ಒಂದೆರಡು ಪ್ರಾರ್ಥನೆಗಳನ್ನು ನೆನಪಿಡುವ ಮಟ್ಟಿಗಷ್ಟೆ ಉಳಿಯುತ್ತಿತ್ತು. ಆದರೂ ಮುಸ್ಲಿಂ ಕುಟುಂಬಗಳು ಸಾಧ್ಯವಾದಷ್ಟು ಮಟ್ಟಿಗೆ ಗಂಡುಮಕ್ಕಳನ್ನಾದರೂ ಮಸೀದಿಯ ಕಾರ್ಯಕ್ರಮ ಅಥವಾ ಕುರಾನ್ ಪಾಠಶಾಲೆಗೆ ಕಳುಹಿಸಲು ತೀವ್ರವಾದ ಪ್ರಯತ್ನಗಳನ್ನು ಮಾಡುತ್ತಿದ್ದರು. ಎಲ್ಲ ಧರ್ಮಗಳು ಸಮೃದ್ಧ ಬೋಧನೆಗಳನ್ನು ಮತ್ತು ಕಾನೂನು ನಿಯಮಾವಳಿಗಳನ್ನು ಒದಗಿಸಿದ್ದು ಇದು ಕೆಲವರಿಗಾದರೂ ಶಿಕ್ಷಣವನ್ನು ಗಂಭೀರವಾಗಿ ತೆಗೆದುಕೊಳ್ಳಲು ಪ್ರೋತ್ಸಾಹಿಸುತ್ತಿದ್ದವು. ಶಾಲಾ ಶಿಕ್ಷಣವು ಧಾರ್ಮಿಕ ಆಶ್ರಯದಲ್ಲಿ ನಿಶ್ಚಿತವಾಗಿಯೂ ಹೊಸ ದಿಕ್ಕು ದೆಸೆಯನ್ನು ಪಡೆದುಕೊಂಡು ವಿಸ್ತಾರವಾಗಿ ಬೆಳೆಯಿತು. ಕ್ರಿ.ಶ. 1000ದ ಸುಮಾರಿಗೆ, ಕನ್‌ಫ್ಯೂಶಿಯನ್ ಪ್ರಾಂತ್ಯದ ಆಚೆಗೆ, ಎಲ್ಲಾ ಬಗೆಯ ಶಿಕ್ಷಣಗಳೂ ಪ್ರಾಥಮಿಕವಾಗಿ ಧಾರ್ಮಿಕ ಉದ್ದೇಶಗಳನ್ನು ಹೊಂದಿದ್ದು ಧಾರ್ಮಿಕ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದವು, ಮತ್ತು ಅದರ ಮೂಲ ಉದ್ದೇಶ, ಅಧಿಕೃತವಾಗಿ ಧಾರ್ಮಿಕವಾಗಿತ್ತು.

ಪ್ರತಿ ಧರ್ಮವೂ ಬಾಲ್ಯ ವಿದ್ಯಾಭ್ಯಾಸದಲ್ಲಿ ಸ್ವಲ್ಪ ಮಟ್ಟಿನ ನಿರ್ದಿಷ್ಟ ಮಹತ್ವವನ್ನು ಒದಗಿಸಿತು ಎಂದು ಹೇಳಲೇಬೇಕು. ಈ ಸಂದರ್ಭದಲ್ಲಿ ನಾವು ಅದರ ತುಲನಾತ್ಮಕ ವಿಶ್ಲೇಷಣೆಯಿಂದ ತಪ್ಪಿಸಿಕೊಳ್ಳುವ ಹಾಗಿಲ್ಲ. ಆದರೆ ಇಲ್ಲಿ ಸ್ವಲ್ಪ ಎಚ್ಚರ ವಹಿಸುವುದು ಅಗತ್ಯ. ಅಪಾರ ಪ್ರಮಾಣದಲ್ಲಿ ನಡೆಯುತ್ತಿದ್ದ ಆಗಿನ ಶತಮಾನಗಳಲ್ಲಿ, ಧಾರ್ಮಿಕ ಜ್ಞಾನ ಮತ್ತು ಆಸಕ್ತಿಗಳಲ್ಲಿ ಅಪಾರ ಭಿನ್ನತೆಗಳಿದ್ದರೂ, ಧಾರ್ಮಿಕ ಸಿದ್ಧಾಂತಗಳಲ್ಲಿದ್ದ ಭಿನ್ನತೆಗಳು ವಾಸ್ತವ ಆಚರಣೆಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಲಿಲ್ಲ. ಮಕ್ಕಳು ಎಲ್ಲ ಧರ್ಮಗಳ ವಾತಾವರಣದಲ್ಲಿ ಬೆಳೆದರು ಹಾಗಾಗಿ ನಾವು ಯಾವುದೇ ಐತಿಹಾಸಿಕ ಅಥವಾ ಮತಪಂಥೀಯ ಮೌಲ್ಯಗಳ ಆಧಾರದ ಮೇಲೆ ತೀರ್ಮಾನಗಳನ್ನು ಕೊಡದೇ ಇರಲು ಪ್ರಯತ್ನಿಸಬೇಕು.

[40] *Rawson, Children.*

ಭಿನ್ನತೆಗಳು ಇದ್ದವು ಮತ್ತು ಇದರ ಪರಿಣಾಮವಾಗಿ ನಮಗೆ ಅಭಿಜಾತ ಕಾಲಕ್ಕಿಂತ ಭಿನ್ನವಾದ ಒಂದು ತುಲನಾತ್ಮಕ ಚಿತ್ರಣ ಲಭ್ಯವಾಗುತ್ತದೆ. ಹೆಚ್ಚಿದ ಧಾರ್ಮಿಕ ಬದ್ಧತೆಯು ಬಾಲ್ಯದ ಮೇಲೆ ಕೆಲವು ಪ್ರಮುಖ ಪರಿಣಾಮಗಳನ್ನು ಬೀರಿದ್ದಲ್ಲದೆ, ಕೃಷಿ-ಆಧಾರಿತ ನಾಗರಿಕತೆಗಳ ಕೆಲವು ಸಾಮಾನ್ಯ ಗುಣಲಕ್ಷಣಗಳನ್ನು ಕೂಡ ಇದು ಮೀರುತ್ತದೆ. ಇದರಿಂದಾಗಿ ಅದರ ಹಿಂದಿನ ಶತಮಾನಗಳಲ್ಲಿ ಇದ್ದುದಕ್ಕಿಂತ ಹೆಚ್ಚಾಗಿ ಮಧ್ಯಯುಗದಲ್ಲಿ ಬಾಲ್ಯದ ಇನ್ನೂ ವೈವಿಧ್ಯಮಯ ಚಿತ್ರಣ ನಮಗೆ ಸಿಗುತ್ತದೆ. ವ್ಯಾಪಕವಾಗಿ ಹರಡುತ್ತಿದ್ದ ಧರ್ಮ ಮತ್ತು ಧಾರ್ಮಿಕ ಅಲೆಯ ಸಾಂಸ್ಕೃತಿಕ ಶಕ್ತಿ ಮತ್ತು ಧರ್ಮದ ಆನ್ವಯಿಕತೆಗಳು ಮಕ್ಕಳ ಮೇಲೆ ಬೀರಿದ ಪರಿಣಾಮವು ಹಿಂದಿನ ಸಾಂಸ್ಕೃತಿಕ ವ್ಯವಸ್ಥೆಗಳು ಮಕ್ಕಳ ಮೇಲೆ ಬೀರಿದ ಪರಿಣಾಮಗಳಿಗಿಂತಲೂ ಹೆಚ್ಚಾಗಿತ್ತು.

ಸಹಜವಾಗಿಯೇ ಹೊಸ ಸುತ್ತಿನ ತುಲನಾತ್ಮಕ ಅಧ್ಯಯನವು ಕ್ರೈಸ್ತ ಮತ್ತು ಇಸ್ಲಾಂ ಧರ್ಮದ ನಡುವಿನ ಹಲವು ಕುತೂಹಲಕಾರಿ ಭಿನ್ನತೆಗಳನ್ನು ಎತ್ತಿಹಿಡಿಯುತ್ತದೆ. ಕ್ರೈಸ್ತ ಧರ್ಮವು ಆದಿಮಪಾತಕದಲ್ಲಿ ನಂಬಿಕೆ ಇರಿಸಿದರೆ ಇಸ್ಲಾಂ ಧರ್ಮವು ಅದನ್ನು ನಂಬಲಿಲ್ಲ. ಇಸ್ಲಾಂ ಬರಹಗಾರರೆಲ್ಲರೂ ಒಟ್ಟಾಗಿ ಒಂದು ನವಜಾತ ಶಿಶು ಮರಣಹೊಂದಿದರೆ ಅದು ನೇರವಾಗಿ ಸ್ವರ್ಗಕ್ಕೆ ಹೋಗುತ್ತದೆ ಎಂದು ನಂಬಿದ್ದರು; ಅಲ್ಲಿ ಪಾಪಕ್ಕೆ ಅವಕಾಶವಿಲ್ಲ; ಮಕ್ಕಳು ಹುಟ್ಟುವಾಗ ಮುಗ್ಧರಾಗಿರುತ್ತಾರೆ; ಅಲ್ಲಾಹು ಯಾವುದೇ ಕಾಲಕ್ಕೂ ದಯಾಳುವಾಗಿರುತ್ತಾನೆ. ಮಕ್ಕಳೆಡೆಗೆ ಮುಹಮ್ಮದ್ ಪೈಗಂಬರರ ಮತ್ತು ಕ್ರಿಸ್ತನ ಕರುಣೆಯನ್ನು ಯಾವಾಗಲೂ ಸ್ಮರಿಸಲಾಗುತ್ತದೆ. ಲೈಂಗಿಕತೆ ಬಗೆಗೆ ಇಸ್ಲಾಂ ಧರ್ಮದಲ್ಲಿ ಯಾವುದೇ ವಿರೋಧ ಇರಲಿಲ್ಲ. ಹಾಗಾಗಿ ಮಕ್ಕಳು ಅದರಲ್ಲಿಯೂ ಹೆಣ್ಣು ಮಕ್ಕಳು ಮದುವೆಯಾಗುವ ತನಕ ತಮ್ಮ ಕನ್ಯತ್ವ ಕಾಪಾಡಿಕೊಳ್ಳುವಂತೆ ನೋಡಿಕೊಂಡರೂ, ಬಾಲ್ಯದ ಲೈಂಗಿಕತೆಗೆ ಯಾವುದೇ ಪಾಪವನ್ನು ಹೊರಿಸುವ ಅಗತ್ಯವಿರಲಿಲ್ಲ. [41]

ಈ ಭಿನ್ನತೆಗಳು ಎಲ್ಲಿಗೆ ಕರೆದುಕೊಂಡುಹೋಗುತ್ತವೆ? ಮಧ್ಯಯುಗದಲ್ಲಿ ಕ್ರೈಸ್ತ ಸಮಾಜಕ್ಕಿಂತ ಮುಸ್ಲಿಂ ಸಮಾಜದಲ್ಲಿ ಮಕ್ಕಳ ಬೇಡಿಕೆಗಳಿಗೆ ತಂದೆತಾಯಿಗಳು ಹೆಚ್ಚಾಗಿ ಮಣಿಯುವುದು ಕಾಣಿಸುತ್ತದೆ. ಇದಕ್ಕೆ ಸಮಾಜದಲ್ಲಿನ ಹೆಚ್ಚಿನ ಸಮೃದ್ಧಿ ಕೂಡ ಭಾಗಶಃ ಕಾರಣ ಇರಬಹುದು. ಹುಡುಗರು ಮುಂಚೆಯೇ ಧಾರ್ಮಿಕ ಶಿಕ್ಷಣಕ್ಕೆ ಆಸಕ್ತಿ ತೋರಿದ ಸಂದರ್ಭಗಳನ್ನು ಹೊರತುಪಡಿಸಿ ಗಂಡು ಮತ್ತು ಹೆಣ್ಣು ಮಕ್ಕಳು ಏಳು ವರ್ಷಗಳಾಗುವವರೆಗೆ ತಾಯಿಯ ಸುಪರ್ದಿನಲ್ಲಿರುತ್ತಿದ್ದರು .ಧರ್ಮದ ಹೊರತಾಗಿ ಕೂಡ ಈ ಮಾದರಿಗೆ ಉತ್ತೇಜನವಿತ್ತು. ಆಸಕ್ತಿಕರ ವಿಷಯವೆಂದರೆ, ಇತರ ಯಾವುದೇ ಸಮಾಜಗಳಿಗಿಂತ ನಿಸ್ಸಂಶಯವಾಗಿ ಇಸ್ಲಾಂನಲ್ಲಿ ದೈಹಿಕ ದಂಡನೆಯ ಔಚಿತ್ಯದ ಬಗೆಗೆ ಹೆಚ್ಚಿನ ಚರ್ಚೆಗಳು ನಡೆದಿದ್ದರೂ, ಈ ಧರ್ಮಕ್ಕೆ ಸೇರಿದ ತಂದೆತಾಯಿಗಳು ಮತ್ತು ಶಾಲಾ ಶಿಕ್ಷಕರು ಮಕ್ಕಳನ್ನು ದೈಹಿಕವಾಗಿ ದಂಡಿಸುತ್ತಿದ್ದರು; ಆದರೆ ನಾಣ್ಯದ ಇನ್ನೊಂದು ಬದಿಯಲ್ಲಿ, ಕ್ರೈಸ್ತ ಧರ್ಮದಲ್ಲಿ ಮಕ್ಕಳಿಗೆ ನೀಡುತ್ತಿದ್ದ ಹೆಚ್ಚಿನ ದೈಹಿಕ ದಂಡನೆಯನ್ನು ಖಂಡಿಸಲಾಗುತ್ತಿತ್ತು. ಹಲವು ಇಸ್ಲಾಂ ವ್ಯಾಖ್ಯಾನಕಾರರು, ಉದಾಹರಣೆಗೆ, ಇಬ್ನ್ ಖಲ್ದೂನ್‌ನಂತಹ ಇತಿಹಾಸಕಾರರು

[41] *Elizabeth Warnock Fernea, ed., Children in the Muslim Middle East (Austin: University of Texas, 1995).*

ಮಕ್ಕಳನ್ನು ಕುರಿತಂತೆ ಹೆಚ್ಚಿನ ಸಂಯಮವನ್ನು ಉಪದೇಶಿಸಿದರು. ಅವರ ಪ್ರಕಾರ ಮಕ್ಕಳಿಗೆ ಹೊಡೆಯುವುದರಿಂದ ಅವರಲ್ಲಿ ನುಣುಚಿಕೊಳ್ಳುವ ಮತ್ತು ಆಲಸ್ಯದ ಪ್ರವೃತ್ತಿ ಬೆಳೆಯುತ್ತದೆ ಎಂದು ಅವರು ವಾದಿಸುತ್ತಿದ್ದರು. ಇಸ್ಲಾಂ ಧರ್ಮದ ಕಾನೂನುಗಳು ಕಟ್ಟುನಿಟ್ಟಾಗಿ ಯಾವ ರೀತಿಯ ತಪ್ಪುಗಳಿಗೆ ಯಾವ ರೀತಿಯ ದಂಡನೆ ಸೂಕ್ತ ಎಂಬುದನ್ನು ಸೂಚಿಸಿದ್ದವು; ಮತ್ತು ಯಾವುದೇ ಸಂದರ್ಭದಲ್ಲಿಯೂ ಮುಖವಷ್ಟೇ ಅಲ್ಲ, ಕೈಗಳಿಗೆ ಕೂಡ ಹೊಡೆಯಬಾರದು ಎಂಬ ಆದೇಶವಿರುತ್ತಿತ್ತು. ಇದು ಒಟ್ಟಂದದಲ್ಲಿ ಇಸ್ಲಾಂ ಧರ್ಮದ ಕಾನೂನಿನ ಸೂಕ್ಷ್ಮತೆಯನ್ನಷ್ಟೇ ಪ್ರತಿಫಲಿಸುತ್ತದೆ. ಆದರೆ ಇಲ್ಲಿ ಮಕ್ಕಳ ಹಕ್ಕುಗಳ ಬಗೆಗೆ ಹೆಚ್ಚಿನ ಕಾಳಜಿ ಕೂಡ ಇರುತ್ತಿತ್ತೇ? ಕೊನೆಯದಾಗಿ, ಕ್ರಿ.ಶ 1300-1600ರ ನಡುವಿನ ಅವಧಿಯಲ್ಲಿ ಇಸ್ಲಾಂ ಧರ್ಮದಲ್ಲಿ ಮಕ್ಕಳ ಮರಣದಿಂದ ದುಃಖತಪ್ತರಾದ ಹೆತ್ತವರಿಗೆ ಸಾಂತ್ವನ ಕೊಡುವಂತಹ ಪುಸ್ತಕಗಳು ಹೆಚ್ಚಿನ ಪ್ರಮಾಣದಲ್ಲಿ ಮತ್ತು ವೈವಿಧ್ಯಗಳಲ್ಲಿ ಪ್ರಕಟಗೊಂಡವು. 'ಮಕ್ಕಳ ಸಾವಿನ ಬಗೆಗಿನ ಆತಂಕವನ್ನು ಕುರಿತ ಪುಸ್ತಕ' (Book of Anxiety about Children's Death) ಮತ್ತು 'ಮಕ್ಕಳ ಸಾವಿನಿಂದ ಚಿಂತೆಗೀಡಾದವರಿಗೆ ಸಾಂತ್ವನ' (Consolation for Those in Distress on the Death of Children) ದಂತಹ ಪುಸ್ತಕಗಳಿಗೆ ಸರಿಸಾಟಿಯಾಗಿ ಕ್ರೈಸ್ತ ಧರ್ಮದಲ್ಲಿ ಯಾವುದೇ ಸಾಹಿತ್ಯ ಲಭ್ಯವಿರಲಿಲ್ಲ. ಈ ಸರಣಿ ಪುಸ್ತಕಗಳು ನಿಸ್ಸಂಶಯವಾಗಿಯೂ ಹದಿನಾಲ್ಕನೆಯ ಶತಮಾನದಲ್ಲಿ ಯುರೋಪ್ ಖಂಡಕ್ಕಿಂತ ಮೊದಲು ಮಧ್ಯಪ್ರಾಚ್ಯವನ್ನು ಬಾಧಿಸಿದ 'ಕಪ್ಪು ಸಾವಿ'ನಂತಹ ಸಾಂಕ್ರಾಮಿಕ ರೋಗಗಳು ತಂದೊಡ್ಡಿದ ನೋವನ್ನು ಪ್ರತಿಫಲಿಸುತ್ತವೆ; ಆದರೆ ಅವುಗಳು ಹೆಚ್ಚಿದ ಭಾವನಾತ್ಮಕ ಸಂಬಂಧಗಳನ್ನು ಕೂಡ ಪ್ರತಿಫಲಿಸುತ್ತಿದ್ದವೇ?.[42]

ಈ ಸಂದರ್ಭದಲ್ಲಿ ನಾವು ಉತ್ಪ್ರೇಕ್ಷೆಗೆ ಅವಕಾಶಕೊಡದೆ, ಈ ವಿಷಯವನ್ನು ಕುರಿತಂತೆ ನಮಲ್ಲಿರುವ ಸಾಕಷ್ಟು ಪ್ರಮಾಣದ ಅಜ್ಞಾನವನ್ನು ಒಪ್ಪಿಕೊಳ್ಳುವುದು ಕೂಡ ಅಗತ್ಯ. ಕ್ರೈಸ್ತ ಧರ್ಮೀಯರು ಕೂಡ ತಮ್ಮ ಮಕ್ಕಳು ಗೆಡ್ಡೆ ಪ್ಲೇಗಿನಿಂದ ಸತ್ತಾಗ ಇಸ್ಲಾಂ ಧರ್ಮೀಯರಷ್ಟೇ ದುಃಖಿತರಾಗುತ್ತಾರೆ; ಇಲ್ಲಿರುವ ಭಿನ್ನತೆ ಅವರ ಬಾಹ್ಯ ವರ್ತನೆಯನ್ನಷ್ಟೆ ಪ್ರತಿಫಲಿಸುತ್ತಿರುವುದರಲ್ಲಿರಬಹುದು. ಮಕ್ಕಳಿಗೆ ವಿಧಿಸುವ ಶಿಕ್ಷೆಯ ಬಗೆಗೆ ಮತ್ತು ಧಾರ್ಮಿಕ ನಿಯಮಗಳ ಬಗೆಗೆ ಏನೇ ಚರ್ಚೆ ನಡೆದಿದ್ದರೂ ಹಲವು ಇಸ್ಲಾಂ ಧರ್ಮೀಯ ಮಕ್ಕಳಿಗೆ, ತಮ್ಮ ಕಾಲಕ್ಕೆ ಸೇರಿದ ಕ್ರೈಸ್ತ ಧರ್ಮದ ಮಕ್ಕಳಂತೆ, ತಂದೆ ಎಂದರೆ ಒಂದು ದೂರದ ವ್ಯಕ್ತಿತ್ವ ಮತ್ತು ಕಠಿಣ ಶಿಸ್ತು ವಿಧಿಸುವ ಕಠೋರ ಮನುಷ್ಯ ಎಂಬುದಷ್ಟೆ ಅನುಭವಕ್ಕೆ ಬಂದಿರುತ್ತದೆ. ಕ್ರೈಸ್ತ ಧರ್ಮದಲ್ಲಿದ್ದ ಆದಿಮಪಾಪದ ಪರಿಕಲ್ಪನೆಯು ನಿಸ್ಸಂಶಯವಾಗಿ ಮಕ್ಕಳಲ್ಲಿ ಭಯ ಹುಟ್ಟಿಸಿ, ಅವರನ್ನು ಶಿಸ್ತಿಗೆ ಒಳಪಡಿಸಿ ಬೆಳೆಸುವಲ್ಲಿ ಸಹಾಯ ಮಾಡಿತು. ಇಸ್ಲಾಂ ಧರ್ಮದಲ್ಲಿ ಈ ಆಚರಣೆಯು ಹೇಗೆ ಭಿನ್ನವಾಗಿತ್ತು?

ಒಟ್ಟಾರೆಯಾಗಿ ಧರ್ಮದ ಪ್ರಭಾವ ಪರಿಣಾಮಕಾರಿಯಾಗಿತ್ತು ಎಂಬುದು ನಮಗೆ ಗೊತ್ತಿದೆ. ಧಾರ್ಮಿಕ ಸಮುದಾಯದಲ್ಲಿ ಮಕ್ಕಳನ್ನು

[42] *Avner Gil'adi, Children of Islam: Concepts of Childhood in Medieval Muslim Society (New York: St. Martin's Press, 1992).*

ತೊಡಗಿಸಿಕೊಳ್ಳುವುದನ್ನು ಕುರಿತಂತೆ ಹೆಚ್ಚಿದ ಮಹತ್ವದ ಕಾರಣಕ್ಕಾಗಿ ಮಕ್ಕಳನ್ನು ನೋಡಿಕೊಳ್ಳುವ ರೀತಿಯಲ್ಲಿ ತಾತ್ವಿಕವಾಗಿ ಮತ್ತು, ಸಾಕಷ್ಟು ಮಟ್ಟಿಗೆ, ಆಚರಣೆಯಲ್ಲಿ ಕೂಡ ಹೆಚ್ಚಿನ ಬದಲಾವಣೆ ಉಂಟಾಯಿತು. ಇದೇ ಸಮಯಕ್ಕೆ ಪ್ರಮುಖ ಧರ್ಮಗಳ ನಡುವಿನ ಭಿನ್ನಾಭಿಪ್ರಾಯಗಳು ಬಾಲ್ಯದ ಮೇಲೆ ಪರಿಣಾಮ ಬೀರುವ ರೀತಿಯಲ್ಲಿ ಹೊಸ ತುಲನಾತ್ಮಕ ವ್ಯತ್ಯಾಸಗಳನ್ನು ತೆರೆದಿಟ್ಟದ್ದಲ್ಲದೆ ನೇರವಾಗಿ ಮಕ್ಕಳ ಮೇಲೂ ಪರಿಣಾಮ ಬೀರತೊಡಗಿದವು. ನಾವು ಬಾಲ್ಯವನ್ನು ಒಂದು ಐತಿಹಾಸಿಕ ವಿಷಯವೆಂದು ಗಂಭೀರವಾಗಿ ಪರಿಗಣಿಸಲು ತೊಡಗಿರುವ ಸಂದರ್ಭದಲ್ಲಿ ಹೆಚ್ಚಿನ ಸಂಶೋಧನೆ ಮತ್ತು ವಿಶ್ಲೇಷಣೆಗೆ ಧಾರಾಳ ಅವಕಾಶವಿದೆ.

ಕೃಷಿ-ಆಧಾರಿತ ನಾಗರಿಕತೆಯ ಚೌಕಟ್ಟಿನ ಒಳಗಿರುವ ಒಂದು ಹಳೆಯ ಚರ್ಚೆಗೆ ಮತ್ತು ಒಂದು ಹೊಸ ತುಲನಾತ್ಮಕ ಅಧ್ಯಯನಕ್ಕೆ ಸಂಬಂಧಪಟ್ಟ ಬೇಡಿಕೆಗೆ ಸಂಬಂಧಿಸಿದ ಒಂದು ಹೋಲಿಕೆಯನ್ನು ಕುರಿತು ನಾವು ಮಾತನಾಡಬೇಕು; ಆಧುನಿಕಪೂರ್ವ ಪಶ್ಚಿಮ ಯುರೋಪಿನಲ್ಲಿ ಬಾಲ್ಯವು ರೂಪುಗೊಂಡ ವಿಧಾನದಲ್ಲಿ ಏನಾದರೂ ವಿಶೇಷತೆಯಿತ್ತೇ? ನಾವು ಹಿಂದೆ ನೋಡಿದಂತೆ, ಫಿಲೀಪ್ ಅರೀಸ್ ಅವರು ಬಾಲ್ಯದ ಇತಿಹಾಸವನ್ನು ಕುರಿತು ಹೇಳಿದಂತೆ, ನಮ್ಮ ಪ್ರಶ್ನೆಗೆ ಮೊದಲಿಗೆ ಸಿಕ್ಕುವ ಉತ್ತರ, 'ಹೌದು' ಎಂದು. ಆಧುನಿಕಪೂರ್ವ ಪಾಶ್ಚಾತ್ಯ ಜಗತ್ತು ಆಧುನಿಕ ಮಾನದಂಡಗಳಿಗೆ ಹೋಲಿಸಿದರೆ ವಿಶಿಷ್ಟವಾಗಿತ್ತು ಮತ್ತು ಅಷ್ಟೆ ಭಯಾನಕವೂ ಆಗಿತು. ಮಕ್ಕಳನ್ನು ಹೆಚ್ಚಾಗಿ ಕಠಿಣ ದುಡಿಮೆಗೆ ಹಚ್ಚುತ್ತಿದ್ದರು, ಹೊಡೆಯುತ್ತಿದ್ದರು ಮತ್ತು ಅಕಾಲಿಕವಾಗಿ ಅವರು ಸಾವಿಗೀಡಾದ ಸಂದರ್ಭದಲ್ಲಿ ಸೂಕ್ತವಾದ ಶೋಕಾಚರಣೆಯೂ ಇರುತ್ತಿರಲಿಲ್ಲ. ಸಮಾಜದಲ್ಲಿ ಮಕ್ಕಳು ಕಾಣಸಿಗುತ್ತಿದ್ದುದು ಕುಟುಂಬದ ವರ್ಣಚಿತ್ರಗಳಲ್ಲಿ. ಕೆಲವೊಮ್ಮೆ ಅವರನ್ನು ವಯಸ್ಕರ ಮಾದರಿಯಲ್ಲಿ ತೋರಿಸಲಾದ ಚಿತ್ರಗಳಲ್ಲಿ. ಈ ಮಾದರಿಯು ಬದಲಾಗಲು ಪ್ರಾರಂಭವಾದದ್ದು ಹದಿನೆಂಟನೆಯ ಶತಮಾನದಲ್ಲಷ್ಟೆ. ಇದಾದ ಮೇಲೆ ಬಂದದ್ದು ತಂದೆತಾಯಿಗಳು ತಮ್ಮ ಮಕ್ಕಳ ಬಗೆಗೆ ಹೆಮ್ಮೆ ಪಡುವುದನ್ನು ತೋರಿಸುವ ಸಂಸ್ಕರಣಾವಾದಿ ಪ್ರತಿಕ್ರಿಯೆ. ಇದು ಯುರೋಪಿಯನ್ ಕಾನೂನುಗಳು ಬಾಲ್ಯವನ್ನು ಅಧಿಕೃತವಾಗಿ ಪರಿಗಣಿಸಿ ಸಾಕಷ್ಟು ಮಟ್ಟಿಗೆ ಅದರ ರಕ್ಷಣೆಗೆ ನಿಂತ ಕಾಲ. ಆಧುನಿಕಪೂರ್ವ ಇಂಗ್ಲೆಂಡಿನಲ್ಲಿ ಮಗು ಹುಟ್ಟಿದ ಸಂಭ್ರಮದಲ್ಲಿ ತಂದೆಯರು ಶುಭಾಶಯಪತ್ರಗಳನ್ನು ಕಳುಹಿಸುತ್ತಿದ್ದರು. ತನ್ನ ಒಂದು ಮಗು ಸತ್ತಾಗ ಮಾರ್ಟಿನ್ ಲೂಥರ್ ತತ್ತರಿಸಿಹೋಗಿದ್ದರು. ಶಿಸ್ತಿಗೆ ಸಂಬಂಧಿಸಿದಂತೆ ಸಾಮಾಜಿಕ ನಿಯಮಗಳು ಇದ್ದವು ಮತ್ತು ಕೆಲವರು ವಾದಿಸುವಂತೆ ಮಕ್ಕಳ ಶೋಷಣೆ ಆಧುನಿಕ ಕಾಲಕ್ಕಿಂತ ಕಡಿಮೆ ಇತ್ತು. ಅರೀಸ್ ಚಿತ್ರಿಸಿದ್ದ ಮಂಕಾಗಿದ್ದ ಚಿತ್ರಣವು ತಿಳಿಯಾಗತೊಡಗಿತು.[43]

ಈ ಚರ್ಚೆ ಯಾವುದನ್ನು ಪರಿಗಣಿಸಲಿಲ್ಲವೋ ಅದು ಈಗ ನನ್ನ ಪ್ರಕಾರ ತುಲನಾತ್ಮಕ, ಜಾಗತಿಕ-ಐತಿಹಾಸಿಕ ಮಾದರಿಯಿಂದ ಸಾಧ್ಯವಾಗುತ್ತದೆ. ಇಲ್ಲಿ ಇರುವ ಮುಖ್ಯ ಪ್ರಶ್ನೆ, ಆಧುನಿಕಪೂರ್ವ ಯುರೋಪಿನಲ್ಲಿ ಬಾಲ್ಯವು ಆಧುನಿಕ ಕಾಲಕ್ಕಿಂತ ಭಿನ್ನವಾಗಿತ್ತೇ ಎಂಬುದಲ್ಲ. ಹೌದು, ಅದು ಭಿನ್ನವಾಗಿತ್ತು, ಆದರೆ ತಂದೆತಾಯಿಗಳ ವಾತ್ಸಲ್ಯ ಮತ್ತು ಸಾಮಾಜಿಕ ಕಾಳಜಿಯನ್ನು ತೆಗೆದುಹಾಕುವಷ್ಟಲ್ಲ ಎಂದು ನಮಗೆ

[43] *Ariès, Centuries of Childhood; Pollock, Forgotten Children; Steven Ozment, Ancestors: The Loving Family in Old Europe (Cambridge, MA: Harvard University Press, 2001); Jean Delumeau, Sin and Fear: The Emergence of*

ಗೊತ್ತಿದೆ. ಇಲ್ಲಿ ಇರುವ ಮುಖ್ಯ ಪ್ರಶ್ನೆ ಎಂದರೆ, ಬಹುಶಃ: ಆಧುನಿಕಪೂರ್ವ ಯುರೋಪಿನಲ್ಲಿ, ಅದರಲ್ಲಿಯೂ ಮಧ್ಯಯುಗೀನ ಕಾಲದಲ್ಲಿ ಮತ್ತು ಆಧುನಿಕ ಕಾಲದ ಆರಂಭದಲ್ಲಿ ಹದಿನೆಂಟನೆಯ ಶತಮಾನಕ್ಕೆ ಬಂದ ಹಾಗೆ, ಬಾಲ್ಯವು ಇತರ ಕೃಷಿ-ಆಧಾರಿತ ನಾಗರಿಕತೆಗಳಿಗಿಂತ ಭಿನ್ನವಾಗಿತ್ತೇ ಎಂಬುದು.

ಹೆಚ್ಚು ಪ್ರಕೃತವಾದ ಈ ಚರ್ಚೆಯ ಸಂದರ್ಭದಲ್ಲೂ ಕೂಡ ನಾವು ಎಚ್ಚರ ವಹಿಸಬೇಕು. ನಾವು ನೋಡಿದಂತೆ ಎಲ್ಲಾ ಕಡೆಯ ಕೃಷಿ-ಆಧಾರಿತ ನಾಗರಿಕತೆಗಳು ಮಕ್ಕಳ ದುಡಿಮೆಯ ಮೇಲೆ ಅವಲಂಬಿತವಾಗಿದ್ದವು; ಎಲ್ಲ ಕಡೆ ಕಠಿಣ ಶಿಸ್ತು ಮತ್ತು ವಿಧೇಯತೆಗೆ ಹೆಚ್ಚಿನ ಪ್ರಾಧಾನ್ಯ ಇತ್ತು; ಎಲ್ಲ ಕಡೆ ಲಿಂಗತಾರತಮ್ಯ ಪ್ರಧಾನವಾಗಿತ್ತು; ಎಲ್ಲ ಕಡೆ ಕೆಲವರಿಗಷ್ಟೆ ಶಿಕ್ಷಣದ ಅವಕಾಶ ಇದ್ದು, ಉಳಿದವರು ದುಡಿಮೆಯಲ್ಲಿ ತೊಡಗಿಕೊಂಡಿರುತ್ತಿದ್ದರು. ಯುರೋಪು ಈ ಚೌಕಟ್ಟಿಗೆ ಸರಿಯಾಗಿ ಹೊಂದಿಕೊಂಡಿತ್ತು. ಇದರ ಜೊತೆಗೆ ನಾವು ಪ್ರಮುಖ ವ್ಯತ್ಯಾಸಗಳ ಸಾಧ್ಯತೆಗಳನ್ನು ಕೂಡ ಅನ್ವೇಷಿಸಬೇಕು. ನಾವೀಗಾಗಲೇ ಕ್ರೈಸ್ತ ಧರ್ಮದಲ್ಲಿ ಆದಿಮಪಾತಕವನ್ನು ಕುರಿತಂತೆ ಇದ್ದ ನಂಬಿಕೆಯನ್ನು ಗಮನಿಸಿದ್ದೇವೆ. ಪ್ರಾಟೆಸ್ಟಂಟ್ ಪಂಥ ಬೆಳೆದಂತೆ ಮಕ್ಕಳಲ್ಲಿ ಶಿಸ್ತು ಬೆಳೆಸುವ ನಿಟ್ಟಿನಲ್ಲಿ ಸಾವು ಮತ್ತು ನರಕಶಿಕ್ಷೆಯ ಕಲ್ಪನೆಗಳು ಕೂಡ ಸ್ಪಷ್ಟವಾಗಿ ಬೆಳೆಯತೊಡಗಿದವು. ಆದರೆ ಇಲ್ಲಿ ಇನ್ನೊಂದು ಅಂಶ ಇದೆ. ಅದಕ್ಕೆ ಇತ್ತೀಚಿಗೆ ಲಿಂಗಚರ್ಚೆಯ ಸಂದರ್ಭದಲ್ಲಿ ಮತ್ತೆ ಜೀವವನ್ನು ತುಂಬಲಾಗಿದೆ; ಅದನ್ನು ಬಾಲ್ಯದ ದೃಷ್ಟಿಯಿಂದ ಕೂಡ ನೋಡಬಹುದು. ಅದೇನೆಂದರೆ, ಮಧ್ಯಕಾಲದ ಎರಡನೆಯ ಭಾಗದ ಅನಂತರ ಪಾಶ್ಚಾತ್ಯ ಯುರೋಪು ಒಂದು ವಿಶಿಷ್ಟ ರೀತಿಯ ಕುಟುಂಬ ಪದ್ಧತಿಯನ್ನು ಬೆಳೆಸಿತು; ಇಲ್ಲಿ ನಮಗೆ ಹೆಚ್ಚಿನಬವರು ತಡವಾಗಿ, - ಅಂದರೆ, ಸರಾಸರಿ ಇಪ್ಪತ್ತಾರು ಅಥವಾ ಇಪ್ಪತ್ತೇಳನೆಯ ವಯಸ್ಸಿಗೆ - ಮದುವೆಯಾಗುವ ಮತ್ತು ಮದುವೆ ಮಾಡಿಕೊಳ್ಳಲಾಗದೇ ಇರುವ ಸಾಕಷ್ಟು ಜನÀರ ಗುಂಪು ಕಾಣಸಿಗುತ್ತದೆ. ಯುರೋಪಿಯನ್ ಶೈಲಿಯ ಈ ಕುಟುಂಬ ವ್ಯವಸ್ಥೆಗೆ ತಮ್ಮ ಜಮೀನಿಗೆ ಹೆಚ್ಚಿನ ಸಂಖ್ಯೆಯ ಜನರು ಉತ್ತರಾಧಿಕಾರಿಳಾಗುವುದನ್ನು ತಪ್ಪಿಸುವ ಒಂದು ತೀವ್ರತೆರನಾದ ಬಯಕೆ ಬಹುಶಃ ಮೂಲಕಾರಣವಾಗಿರಬೇಕು. ಜನರು ಮದುವೆಯಾಗಲು ಆಸ್ತಿಯನ್ನು ಹೊಂದುವ ತನಕ ಕಾಯಬೇಕಿತ್ತು. ಹಾಗಾಗಿ ಮಕ್ಕಳು ಹುಟ್ಟಬೇಕಾದ ವಯಸ್ಸಿನಲ್ಲಿ ಹಲವು ವರ್ಷಗಳು ಕಳೆದು ಹೋಗಿ, ಸಹಜವಾಗಿ ಜನನ ಪ್ರಮಾಣ ಇಳಿಮುಖವಾಗಿತ್ತು.[44]

ತತ್ಪರಿಣಾಮವಾಗಿ ಹುಟ್ಟಿಕೊಂಡ ಕೌಟುಂಬಿಕ ರಚನೆಯು, ಮಕ್ಕಳು ತಡವಾಗಿ ಮದುವೆಯಾಗಿ ಮಕ್ಕಳು ಮಾಡಿಕೊಳ್ಳಲು ಪ್ರಾರಂಭಮಾಡುವ ಕಾರಣದಿಂದಾಗಿ ಇಳಿವಯಸ್ಸಿಗೆ ಜಾರಿದ ಅಜ್ಜ ಅಜ್ಜಿಯರು ಇಲ್ಲವಾಗಿ ಕೇವಲ ತಂದೆ ತಾಯಿ ಮತ್ತು ಮಕ್ಕಳು ಮಾತ್ರ ಇರುವ ಅವಿಭಕ್ತ ಕೌಟುಂಬಿಕ ಘಟಕವಾಗಿ ರೂಪುಗೊಳ್ಳತೊಡಗಿತು. ಇದು ಪಶ್ಚಿಮ ಯುರೋಪು ಮತ್ತು ಏಷ್ಯಾ ಮತ್ತು ಆಫ್ರಿಕಾದ ನಡುವೆ ಬಾಲ್ಯಗಳಲ್ಲಿ ಇನ್ನೂ ಹೆಚ್ಚಿನ ವ್ಯತ್ಯಾಸಗಳಿಗೆ ಕಾರಣವಾಯಿತು. ಮೊದಲನೆಯದಾಗಿ, ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿದ್ದಂತೆ ದುಡಿಮೆಗೆ ಹೆಚ್ಚಿನ ಜನರು ಲಭ್ಯ ಇಲ್ಲದ ಕಾರಣಕ್ಕೆ

[44] *Mary Hartman, Households and the Making of History: A Subversive View of the Western Past (New York: Cambrige University Press, 2004).*

ತಂದೆತಾಯಿಗಳು ಹೆಚ್ಚಿನ ಶ್ರಮ ಪಡಬೇಕಾಗಿದ್ದುದರಿಂದ ಸಣ್ಣ ಮಕ್ಕಳಿಗೆ ತಂದೆತಾಯಿಗಳ ಮತ್ತು ಹಿರಿಯರಿಂದ ಸಿಗುತ್ತಿದ್ದ ಗಮನ ಕಡಿಮೆಯಾಯಿತು. ಮಧ್ಯ ಏಷ್ಯಾ ಮತ್ತಿತರ ಸಮಾಜಗಳಲ್ಲಿ ಮಕ್ಕಳನ್ನು ಬಟ್ಟೆಯಿಂದ ಸುತ್ತಿ ಮಲಗಿಸುವ ಪದ್ಧತಿ ಇತ್ತು. ಆದರೆ, ಯುರೋಪಿನಲ್ಲಿ ಇದು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ, ಮಕ್ಕಳ ಸುರಕ್ಷತೆ ಬಗೆಗೆ ಚಿಂತೆಯಿಲ್ಲದೆ ತಾಯಂದಿರು ಕೆಲಸ ಮಾಡಲು ಸುಲಭವಾಗುವಂತೆ ಅವರನ್ನು, ಗೋಡೆಗೆ ಮೊಳೆಹೊಡೆದು ಅದಕ್ಕೆ ಕಟ್ಟಿದ ಜೋಲಿಯಲ್ಲಿ ಮಲಗಿಸಲಾಗುತ್ತಿತ್ತು.[45] ಬಾಲ್ಯದ ಇನ್ನೊಂದು ನಿಟ್ಟನ್ನು ನೋಡಿದರೆ, ಯುರೋಪಿಯನ್ ಶೈಲಿಯ ಕುಟುಂಬವು ಯೌವನಕಾಲವು ದೀರ್ಘಾವಧಿಯದಾಗಿರುವುದಕ್ಕೆ ಅವಕಾಶ ಮಾಡಿಕೊಟ್ಟಿತು: ವಯಸ್ಸಿಗೆ ಬಂದವರು, ತಮ್ಮನ್ನು ತಾವೇ ನೋಡಿಕೊಳ್ಳಲು ಸಮರ್ಥರಾದವರು ಕೂಡ, ಇನ್ನೂ ಆಸ್ತಿವಂತರಾಗದೆ ಇರುವ ಕಾರಣಕ್ಕೆ, ಅವರಿಗೆ ತಮ್ಮನ್ನು ಪ್ರೌಢರೆಂದು ಗುರುತಿಸಿಕೊಳ್ಳಲು ಮತ್ತು ಸಹಜ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಅವಕಾಶ ಇರಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಮಧ್ಯ ಏಷ್ಯಾದ ಕುಟುಂಬಗಳು ಹದಿಹರೆಯದ ಉಲ್ಲಾಸಕ್ಕೆ ಹೆಚ್ಚಿನ ಗಮನ ಕೊಡದೆ, ಆದಷ್ಟು ಬೇಗ ಶಿಷ್ಯವೃತ್ತಿಯನ್ನು ಮುಗಿಸಿ, ಅವಿಭಕ್ತ ಕುಟುಂಬದ ಹತೋಟಿಯ ಒಳಗೆ ಮದುವೆಯಾಗುವ ಅಗತ್ಯವನ್ನು ಉಂಟುಮಾಡಲು. ಯೌವನಾವಸ್ಥೆಯ ಅವಧಿಯನ್ನು ಇನ್ನೂ ಕಡಿಮೆ ಮಾಡುವುದರತ್ತ ಯೋಚಿಸುತ್ತಿದ್ದವು. ಯುರೋಪಿನಲ್ಲಿ ಯೌವನವನ್ನು ದೀರ್ಘಗೊಳಿಸಿದುದರಿಂದ ಪುಂಡಾಟಿಕೆ, ವಯಸ್ಸಾದ ತಂದೆಯರೊಂದಿಗೆ ಜಗಳವಾಡುವುದು ಮತ್ತು ಸಮಾಜವು ಕಡಿವಾಣ ಹಾಕಬೇಕಾದಂತಹ ಲೈಂಗಿಕ ನಡವಳಿಕೆಗಳು - ಮೊದಲಾದವು ಹುಟ್ಟಿಕೊಂಡವು. ಆದರೆ ಇದರಲ್ಲಿ ಕೆಲವು ಅನುಕೂಲಗಳು ಕೂಡ ಇದ್ದವು.[46]

ತಾತ್ಕಾಲಿಕ ನೆಲೆಯಲ್ಲಿ ಹೇಳುವುದಾದರೆ, ನಿರ್ದಿಷ್ಟವಾಗಿ ಹದಿನಾರನೆಯ ಶತಮಾನದಿಂದ ಹಿಡಿದು ಹದಿನೇಳನೆಯ ಶತಮಾನದ ತನಕದ ಅವಧಿಯಲ್ಲಿ ಭಾಗಶಃ ಧರ್ಮ ಮತ್ತು ಅದಕ್ಕಿಂತಲೂ ಮುಖ್ಯವಾಗಿ ಕೌಟುಂಬಿಕ ಶೈಲಿಯಿಂದ ಪ್ರೇರಿತವಾದ ಒಂದು ವಿಶಿಷ್ಟ ಯುರೋಪಿಯನ್ ಶೈಲಿಯ ಬಾಲ್ಯದ ಪರಿಕಲ್ಪನೆಯನ್ನು ನಾವು ಇನ್ನಷ್ಟು ಪರಿಶೀಲಿಸಬೇಕಾದ ಅಗತ್ಯವಿದೆ. ಇದು ಆಧುನಿಕ–ಆಧುನಿಕಪೂರ್ವದ ಪರಿಸ್ಥಿತಿಯನ್ನು ಕುರಿತಾದ ಹಳೆಯ ಚರ್ಚೆಯ ಹೊಸರೂಪವಲ್ಲ, ಬದಲಿಗೆ, ಕೃಷಿ-ಆಧಾರಿತ ನಾಗರಿಕತೆಗಳನ್ನು ಹೆಚ್ಚು ಸಮಂಜಸವಾಗಿ ಹಾಗೂ ಸಮಾನವಾಗಿ ಹೋಲಿಸಿ ನೋಡಿ ಮಾಡುವ ಅಧ್ಯಯನವಾಗಬೇಕು. ಒಂದು ವೇಳೆ ಇಲ್ಲಿ ಕಂಡುಬರುವ ವಿಶಿಷ್ಟತೆಗಳು ಒಂದು ಹೊಸ ಚರ್ಚೆಯನ್ನು ಹುಟ್ಟುಹಾಕುವಂತಿದ್ದರೆ, ಅದರ ಪರಿಣಾಮ ಕುತೂಹಲಕಾರಿಯಾಗಿರುತ್ತದೆ: ಮೊದಲನೆಯದು, ಆಧುನಿಕಪೂರ್ವ ಯುರೋಪಿಗೆ ಸಂಬಂಧಪಟ್ಟಂತೆ – ವಿಶಿಷ್ಟ ಬಾಲ್ಯದ ಪ್ರತಿಧ್ವನಿಗಳು ನಮಗೆ ವಿಶಾಲ ಸಾಮಾಜಿಕ ಸಂಸ್ಥೆಗಳಲ್ಲಿ ಅಥವಾ ವಯಸ್ಕರ ಗುಣವಿಶೇಷಗಳಲ್ಲಿ ಕೇಳಿಸುತ್ತವೆಯೇ? ಚರ್ಚೆಯ ಎರಡನೆಯ ಅಂಶ ಆಧುನಿಕ ಬದಲಾವಣೆಯ ಅನಂತರದ ಪ್ರಕ್ರಿಯೆಗಳಿಗೆ ಸಂಬಂಧಪಟ್ಟಿದ್ದು. ಮುಂದಿನ

[45] Hunt, Parents and Children.
[46] *John Gillis, Youth in History.*

ಭಾಷಣದಲ್ಲಿ ಚರ್ಚಿಸಲಿರುವಂತೆ, ಕೃಷಿ-ಆಧಾರಿತ ಬಾಲ್ಯಜೀವನದಲ್ಲಿ ಕಂಡುಬರುವ ದೊಡ್ಡಮಟ್ಟದ ಏರುಪೇರುಗಳು ನಮಗೆ ಮೊದಲಿಗೆ ಕಾಣಸಿಗುವುದು ಯುರೋಪಿನಲ್ಲಿ. ಹಾಗಾಗಿ ಯುರೋಪಿಯನ್ ಮಾದರಿಯ ಕುಂದುಕೊರತೆಗಳೇ ಬದಲಾವಣೆಗೆ ಕಾರಣವಾದವೇ? (ಆರಂಭದ ಸುಧಾರಣಾವಾದಿಯೊಬ್ಬರ ಗುರಿ ಆದಿಮಪಾತಕವಾಗಿತ್ತು ಎಂಬುದು ಆಕಸ್ಮಿಕವಾಗಿರಲಿಕ್ಕಿಲ್ಲ; ಆದರೆ ಇದು ಇತರ ಸಂಸ್ಕೃತಿಗಳಲ್ಲಿ ಪರಿಗಣಿಸಬೇಕಾದ ವಿಷಯವೇ ಆಗಿರಲಿಲ್ಲ). ಹಾಗೆಯೇ, ಯುರೋಪ್ ಬದಲಾದಂತೆ, ಅದು ತನ್ನ ಹಿಂದಿನ ವಿಶಿಷ್ಟತೆಗಳ ಕುರುಹುಗಳನ್ನೇನಾದರೂ ಉಳಿಸಿಕೊಂಡಿತೇ? ಉದಾಹರಣೆಗೆ, ಆಧುನಿಕ ಪಾಶ್ಚಾತ್ಯ ಜಗತ್ತು ಹದಿಹರೆಯವನ್ನು ಹೊಸತಾಗಿ ಕಂಡುಕೊಳ್ಳುತ್ತಿರುವ ಬಗೆಗೆ ಸಾಕಷ್ಟು ಚರ್ಚೆ ನಡೆದಿದೆ ಮತ್ತು ಈ ಪರಿಕಲ್ಪನೆಗೆ ಹೊಸ ಆಯಾಮಗಳು ಸೇರಿಕೊಂಡಿವೆ. ಆದರೆ ಈ ಪರಿಕಲ್ಪನೆಯಲ್ಲಿ ಹಿಂದಿನ ಕಾಲದ ಯೌವನ ಮತ್ತು ಯೌವನದ ಸ್ವೇಚ್ಛಾಚಾರಗಳಿಗೆ ಸಂಬಂಧಿಸಿದ ಒಂದು ಅಸಾಮಾನ್ಯ ಪರಂಪರೆಯನ್ನು ಕೂಡ ಗಮನದಲ್ಲಿಟ್ಟುಕೊಂಡಿದೆಯೇ? ಒಂದು ಜಾಗತಿಕ ಇತಿಹಾಸದ ಮಸೂರದ ಮೂಲಕ ನೋಡಿದಾಗ ಪಾಶ್ಚಾತ್ಯ ಜಗತ್ತಿನ ಚಿತ್ರಣವೇ ಬದಲಾದಂತೆ ನಮಗೆ ಕಾಣುತ್ತದೆ ಮತ್ತು ಈ ಸಂದರ್ಭದಲ್ಲಿ ಬಾಲ್ಯ ಒಂದು ಕುತೂಹಲಕಾರಿ ಅಂಶವಾಗಿ ಅಲ್ಲಿ ಕಾಣುತ್ತದೆ.

ಜಾಗತಿಕ ಇತಿಹಾಸದಲ್ಲಿ ದೀರ್ಘಕಾಲ ಇದ್ದ ಕೃಷಿ ಅವಧಿಯ ಬಾಲ್ಯಜೀವನವನ್ನು ಕುರಿತಂತೆ ನಾವು ಮಾಡುವ ಅನ್ವೇಷಣೆಯಲ್ಲಿ ಸಹಜವಾಗಿ ನಮ್ಮ ಗಮನ ಇರಬೇಕಾಗಿರುವುದು, ಈ ಅವಧಿಯ ಅನಂತರದ ವಿದ್ಯಮಾನಗಳ ಬಗೆಗೆ. ಇಲ್ಲಿ ನಮಗೆ ಒಂದು ಭಿನ್ನವಾದ, ತಪ್ಪಿಸಿಕೊಳ್ಳಲು ಅಸಾಧ್ಯವಾದ ಮನುಷ್ಯ ವಿದ್ಯಮಾನದ ಆಧುನಿಕ ಆವೃತ್ತಿ ಅನಾವರಣವಾಗುವುದು ಕಾಣುತ್ತದೆ. ಬಾಲ್ಯಜೀವನವು ಕೃಷಿ ಮಾದರಿಯಿಂದ ಹೇಗೆ, ಯಾವಾಗ ಮತ್ತು ಏಕೆ ಬದಲಾಯಿತು? ಈ ಬದಲಾವಣೆಯ ಸಂದರ್ಭದಲ್ಲಿ ಉಂಟಾದ ಲಾಭ ಮತ್ತು ನಷ್ಟಗಳು ಯಾವುವು? ಆ ಸಂಕ್ರಮಣ ಕಾಲದಲ್ಲಿ ಉದ್ವಿಗ್ನತೆ ಮತ್ತು ಸಂದಿಗ್ಧತೆಗಳು ಯಾವ ರೀತಿಯವಾಗಿದ್ದವು? ನನ್ನ ಮುಂದಿನ ಲೇಖನದಲ್ಲಿ ಈ ಮಹತ್ವಪೂರ್ಣವಾದ ಪ್ರಶ್ನೆಗಳನ್ನು ಹಾಗೂ ಈಗಷ್ಟೆ ಬೆಳಕಿಗೆ ಬರುತ್ತಿರುವ ಬಾಲ್ಯದ ಒಂದು ಹೊಸ ನಾಟಕೀಯ ಪುನರಾವೃತ್ತಿಯನ್ನು ಚರ್ಚಿಸುತ್ತೇನೆ.

ಆದರೆ ನಾವು ಜಾಗತಿಕ ಇತಿಹಾಸದಲ್ಲಿದ್ದ ಕೃಷಿಯ ಅವಧಿಯನ್ನು ಆಧುನಿಕ ಬದಲಾವಣೆಯ ಹಿನ್ನೆಲೆ ಎಂದು ಮಾತ್ರ ನೋಡಿದರಾಗದು. ಮೊದಲನೆಯದಾಗಿ, ನಾವು ಕೃಷಿಯ ಚೌಕಟ್ಟಿನೊಳಗೆಯೇ ಹಲವು ಮಹತ್ವದ ಬದಲಾವಣೆಗಳು ಮತ್ತು ಕುತೂಹಲಕಾರಿ ಮಾರ್ಪಾಟುಗಳು ಆಗಿದ್ದನ್ನು ನೋಡಿದ್ದೇವೆ. ಕೃಷಿ-ಆಧಾರಿತ ಜೀವನಪದ್ಧತಿಯೇ ಒಂದು ಮೊದಲ ಬೃಹತ್ ಬದಲಾವಣೆ. ಈ ಆರ್ಥಿಕ ವ್ಯವಸ್ಥೆಯಲ್ಲಿ ಜನನ ಪ್ರಮಾಣ ಮತ್ತು ಮಕ್ಕಳು ನಿರ್ವಹಿಸಿದ ಪಾತ್ರಗಳು ಬಾಲ್ಯಕ್ಕೆ ಒಂದು ಬಲವಾದ ಮತ್ತು ದೀರ್ಘಕಾಲೀನ ಚೌಕಟ್ಟನ್ನು ಕೊಟ್ಟವು. ಈ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದ ಹೊಸ ನಾಗರಿಕತೆಗಳು ಮತ್ತು ಪ್ರಮುಖ ಧರ್ಮಗಳು ಗುರುತರವಾದ ಹೊಂದಾಣಿಕೆಗಳನ್ನು ಪರಿಚಯಿಸಿದವು. ನಿರ್ದಿಷ್ಟ ಸಂಸ್ಕೃತಿಗಳು ಮತ್ತು ಧರ್ಮಗಳು ತಮ್ಮದೇ ಆದ ಕೊಡುಗೆಯನ್ನು ನೀಡುವ ಮೂಲಕ ವಿವಿಧ ಮಾದರಿಗಳಿಗೆ ಕಾರಣವಾದವು. ಉದಾಹರಣೆಗೆ, ಯುವಕರ ಶ್ರಮವನ್ನು ಕುಟುಂಬದ ಅಗತ್ಯಗಳಿಗೆ

ಬಳಸಬೇಕಾದ ಸಾಮಾನ್ಯ ಅಗತ್ಯ ಅಥವಾ ಲಭ್ಯವಿರುವ ಸಂಪನ್ಮೂಲಕ್ಕೆ ತಕ್ಕಂತೆ ಜನನ ಪ್ರಮಾಣವನ್ನು ಹೊಂದಿಸಿಕೊಳ್ಳುವ ಪದ್ಧತಿ. ಜಾಗತಿಕ ಇತಿಹಾಸದ ಮೈಲುಗಲ್ಲುಗಳನ್ನು ಗುರುತಿಸುವ ಹಲವು ಮಾನದಂಡಗಳು ಕೃಷಿ-ಆಧಾರಿತ ಆರ್ಥಿಕತೆಯ ಸ್ವರೂಪವನ್ನು ಅಂಗೀಕರಿಸುತ್ತಲೇ ಬಾಲ್ಯಜೀವನದ ಮೇಲೆ ಪರಿಣಾಮ ಬೀರಿದವು. ಜಾಗತಿಕ ಇತಿಹಾಸದಲ್ಲಿ ಸಾಮಾನ್ಯವಾಗಿ ಕಂಡುಬರುವ ಅಂಶಗಳು ಬಾಲ್ಯದ ಇತಿಹಾಸದಲ್ಲೂ ಕಂಡುಬರುತ್ತವೆ: ಸಂಘಟಿತ ನಾಗರಿಕತೆಗಳು ಅಥವಾ ಜಾಗತಿಕ ಧರ್ಮಗಳ ಹರಡುವಿಕೆಯಂತಹ ಪರಸ್ಪರ ವಿರುದ್ಧ ಶಕ್ತಿಗಳಿಗೆ ಪ್ರತಿಸ್ಪಂದಿಸುವ ಸಂದರ್ಭದಲ್ಲಿ ಉಂಟಾಗುವ ಹೊಂದಾಣಿಕೆಗಳು ಮತ್ತು ಪ್ರಾದೇಶಿಕ ಸಮಾಜಗಳ ನಿರ್ದಿಷ್ಟ ಅನುಭವ ಮತ್ತು ಪ್ರಚೋದನೆಗಳಿಗೆ ಪ್ರತಿಸ್ಪಂದಿಸುವಲ್ಲಿ ಕಾಣುವ ವ್ಯತ್ಯಾಸಗಳು – ಇವೇ ಜಾಗತಿಕ ಮತ್ತು ಸ್ಥಳೀಯ ಎಂಬ ಸಾಮಾನ್ಯ ಸಂಯೋಜನೆಯ ಅಂಶಗಳು.

ಕೃಷಿಯಿಂದ ಆಧುನಿಕತೆಯೆಡೆಗೆ ಮುಂದಾಲೋಚನೆಯಿಲ್ಲದೆ ಧಾವಿಸದೆ ಇರಲು ಇನ್ನೂ ಕೆಲವು ಕಾರಣಗಳು ಇವೆ. ಮಾನವ ಸಹಜವಾಗಿರುವ ಬಾಲ್ಯದ ಗುಣಗಳು ಆಧುನಿಕತೆಯ ಚೌಕಟ್ಟಿನಲ್ಲಿದ್ದರೂ ಎಲ್ಲವೂ ಸಂಪೂರ್ಣವಾಗಿ ಬದಲಾಗುವುದಿಲ್ಲ. ಉದಾಹರಣೆಗೆ, ಲೈಂಗಿಕ ಪ್ರೌಢಿಮೆಯ ವಿಚಾರಕ್ಕೆ ಬಂದಾಗ ಅದು ಹೇಗೆ ಒಂದು ವೈಯಕ್ತಿಕ ಅನುಭವವೋ ಹಾಗೆಯೇ ಒಂದು ಸಾಮಾಜಿಕ ಸಮಸ್ಯೆ ಕೂಡ. ಬದಲಾವಣೆಯ ಬಗೆಗೆ ಅನಗತ್ಯ ಉತ್ಸಾಹದ ಕಾರಣಕ್ಕಾಗಿ ಈ ಸೂಕ್ಷ್ಮಗಳನ್ನು ಬಿಟ್ಟುಬಿಡಬಾರದು. ಬದಲಾಗದೆ ಉಳಿದು ಬಂದಿರುವ ಜೀವಶಾಸ್ತ್ರೀಯ ಮತ್ತು ಮನಃಶಾಸ್ತ್ರೀಯ ಅಂಶಗಳ ಜೊತೆಗೆ ಕೃಷಿ-ಶತಮಾನಗಳ ಇನ್ನೂ ಹಲವು ಪರಂಪರೆಗಳು ಆಧುನಿಕ ಬಾಲ್ಯದಲ್ಲಿ ಕೂಡ ತಮ್ಮ ಪ್ರಭಾವವನ್ನು ಬೀರುತ್ತಿವೆ. ತುಂಬ ಸರಳವಾದ ಉದಾಹರಣೆಯನ್ನು ತೆಗುದುಕೊಳ್ಳುವುದಾದರೆ, ಬೇಸಿಗೆ ಸಮಯದಲ್ಲಿ ನಮ್ಮ ಶಾಲೆಗಳಿಗೆ ರಜೆ ಇರುತ್ತದೆ. ಈ ಪದ್ಧತಿ ಪ್ರಾರಂಭವಾಗಿದ್ದು ಮಕ್ಕಳಿಗೆ ಶಾಲಾಭ್ಯಾಸ ಪ್ರಾರಂಭವಾದ ಆರಂಭದ ಕಾಲದಲ್ಲಿ. ಮಕ್ಕಳು ಶಾಲೆಗೆ ಹೋಗಬೇಕು, ಆದರೆ ಕೃಷಿ ದುಡಿಮೆಗೆ ಆಳುಗಳ ಆವಶ್ಯಕತೆ ಇರುವ ಬೇಸಿಗೆಯಲ್ಲಿ ಅವರು ದುಡಿಯಲು ಲಭ್ಯವಾಗುವಂತೆ ಮಾಡಿದ ವ್ಯವಸ್ಥೆ ಈಗ ಕೂಡ ಹಾಗೆಯೇ ಮುಂದುವರಿಯುತ್ತಿದೆ. ಬೇಸಿಗೆ ಕಾಲದ ರಜೆಯ ಪ್ರಸ್ತುತತೆಯನ್ನು ನಾವೀಗ ಪುನರಾವಲೋಕಿಸಲು ಆರಂಭಿಸಿದ್ದೇವೆ; ಆದರೆ ಇದು ನಮ್ಮ ಕೃಷಿ ಇತಿಹಾಸದ ಬಳುವಳಿ. ಪಿತೃಪ್ರಧಾನ ಕೃಷಿ ಸಮಾಜಗಳ ಬಳುವಳಿಯಾಗಿ ಕೆಲವೆಡೆ, ಅದರಲ್ಲೂ ಮುಖ್ಯವಾಗಿ ಬಹುಶಃ ಚೀನಾದಂತಹ, ಆಧುನಿಕತೆಗೆ ಈಗಷ್ಟೇ ತೆರೆದುಕೊಳ್ಳುತ್ತಿರುವ ಸಮಾಜಗಳಲ್ಲಿ ಇನ್ನೂ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳು ಮೇಲು ಎಂಬ ಧೋರಣೆ ಚಾಲ್ತಿಯಲ್ಲಿದೆ. ಕೃಷಿ-ಆಧಾರಿತ ಸಮಾಜಗಳ ಚೊಕ್ಕಮುದ್ರೆಯಂತಿರುವ ವಿಧೇಯತೆಯ ಸಮರ್ಥನೆ ಮತ್ತು ಅದರ ಜೊತೆಗಿನ ಶಿಸ್ತಿನ ಕ್ರಮಗಳು ಹಲವು ಆಧುನಿಕ ಸಮಾಜಗಳಲ್ಲಿ ಮರುಪರಿಶೀಲನೆಗೆ ಒಳಗಾಗಿವೆ ನಿಜ, ಆದರೆ ಸಂಪೂರ್ಣವಾಗಿ ಮರೆಯಾಗಿಲ್ಲ.

ಹಾಗೆಯೇ ಕೃಷಿಕ ಬಾಲ್ಯಜೀವನದ ನಿರ್ದಿಷ್ಟ ನಮೂನೆಗಳು ಈಗಲೂ ಚಾಲ್ತಿಯಲ್ಲಿದ್ದು, ಅವುಗಳ ಪ್ರಭಾವವನ್ನು ಇನ್ನೂ ಕೆಲವು ಪ್ರದೇಶಗಳಲ್ಲಿ ಕಾಣಬಹುದು. ಮುಂದಿನ ಪ್ರಬಂಧದಲ್ಲಿ ದಕ್ಷಿಣ ಮತ್ತು ಆಗ್ನೇಯ ಏಷ್ಯದಲ್ಲಿ

ಮಕ್ಕಳನ್ನು ದುಡಿಮೆಯಲ್ಲಿ ತೊಡಗಿಸಿಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಅಸಾಮಾನ್ಯ ಮುಂದುವರಿಕೆಯನ್ನು ಗಮನಿಸೋಣ: ಸಮಕಾಲೀನ ಜಾಗತಿಕ ಆರ್ಥಿಕತೆಯ ಸಂದರ್ಭದಲ್ಲಿ ಪ್ರಾದೇಶಿಕ ಆರ್ಥಿಕ ಪರಿಸ್ಥಿತಿಯು ಇದಕ್ಕೆ ಮೂಲಭೂತ ಕಾರಣವಾಗಿದೆ. ಆದರೆ ಈ ದೇಶಗಳಲ್ಲಿ ಮಧ್ಯ ಪ್ರಾಚ್ಯ ಅಥವಾ ಪೂರ್ವ ಏಷ್ಯಾ ದೇಶಗಳಲ್ಲಿ ನಾವು ಕಾಣುವುದಕ್ಕಿಂತ ಹೆಚ್ಚಿನ ಮಟ್ಟಿಗೆ ಮಕ್ಕಳನ್ನು ದುಡಿಮೆಗೆ ಹಚ್ಚಲು ಕಾರಣವಾಗುವಂತಹ ಕೃಷಿ-ಶತಮಾನಗಳ ಸಾಂಸ್ಕೃತಿಕ ಮತ್ತು ಕೌಟುಂಬಿಕ ಬಳುವಳಿ ಏನಾದರೂ ಇದೆಯೇ? ಪ್ರಾಟೆಸ್ಟೆಂಟ್ ಸುಧಾರಣಾವಾದಿಗಳಿಂದ ಹಿಡಿದು ಸಮಕಾಲೀನ ಮತಪ್ರಚಾರಕ ಕ್ರೈಸ್ತ ಧರ್ಮೀಯರ ತನಕ ಎಲ್ಲರೂ ಆದಿಮಪಾತಕದ ಪರಿಕಲ್ಪನೆಯನ್ನು ಬಲವಾಗಿ ನಂಬುವುದನ್ನು ಮತ್ತು ದೈಹಿಕ ದಂಡನೆ ಮತ್ತು ಭಯದ ಮೇಲೆ ಕಟ್ಟಿದ ಈ ನಂಬಿಕೆಯು ಈ ಸಮಾಜಗಳಲ್ಲಿ ಮಕ್ಕಳನ್ನು ನೋಡುವ ರೀತಿಯನ್ನು ನಿರ್ಧರಿಸುತ್ತದೆ ಹಾಗೂ ಎಲ್ಲ ಕಡೆ ಸಮಾನವಾಗಿ ಅಲ್ಲದಿದ್ದರೂ, ವಿಶಾಲನೆಲೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವುದನ್ನು ಕುರಿತಂತೆ ಹುಟ್ಟಿಕೊಂಡ ಈ ಮನೋಧರ್ಮದ ಪ್ರಮುಖ ಮುಂದುವರಿಕೆಗಳನ್ನು ಈಗಲೂ ಅಮೆರಿಕನ್ ಇತಿಹಾಸಕಾರರು ಗುರುತಿಸುತ್ತಾರೆ. ಮುಖ್ಯವಾಗಿ ಫಿಲಿಪ್ ಗ್ರೆವೆನ್ ಅವರು, ಈಗ ಇರುವ ಮತಪ್ರಚಾರಕರಲ್ಲಿ ಸಂಖ್ಯೆ ಕ್ಷೀಣಿಸಿದ್ದರೂ, ಅವರ ಮೇಲೆ ಹದಿನೇಳನೆಯ ಶತಮಾನದ ಪ್ರಭಾವಗಳು ಇರುವುದನ್ನು ಗುರುತಿಸುತ್ತಾರೆ. ಕಠಿಣ ದೈಹಿಕ ದಂಡನೆಯಲ್ಲಿ ಇರುವ ಅಚಲ ನಂಬಿಕೆ ಮತ್ತು ತಂದೆತಾಯಿಗಳು ಮತ್ತು ಮಕ್ಕಳ ನಡುವಿನ ಸಂಬಂಧಗಳಲ್ಲಿ ಕೋಪದ ಪಾತ್ರ - ಈ ನಿಟ್ಟಿನಲ್ಲಿ ನಮಗೆ ಎದ್ದು ಕಾಣುತ್ತದೆ. ಈ ದೃಷ್ಟಿಕೋನದಲ್ಲಿ ಏನಾದರೂ ಬದಲಾವಣೆ ಕಂಡುಬಂದಿದ್ದರೆ ಅದಕ್ಕೆ ಕಾರಣ ಸಮಕಾಲೀನ ಬೋಧನೆ ಮತ್ತು ಕಾನೂನು ಕಟ್ಟಳೆಗಳು ಅಷ್ಟೆ.[47] ನಗರವಾಸಿ ಆಫ್ರೀಕನ್ನರು ಕೂಡ ತಮ್ಮ ಪೂರ್ವಜರು ಹೊಲಗದ್ದೆಗಳಲ್ಲಿ ಕೆಲಸ ಮಾಡುವಾಗ ಮಕ್ಕಳನ್ನು ಎತ್ತಿಕೊಂಡು ಕೆಲಸ ಮಾಡುತ್ತಿದ್ದಂತೆ ಈಗಲೂ ಮಕ್ಕಳನ್ನು ಎತ್ತಿಕೊಂಡು ಓಡಾಡುವುದನ್ನು ಇಷ್ಟಪಡುತ್ತಾರೆ. ಈ ಮಾದರಿ ನಮಗೆ ಇತರ ಆಧುನಿಕ ಸಮಾಜಗಳ ಬಾಲ್ಯದಲ್ಲಿ ಸಾಮಾನ್ಯವಾಗಿ ಕಾಣಸಿಗುವ ತಾಯಿ ಮಕ್ಕಳು ಪರಸ್ಪರ ದೂರವಾಗಿರುವುದಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿರುವಂತಹುದು. ನಾವೀಗಲೇ ಚೀನಾದಲ್ಲಿ, ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಯಾವ ರೀತಿಯಾಗಿ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ ಎಂಬುದನ್ನು ನೋಡಿದೆವು. ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಲ್ಲಿ ಕಂಡುಬರುವ ಮಕ್ಕಳ ಆತ್ಮವನ್ನು ಕುರಿತ ಕಾಳಜಿಯು ಗರ್ಭಪಾತವನ್ನು ವಿರೋಧಿಸುವಲ್ಲಿ ಕಾಣಸಿಗುತ್ತದೆ. ಬಾಲ್ಯವನ್ನು ಕುರಿತಂತೆ ಆಧುನಿಕ ಜಗತ್ತಿನ ಯೋಚನೆಗಳು ಕೂಡ, ಕೃಷಿ-ಶತಮಾನಗಳಲ್ಲಿ ರೂಢಿಗೆ ಬಂದಂತಹ ನಂಬಿಕೆ ಮತ್ತು ಪದ್ಧತಿಗಳ ಆಧಾರದ ಮೇಲೆ ನಿಂತಿರುವುದು ಆಶ್ಚರ್ಯವೆನಿಸುವುದಿಲ್ಲ. ಈ ನಂಬಿಕೆಗಳು ಮತ್ತು ಪದ್ಧತಿಗಳು ಆಧುನಿಕ ಅನುಭವದ ವಿವಿಧ ಅವತಾರಗಳನ್ನು ಗುರುತಿಸುತ್ತವೆ. ಈ ಅಂಶ ಕೂಡ ಹೆಚ್ಚಿನ ಸಂಶೋಧನೆ ಮತ್ತು ಪರ್ಯಾಲೋಚನೆಗೆ ವಿಪುಲ ಅವಕಾಶವನ್ನು ಒದಗಿಸುತ್ತದೆ.

[47] *Philip Greven, Spare the Child: The Religious Roots of Punishment and the Psychological Impact of Physical Abuse (New York: Vintage Books, 1992).*

ಬಾಲ್ಯದ ಕೃಷಿ-ಆಧಾರಿತ ಮಾದರಿಗಳು ಪ್ರಬಲವೂ ಪರಿಣಾಮಕಾರಿಯೂ ಆಗಿದ್ದವು. ಇವುಗಳು ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಸಮಾಜಗಳಿಂದ ಬಳುವಳಿಯಾಗಿ ಪಡೆದ ಪದ್ಧತಿಗಳನ್ನು ಬದಲಾಯಿಸಿ, ಅದರ ಬದಲಿಗೆ ಸ್ಥಿರವಾದ ಪರಂಪರೆಗಳನ್ನು ಬೆಳೆಸಿದ್ದವು. ತಮ್ಮ ಕೃಷಿ ಹಿನ್ನೆಲೆಯಿಂದ ಸಾಕಷ್ಟು ಮಟ್ಟಿಗೆ ಹೊರಗೆ ಬಂದಿರುವ ಅಮೆರಿಕ ಸಂಯುಕ್ತ ಸಂಸ್ಥಾನದಂತಹ ಸಮಾಜಗಳು ಕೂಡ, ಕೃಷಿ ಪರಂಪರೆ ನಶಿಸಿ ಹೋಗುತ್ತಿರುವುದನ್ನು ಕುರಿತು ಕಳವಳ ವ್ಯಕ್ತಪಡಿಸುತ್ತವೆ. ಆಧುನಿಕ ಅಮೇರಿಕನ್ನರಾದ ನಮಗೆ ಮಕ್ಕಳನ್ನು ದುಡಿಮೆಗೆ ಹಚ್ಚಬಾರದು ಎಂಬುದು ತಿಳಿದಿದೆ: ಸಾಕಷ್ಟು ಮಟ್ಟಿಗೆ ಈ ಪ್ರಮುಖ ಬದಲಾವಣೆಯನ್ನು ನಾವು ಒಪ್ಪಿಕೊಂಡಿದ್ದೇವೆ ಕೂಡ. ಆದರೂ ಹಲವಾರು ಅಮೆರಿಕನ್ನರು ಆಧುನಿಕ ಆರ್ಥಿಕತೆ ಮತ್ತು ಕೌಟುಂಬಿಕ ನೆರವಿಗಾಗಿ ಮಕ್ಕಳಿಗೆ ಈಗ ಇರುವುದಕ್ಕಿಂತ ಸ್ವಲ್ಪ ಹೆಚ್ಚಿನ ಕೆಲಸ ಮಾಡಲು ಅವಕಾಶ ಇರಬಾರದೇ ಎಂದು ಯೋಚಿಸುತ್ತಾರೆ. ನಾವು ಹೆಚ್ಚಾಗಿ ಈ ವಿಷಯವನ್ನು ಕುರಿತು ತಲೆಕೆಡಿಸಿಕೊಳ್ಳುವುದಿಲ್ಲ. ಶನಿವಾರ ಬೆಳಿಗ್ಗೆ ತಂದೆತಾಯಿಗಳಾದ ನಾವು ಮನೆ ಸ್ವಚ್ಛಗೊಳಿಸುತ್ತಿರುವಾಗ ಮಕ್ಕಳು ಇನ್ನೂ ಸ್ವಲ್ಪ ನಿದ್ದೆ ಮಾಡಲಿ ಎಂದು ಎಚ್ಚರದಿಂದ ಕೆಲಸಮಾಡುತ್ತೇವೆ. ಆದರೆ ಈ ಪದ್ಧತಿ ಸರಿಯೇ ಎಂಬ ಬಗೆಗೆ ನಮಗೆ ಇನ್ನೂ ಖಚಿತತೆ ಇಲ್ಲ. ಕೆಲವೊಮ್ಮೆ ನಾವು ಕೃಷಿಗೆ ಸಂಬಂಧಪಟ್ಟ ಜವಾಬ್ದಾರಿಗಳು ಮರೆಯಾಗಿರುವುದನ್ನು, ಅದರಲ್ಲಿಯೂ ಮುಖ್ಯವಾಗಿ ಚರ್ಚೆಗೆ ಬರದೇ ಇರುವ ವಿಧೇಯತೆಯಂತಹ ಗುಣಗಳು ಮರೆಯಾಗಿರುವುದನ್ನು ಕುರಿತು ಒಳಗೊಳಗೇ ಮರುಗುತ್ತೇವೆ. ಮಕ್ಕಳ ವಿಚಾರಕ್ಕೆ ಬಂದರೆ, ಅವರಿಗೆ ಬಾಲ್ಯ ಎಂಬ ಸಾಮಾಜಿಕ ಇತಿಹಾಸದ ವಿಷಯವನ್ನು ಕುರಿತು ಯಾವುದೇ ಅರಿವು ಇಲ್ಲದಿದ್ದರೂ, ಅವರು ಪ್ರಸ್ತುತ ಸಮಾಜದಲ್ಲಿ, ಕೃಷಿ ಇತಿಹಾಸದಲ್ಲಿ ಇದ್ದುದಕ್ಕಿಂತಲೂ ಹೆಚ್ಚಾಗಿ ತಮ್ಮ ಮತ್ತು ಹಿರಿಯರ ನಡುವಿನ ಅಂತರವನ್ನು ಅರ್ಥಮಾಡಿಕೊಳ್ಳುವಲ್ಲಿ ಗೊಂದಲಕ್ಕೊಳಗಾಗುತ್ತಾರೆ. ಇಲ್ಲಿ ಕೂಡ, ಯಾವುದೇ ಉಪಯೋಗಕ್ಕೆ ಬರದಿದ್ದರೂ, ಹಲವು ಶತಮಾನಗಳಿಂದ ಆಳವಾಗಿ ಬೇರುಬಿಟ್ಟ ಬಾಲ್ಯದ ಬಳುವಳಿಗಳ ಅಸ್ಪಷ್ಟ ಅಚ್ಚು ನಮಗೆ ಈಗಲೂ ಕಾಣಸಿಗುತ್ತದೆ.

# ಭಾಷಣ 2

## ಆಧುನಿಕೀಕರಣ ಮತ್ತು ಜಾಗತೀಕರಣದ ಸಂದರ್ಭದಲ್ಲಿ ಬಾಲ್ಯ

ಆಧುನಿಕ ಬಾಲ್ಯ ಮತ್ತು ಯೌವನವನ್ನು ಕುರಿತಂತೆ ಕೆಲವು ಆರಂಭಿಕ ಚಿತ್ರಣಗಳು. ಮಕ್ಕಳನ್ನು ದುಡಿಮೆಗೆ ಹಚ್ಚುವುದು ಎಷ್ಟು ಸರಿ, ಮತ್ತು ಆ ದುಡಿಮೆಯನ್ನು ನಿರ್ಧರಿಸುವ ಹಕ್ಕು ಇರುವುದು ಸಮಾಜಕ್ಕೋ ಅಥವಾ ಕುಟುಂಬಕ್ಕೋ ಎಂಬುದನ್ನು ಕುರಿತಂತೆ ಪ್ರತಿಯೊಂದು ಆಧುನಿಕ ಸಮಾಜ ಮತ್ತು ಒಟ್ಟಾರೆಯಾಗಿ ಜಗತ್ತಿನಾದ್ಯಂತ ಸಾಕಷ್ಟು ಚರ್ಚೆ ನಡೆದಿದೆ. ಸಂಪ್ರದಾಯ ಮತ್ತು ದುಡಿಯಲೇ ಬೇಕಾದ ಅನಿವಾರ್ಯ ಸಂದರ್ಭಗಳು ಮಕ್ಕಳ ದುಡಿಮೆಯ ಪರವಾಗಿದ್ದರೆ, ಆಧುನಿಕತೆಯು ವಿದ್ಯಾಭ್ಯಾಸದ ಅಗತ್ಯವನ್ನು ಮುಂದುಮಾಡಿ, ಮಕ್ಕಳ ಮುಗ್ಧತೆ ಮತ್ತು ದುರ್ಬಲತೆಯನ್ನು ಮಕ್ಕಳು ಕೆಲಸಮಾಡುವುದರ ವಿರುದ್ಧ ಪ್ರಮುಖ ಅಂಶಗಳನ್ನಾಗಿ ಬಳಸಿತು. ಮಕ್ಕಳನ್ನು ದುಡಿಮೆಗೆ ಹಚ್ಚುವುದು ಅಪಾಯಕಾರಿ ಮತ್ತು ಇದರಿಂದಾಗಿ ವ್ಯಕ್ತಿ ಮತ್ತು ಸಮಾಜ ಭವಿಷ್ಯತ್ತಿನಲ್ಲಿ ಹೆಚ್ಚಿನ ಬೆಲೆ ತೆರಬೇಕಾದ ಸಂದರ್ಭ ಉಂಟಾಗುವುದು ಎಂಬ ವಾದವನ್ನು ಆಧುನಿಕತಾವಾದವು ಮುಂದಿಟ್ಟಿತು. ಈ ಹೊಸ ಆವಿಷ್ಕಾರದ ಕಲ್ಪನೆಯೇ ಎಷ್ಟೊಂದು ಸವಾಲಿನದ್ದಾಗಿತ್ತು ಎಂದು ಅದನ್ನು ಕುರಿತಂತೆ ನಡೆದ ಚರ್ಚೆಯಲ್ಲಿ ನಮಗೆ ಗೊತ್ತಾಗುತ್ತದೆ. ಬಾಲಕಾರ್ಮಿಕ ಪದ್ಧತಿಗೆ ಮಿತಿಯೊಡ್ಡುವ ಮೊದಲ ಕಾನೂನು ಫ್ರಾನ್ಸಿನಲ್ಲಿ 1841ರಲ್ಲಿ ಜಾರಿಗೆ ಬರುವ ಮೊದಲು, 1830ರ ದಶಕದಲ್ಲಿ ಈ ಕುರಿತಂತೆ ಸಾಕಷ್ಟು ಚರ್ಚೆ ನಡೆದಿತ್ತು; ಕಾರ್ಖಾನೆಗಳ ಮಾಲೀಕರು ಹನ್ನೆರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಕೆಲಸದ ಅವಧಿಯನ್ನು ಎಂಟು ಗಂಟೆಗೆ ಇಳಿಸುವ ಯೋಚನೆಯ ವಿರುದ್ಧ ವಾದಮಾಡಿದರು, ಏಕೆಂದರೆ, ಇದು ವಯಸ್ಕರ ಕೆಲಸದ ಅವಧಿಗೆ ಸರಿಹೊಂದುತ್ತಿರಲಿಲ್ಲ. ಯಾರಿಗೂ ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು ಎಂದು ವಾದಿಸುವಷ್ಟು ಧೈರ್ಯ ಇರಲಿಲ್ಲ. ಹಾಗಾಗಿ ಮಕ್ಕಳ ಕೆಲಸದ ಅವಧಿಯನ್ನು ವಯಸ್ಕರ ಕೆಲಸದ ಅವಧಿಯ ಜೊತೆಗೆ ಸರಿಹೊಂದಿಸಬೇಕು ಎನ್ನುವುದಷ್ಟೆ ಗಂಭೀರವಾದ ಚರ್ಚೆಯ ವಿಷಯವಾಗಿತ್ತು. ಜೆ.ಜೆ ಬೋಕಾರ್ಟ್ ಎಂಬ ಸುಧಾರಕ, ಮಕ್ಕಳು ಏಳರಿಂದ ಎಂಟು ಗಂಟೆ ಅವಧಿಗೆ ಎರಡು ಪಾಳಿಯಲ್ಲಿ ಕೆಲಸ ಮಾಡುವಂತೆ ಮಾಡಬಹುದು, ಇದರಿಂದ ಒಂದು ನಿಜವಾದ ಬದಲಾವಣೆಯು ಆಗುತ್ತದೆ ಮತ್ತು ಮಕ್ಕಳಿಗೆ ಶಿಕ್ಷಣದ ಅವಕಾಶವೂ ಕೊಂಚ ಸಿಗುತ್ತದೆ, ವಯಸ್ಕರ ಕೆಲಸದ ಅವಧಿಯಲ್ಲಿ ವ್ಯತ್ಯಯವೂ ಆಗುವುದಿಲ್ಲ ಎಂಬ ಆಲೋಚನೆಯನ್ನು ಮುಂದಿಟ್ಟ. ಕಾರ್ಖಾನೆ ಮಾಲೀಕರು ಈ ಆಲೋಚನೆಯನ್ನು ಅಪ್ರತಿಮವಾದದ್ದು ಎಂದು ಕೊಂಡಾಡಿದರು: ಮಕ್ಕಳು ವಯಸ್ಕರಿಗಿಂತ ಭಿನ್ನವಾಗಿ ಕೆಲಸದಲ್ಲಿ ತೊಡಗಿಸಿಕೊಳ್ಳುವ ಯೋಚನೆಯೇ ಅಪರೂಪದ್ದು! ಬೋಕಾರ್ಟ್ ಅಸಾಮಾನ್ಯ ಬುದ್ಧಿಶಾಲಿಯೆ ಸರಿ ಎಂದು ಜನ ಕೊಂಡಾಡಿದರು. ಹಾಗಾಗಿ,

ತಾತ್ವಿಕವಾಗಿಯಾದರೂ, ಅಲ್ಲಿಯ ಕೆಲವು ಪುರೋಗಾಮಿಗಳು ಸುಧಾರಣೆಯ ವಿಚಾರವನ್ನು ಒಪ್ಪಿಕೊಳ್ಳುವಂತಾಯಿತು.[48]

ಜರ್ಮನಿಯ ಕಾರ್ಖಾನೆಗಳಲ್ಲಿ 1880ರ ಸುಮಾರಿಗೆ ಕೆಲಸ ಮಾಡುತ್ತಿದ್ದ ನುರಿತ ಕಾರ್ಮಿಕರು ತಮ್ಮ ಜೊತೆಯ ನುರಿತಿಲ್ಲದ ಕಾರ್ಮಿಕರಿಗೆ ಮಕ್ಕಳನ್ನು ಮಾಡುವುದನ್ನು ನಿಲ್ಲಿಸಿವುದು ಹೇಗೆಂದು ಗೊತ್ತಿಲ್ಲ; ಹಾಗಾಗಿ ಅವರ ಆರ್ಥಿಕ ಜೀವನಮಟ್ಟ ಬಿಗಡಾಯಿಸುತ್ತಾ ಹೋಗುತ್ತದೆ ಎಂದು ಆಗಾಗ್ಗೆ ಲೇವಡಿ ಮಾಡುತ್ತಿದ್ದರು. ನುರಿತ ಕೆಲಸಗಾರರು ತಮಗೆಲ್ಲ ಗೊತ್ತಿದೆ ಎನ್ನುವಂತೆ 'ಪ್ಯಾರಿಸಿನ ಮಾಲು' ಎಂದು ಕಾಂಡೋಮ್‌ಗಳ ಬಗೆಗೆ ಮಾತನಾಡಿಕೊಳ್ಳುತ್ತಿದ್ದರು. ಇದರಿಂದಾಗಿ ಲೈಂಗಿಕಸುಖದ ಕಲ್ಪನೆ ಮತ್ತು ಸಂತಾನೋತ್ಪತ್ತಿ ಎರಡೂ ಬೇರೆ ಬೇರೆಯಾಗತೊಡಗಿತು; ಸಾಂಪ್ರದಾಯಿಕವಾಗಿ ಲೆಕ್ಕವಿಲ್ಲದಂತೆ ಮಕ್ಕಳನ್ನು ಹುಟ್ಟಿಸುವುದು ಆ ಕಾಲಕ್ಕೆ ಅರ್ಥಹೀನವಾಗತೊಡಗಿತು. ಇದೇ ಸಮಯದಲ್ಲಿ ಮೋರಿಸ್ ಬ್ರಾಮ್ ಎಂಬ ನುರಿತಿಲ್ಲದ ಕಾರ್ಮಿಕ ತನ್ನ ಅತೃಪ್ತ ಹೆಂಡತಿ ತಮ್ಮ ಒಂದು ಕೋಣೆಯ ಆಪಾರ್ಟ್ಮೆಂಟಿನಲ್ಲಿ ಶಥಪಥ ಹಾಕುತ್ತಾ, ತಮ್ಮ ಏಳುಮಕ್ಕಳನ್ನು ನೋಡಿ, ಇವರಲ್ಲಿ ಯಾರಾದರೂ ಸತ್ತುಹೋಗಬಾರದೇ ಎಂದು ಗೊಣಗಿದ್ದನ್ನು ವರದಿಮಾಡಿದ್ದ.[49]

ಪಾಶ್ಚಾತ್ಯ ಮಾದರಿಗಳನ್ನು ಅನುಸರಿಸುತ್ತಾ ಮತ್ತು ತನ್ನದೇ ಆದ ವ್ಯಾಪಕ ಶಿಕ್ಷಣ ಪದ್ಧತಿಯ ಪರಂಪರೆಯ ಆಧಾರದ ಮೇಲೆ 1872ರಲ್ಲಿ ಜಪಾನ್ ದೇಶವು ಸಾರ್ವಜನಿಕ ಶಿಕ್ಷಣವನ್ನು ಪರಿಚಯಿಸಲು ತೊಡಗಿದ ಸಂದರ್ಭದಲ್ಲಿ, ಈ ಆವಿಷ್ಕಾರದ ಜೊತೆಗೆ ಮಕ್ಕಳ ಕುರಿತ ಹೊಸ ವಿಚಾರಗಳು ಮುನ್ನೆಲೆಗೆ ಬರತೊಡಗಿದವು. ಇವುಗಳಲ್ಲಿ ಹಲವು ವಿಚಾರಗಳನ್ನು ಖಂಡಿತವಾಗಿಯೂ ಪಾಶ್ಚಾತ್ಯ ಸಂಸ್ಕೃತಿಯಿಂದ ಅಮದುಮಾಡಿಕೊಳ್ಳಲಾಗಿತ್ತು. ಇದರ ಬೆನ್ನಿಗೇ ಜಪಾನಿನ ಚಿಂತಕರು ಮಕ್ಕಳನ್ನು ಸರಿಯಾಗಿ ಬೆಳೆಸುವ ವಿಚಾರವಾಗಿ ತಂದೆತಾಯಿಗಳಿಗೆ ಸಲಹೆ ಮತ್ತು ಮಾರ್ಗದರ್ಶನದ ಆವಶ್ಯಕತೆ ಇದೆ, ಮೂಲ ಪ್ರವೃತ್ತಿ ಮತ್ತು ಸಂಪ್ರದಾಯವಷ್ಟೇ ಸಾಲದು ಎಂದು ವಾದಿಸತೊಡಗಿದರು. ಮಕ್ಕಳು ನವಿರಾದ ಹೂವಿನಂತೆ, ಅವರಿಗೆ ವಿಶೇಷ ರಕ್ಷಣೆಯ ಆವಶ್ಯಕತೆ ಇದೆ; ಅವರಿಗಾಗಿ ಚಟುವಟಿಕೆಗಳನ್ನು ಆಯೋಜಿಸಲು ವಿಶೇಷ ಆಟದ ಮೈದಾನಗಳನ್ನು ಕಟ್ಟಿಸಬೇಕು, ಇಲ್ಲದಿದ್ದರೆ ಅವರಿಗೆ ಬೆಳವಣಿಗೆಯ ಗುರಿಗಳನ್ನು ಸಾಧಿಸಲು ಸಾಧ್ಯವಾಗುವುದಿಲ್ಲ ಎಂಬ ಅಂಶವನ್ನು ಮುಂದಿಟ್ಟ ಅವರು, ಬಾಲ್ಯದ ವಿಶೇಷ ಆವಶ್ಯಕತೆಗಳನ್ನು, ದುರ್ಬಲತೆಗಳನ್ನು ಮತ್ತು ಹಾದಿತಪ್ಪಿದ ಬಾಲ್ಯವನ್ನು ಸರಿದಾರಿಗೆ ತರಲು ಮಕ್ಕಳಿಗಾಗಿ ಕಾನೂನುಗಳು ಮತ್ತು ವಿಶೇಷ ನ್ಯಾಯಾಲಯಗಳ ಆವಶ್ಯಕತೆಯನ್ನು

---

[48] *Colin Heywood, Childhood in Nineteenth-Century France: Work, Health, and Education among the "Classes Populaires" (Cambridge: Cambridge University Press, 1988); J. J. Bourcart, De travail des jeunes ouvriers (Paris, 1840).*

[49] *Moritz Bromme, Lebensgeschichte eines modernen Fabrikarbieters (Leipzig, 1905). See also Peter N. Stearns, Lives of Labor: Work in a Maturing Industrial Society (London: Holmes & Meier, 1975).*

ಪ್ರತಿಪಾದಿಸಿದರು. ಈ ಒಂದು ಪ್ರಮುಖ ಬದಲಾವಣೆಯು ಬಾಲ್ಯಾವಸ್ಥೆಯ ಪರಿಕಲ್ಪನೆಯನ್ನು ಪುನಃ ವಿಶಾಲವಾಗಿ ರೂಪಿಸತೊಡಗಿತು.[50]

ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ, ಪಶ್ಚಿಮ ಯುರೋಪ್ ಮತ್ತು ಉತ್ತರ ಅಮೆರಿಕಾದ ಹಲವು ಕೈಗಾರಿಕೀಕರಣಗೊಳ್ಳುತ್ತಿದ್ದ ಸಮಾಜಗಳಲ್ಲಿ ವೈದ್ಯರುಗಳು, ಎಳೆಯ ಅದರಲ್ಲೂ ಹೆಚ್ಚಾಗಿ ಮಧ್ಯಮ ವರ್ಗದ ಮಹಿಳೆಯರಲ್ಲಿ ಸರಿಯಾಗಿ ಊಟಮಾಡದೆ ಇರುವಂತಹ ಅನೊರೆಕ್ಸಿಯಾ ನರ್ವೋಸಾ ಹೊಸ ಕಾಯಿಲೆಯೊಂದನ್ನು ಗುರುತಿಸಿದರು. ಈ ರೋಗ ಎಷ್ಟು ಹೊಸದು ಎಂಬ ಬಗೆಗೆ ಸ್ವಲ್ಪ ಚರ್ಚೆ ನಡೆದಿತ್ತು. ಹಿಂದಿನ ಸಮಾಜಗಳಲ್ಲಿ ಮಹಿಳೆಯರು ಧಾರ್ಮಿಕ ಕಾರಣಗಳಿಗಾಗಿ ಮಾಡುತ್ತಿದ್ದ ತೀವ್ರತರದ ಉಪವಾಸ ವ್ರತಗಳು ಇದೇ ರೋಗದ ಇನ್ನೊಂದು ಅವತಾರವಾಗಿರಬೇಕು. ಆದರೆ ಆಧುನಿಕ ಅನೊರೆಕ್ಸಿಯಾವು ಆಧುನಿಕ ಯುಗದ ಬಾಲಿಕೆಯರು ಅನುಭವಿಸುವ ಒತ್ತಡ ಮತ್ತು ಇತಿಮಿತಿಗಳು ಮತ್ತು ತಂದೆತಾಯಿಗಳು ಪ್ರೀತಿಯಿಂದಲೇ ಮಾಡುತ್ತಿದ್ದ ಮೇಲ್ತನಿಖೆ ಮತ್ತು ಹತೋಟಿ - ಇವುಗಳ ವಿರುದ್ಧದ ಸುಪ್ತಬಂಡಾಯದ ವಿಧಾನವಾಗಿತ್ತು ಎಂಬಂತೆ ಕಾಣಿಸುತ್ತಿತ್ತು. ದೇಹವು ತೆಳ್ಳಗಿರುವುದು ಸೌಂದರ್ಯದ ಒಂದು ಕಠಿಣ ಮಾನದಂಡವಾಗಿ ಪರಿಗಣಿಸಲು ಪ್ರಾರಂಭವಾದಾಗಿನಿಂದ ಇದು ಇನ್ನೂ ವ್ಯಾಪಕವಾಗತೊಡಗಿತು. ವಾಸ್ತವಾಗಿ ದಪ್ಪವಿಲ್ಲವಾದರೂ ತಾವು ತೀರಾ ದಪ್ಪವಾಗಿದ್ದೇವೆ ಎಂದು ಚಿಂತೆಮಾಡಲು ಪ್ರಾರಂಭಮಾಡಿದ ಹಲವು ಹೆಣ್ಣುಮಕ್ಕಳು ತಮ್ಮ ದೇಹದ ಬಗೆಗೇ ಆತ್ಮವಿಶ್ವಾಸ ಕಳೆದುಕೊಳ್ಳತೊಡಗಿದರು. ಇಪ್ಪತ್ತನೆಯ ಶತಮಾನದ ಕೊನೆಯ ಭಾಗಕ್ಕೆ ಬಂದಂತೆ ಅನೊರೆಕ್ಸಿಯಾ ಹಲವು ಸಮಾಜಗಳಲ್ಲಿ ಹರಡತೊಡಗಿತು. ಪೆಸಿಫಿಕ್ ದ್ವೀಪಗಳಲ್ಲಿ ದೂರದರ್ಶನ ಮತ್ತು ಪಾಶ್ಚಾತ್ಯ ಮಾಧ್ಯಮಗಳು ಕಾಲಿಟ್ಟ ಪರಿಣಾಮವಾಗಿ ಸ್ಥಳೀಯ ಹೆಣ್ಣು ಮಕ್ಕಳು ತಮ್ಮ ದೇಹವನ್ನು ದೂರದರ್ಶನದಲ್ಲಿ ಪರದೆಯ ಮೇಲೆ ಕಾಣುವ ಹೆಣ್ಣುಮಕ್ಕಳ ದೇಹದೊಂದಿಗೆ ಹೋಲಿಸಿಕೊಳ್ಳಲು ತೊಡಗಿದರು. ಅನೊರೆಕ್ಸಿಯಾ ಮತ್ತು ಬುಲಿಮಿಯಾ (ಹಸಿವು ರೋಗ)ದಲ್ಲಿ ತೀರ ಹೆಚ್ಚಳ ಕಂಡುಬರತೊಡಗಿತು. ಆಧುನಿಕ ಯೌವನವು ಹೇಗೆ ಹೊಸ ಅವಕಾಶಗಳನ್ನು ಒದಗಿಸತೊಡಗಿತೋ ಹಾಗೆಯೇ ಅದರ ಜೊತೆಗೆ ಹೊಸ ಮತ್ತು ಪ್ರಮುಖ ಒತ್ತಡಗಳನ್ನು ಮತ್ತು ಸಮಸ್ಯೆಗಳನ್ನು ಕೂಡ ಹೊತ್ತುತಂದಿತು.[51]

ಅಮೆರಿಕಾ ಶಾಂತಿಪಡೆಯ ಯುವ ಶಿಕ್ಷಕಿಯೊಬ್ಬರು 2000ನೇ ಇಸವಿಯಲ್ಲಿ ಪೂರ್ವ ರಷ್ಯಾದ ಹಳ್ಳಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಆ ಹಳ್ಳಿಯ ಜನರು ಅದಕ್ಕಿಂತ ಮೊದಲು ಯಾವುದೇ ಅಮೆರಿಕನ್ ವ್ಯಕ್ತಿಯನ್ನು ನೋಡಿರಲಿಲ್ಲ. ಅಲ್ಲದೆ ಅಲ್ಲಿ ಯಾವುದೇ ಕಂಪ್ಯೂಟರಾಗಲಿ, ಅಂತರ್ಜಾಲದ ಸೌಲಭ್ಯವಾಗಲಿ ಇರಲಿಲ್ಲ. ಮುಖ್ಯವಾಹಿನಿಯಿಂದ ಅತಿದೂರದಲ್ಲಿದ್ದರೂ, 'ಜಗತ್ತಿನ ಅತ್ಯಂತ ಸುಂದರ ಮಹಿಳೆ ಯಾರು,' ಎಂಬ ಪ್ರಶ್ನೆಗೆ ಆಕೆಯ ವಿದ್ಯಾರ್ಥಿಗಳು ಒಂದು ಕರಾರುವಾಕ್ಕಾದ ಕಲ್ಪನೆಯನ್ನು ಮುಂದಿಡಬಲ್ಲವರಾಗಿದ್ದರು. ಅವರ ಪ್ರಕಾರ ಬ್ರಿಟ್ನಿ ಸ್ಪಿಯರ್ಸ್

[50] *Brian Platt, "Japanese Childhood, Modern Childhood," Journal of Social History 38 (Summer 2005): forthcoming.*

[51] Joan Jacobs Brumberg, Fasting Girls: The Emergence of Anorexia Nervosa as a Modern Disease (Cambridge, MA: Harvard University Press, 1988).

ಅಂತಹ ಸುಂದರ ಹುಡುಗಿಯಾಗಿದ್ದಳು. ಅದೇ ವರ್ಷ, ಮಡಗಾಸ್ಕರಿನ ನಗರ ಪ್ರದೇಶವೊಂದರ ಕೊಳೆಗೇರಿಯಲ್ಲಿ ಹದಿಹರೆಯದವರು ಮತ್ತು ಯುವಜನರೊಂದಿಗೆ ಕೆಲಸ ಮಾಡುತ್ತಿದ್ದ ಒಬ್ಬ ಮಾನವಶಾಸ್ತ್ರಜ್ಞರು, ಅಲ್ಲಿಯ ಹುಡುಗಿಯರಿಗೆ ತಾವು ಯಾವ ರೀತಿಯ ಸೌಂದರ್ಯವರ್ಧಕಗಳನ್ನು ಬಳಸಬೇಕು ಎಂಬ ಬಗೆಗೆ ಖಚಿತವಾದ ನಿಲುವು ಇತ್ತು ಎಂಬುದನ್ನು ಕಂಡುಕೊಳ್ಳುತ್ತಾರೆ. ಅವೆಂದರೆ-ಬ್ರಿಟ್ನಿ ಸ್ಪಿಯರ್ಸ್ ತರಹ ಕಾಣುವಂತೆ ಮಾಡುವ ಸೌಂದರ್ಯವರ್ಧಕಗಳು. ಒಂದು ಜಾಗತಿಕ ಯುವ ಸಂಸ್ಕೃತಿಯು ಹಲವು ವಿಭಿನ್ನ ಸಮಾಜಗಳಲ್ಲಿ, ಅದರಲ್ಲೂ ತೀರ ಹಿಂದುಳಿದ ಸಮಾಜಗಳಲ್ಲಿ ಕೂಡ ಯುವಜನರು ಅನುಸರಿಸಬೇಕಾದ ಗುರಿಗಳನ್ನು ಮತ್ತು ಮಾನದಂಡಗಳನ್ನು ನಿರೂಪಿಸತೊಡಗಿತ್ತು. ಇದು ಬಾಲ್ಯಕಾಲದ ಮೂಲಭೂತ ಬದಲಾವಣೆಯ ಇನ್ನೊಂದು ಸೂಚನೆ.[52]

ಈ ಪ್ರಬಂಧವು, ಕಳೆದ ಎರಡು ಶತಮಾನಗಳಲ್ಲಿ ಜಾಗತಿಕವಾಗಿ, ಒಂದೇ ರೀತಿಯಲ್ಲಲ್ಲದಿದ್ದರೂ, ಬಾಲ್ಯ ಮತ್ತು ಯೌವನದ ಮೇಲೆ ಪರಿಣಾಮ ಬೀರಿದ ಎರಡು ಬದಲಾವಣೆಯ ಅಲೆಗಳನ್ನು ಚರ್ಚಿಸುತ್ತದೆ. ಎರಡನೆಯ ಅಲೆಯು ಸಂಪೂರ್ಣವಾಗಿ ಅಲ್ಲದಿದ್ದರೂ ಬಹುತೇಕವಾಗಿ ಮೊದಲನೆಯದನ್ನು ಸಮರ್ಥಿಸುತ್ತದೆ.

ಮೊದಲನೆಯ ಅಲೆಯು ಕೃಷಿ-ಆಧಾರಿತ ಸಮಾಜದಿಂದ ಕೈಗಾರಿಕಾ ಸಮಾಜದೆಡೆಗೆ ಬಾಲ್ಯಾವಸ್ಥೆಯ ಪರಿವರ್ತನೆಯನ್ನು ಒಳಕೊಂಡಿದೆ. ಹದಿನೆಂಟನೆಯ ಶತಮಾನದ ಕೊನೆಯಭಾಗದಲ್ಲಿ ಪಶ್ಚಿಮ ಯುರೋಪಿನಲ್ಲಿ ಮತ್ತು ಉತ್ತರ ಅಮೆರಿಕಾದ ಬಹುಭಾಗದಲ್ಲಿ ಈ ಪರಿವರ್ತನೆಯ ಅಲೆಯು ಪ್ರಾರಂಭವಾಯಿತು. ಆಮೇಲೆ ಅದು, ಭಾಗಶಃ, ಉದ್ದೇಶಪೂರ್ವಕ ಅನುಕರಣೆಯ ಮೂಲಕ ಜಗತ್ತಿನ ಇತರ ಭಾಗಗಳಿಗೂ ಹಬ್ಬಿತು. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಮೊದಲನೆಯ ವರ್ಗದ ಬದಲಾವಣೆಗಳು, ಅತ್ಯಂತ ಮೂಲಭೂತವಾದ ಬದಲಾವಣೆಗಳು. ಆಧುನಿಕ ಎನ್ನುವ ಪದವು ಉತ್ತಮ ಎನ್ನುವುದಕ್ಕೆ ಪರ್ಯಾಯ ಪದ ಅಲ್ಲ ಎಂಬುದನ್ನು ನಾವು ಅರ್ಥಮಾಡಿಕೊಂಡು, ಎಲ್ಲ ಸಮಾಜಗಳು ಒಂದೇ ರೀತಿಯಲ್ಲಿ ಮತ್ತು ಒಂದೇ ಗತಿಯಲ್ಲಿ ಆಧುನಿಕೀಕರಣಗೊಳ್ಳುವುದಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಈ ಬದಲಾವಣೆಗಳನ್ನು ನಾವು ಬಾಲ್ಯದ ಆಧುನಿಕೀಕರಣ ಎಂದು ಕರೆಯಬಹುದು. ಬಾಲ್ಯದ ಆಧುನಿಕೀಕರಣ ಪ್ರಕ್ರಿಯೆ ಇನ್ನೂ ಪೂರ್ತಿಗೊಂಡಿಲ್ಲ; ಇನ್ನೂ ಹಲವು ಪ್ರದೇಶಗಳು ಸಾಂಪ್ರದಾಯಿಕ ಅಥವಾ ಬೇರೆ ತೆರನಾದ ಪರ್ಯಾಯ ಮಾದರಿಗಾಗಿ ಕಾಯುತ್ತಿರಬಹುದು. ಬಾಲ್ಯವನ್ನೂ ಒಳಕೊಂಡಂತೆ ಆಧುನಿಕೀಕರಣಗೊಂಡ ಬಾಲ್ಯವನ್ನು ಒಳಕೊಂಡಿರುವ ಸಮಾಜಗಳಲ್ಲಿ ಕೂಡ ಮೂಲಭೂತವಾದ ಬದಲಾವಣೆಗಳೊಂದಿಗೆ ಹೊಂದಾಣಿಕೆಯ ಪ್ರಕ್ರಿಯೆ ಇನ್ನೂ ನಡೆಯುತ್ತಲೇ ಇದೆ. ಉದಾಹರಣೆಗೆ, ಅಮೇರಿಕದಲ್ಲಿರುವ ಪೋಷಕರು ಶಾಲಾಭ್ಯಾಸವು ಮಕ್ಕಳ ಮೇಲೆ ಹೆಚ್ಚಿನ ಹೊರೆ ಹೊರಿಸುತ್ತದೆ ಎಂದು ಆತಂಕ ವ್ಯಕ್ತಪಡಿಸುತ್ತಾರೆ. ಶಾಲಾಧಾರಿತ ಬಾಲ್ಯದ ನಿರೀಕ್ಷೆಗಳ ಕುರಿತಂತೆ ಪೋಷಕರ ಆತಂಕವನ್ನು ನಿವಾರಿಸಲು ದೇಶವು ಹಲವು ಯೋಜನೆಗಳನ್ನು, ಉದಾಹರಣೆಗೆ, ಮಕ್ಕಳಿಗೆ ಹೆಚ್ಚು

[52] Jennifer Cole, "The Jaombilo of Toamasina (Madagascar): Globalization, Agency, and the Transformation of Youthful Gender Relations," Journal of Social History 38 (Summer 2005): forthcoming. On eastern Russia, personal communication to the author.

ಅಂಕಗಳನ್ನು ಕೊಡುವುದು ಮತ್ತು ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸುವಂತಹ ಹಲವು ಕ್ರಮಗಳನ್ನು, ಕೈಗೊಂಡಿದೆ.[53]

ಎರಡನೆ ಅಲೆಯು ಸಂಪೂರ್ಣವಾಗಿ ಜಾಗತೀಕರಣದ ಪ್ರಕ್ರಿಯೆಯನ್ನು ಒಳಕೊಂಡಿದೆ. ಇದು ಹಿಂದೆಯೇ ಸೂಚನೆಗಳನ್ನು ಸ್ವಲ್ಪಮಟ್ಟಿಗೆ ತೋರ್ಪಡಿಸಿದ್ದರೂ ಕಳೆದ ಮೂರು ಅಥವಾ ನಾಲ್ಕು ದಶಕಗಳಲ್ಲಿ ತನ್ನದೇ ಆದ ಒಂದು ಸ್ವರೂಪವನ್ನು ಪಡೆದುಕೊಂಡಿದೆ. ಜಾಗತೀಕರಣದ ಪರಿಣಾಮವು ಅಂತಾರಾಷ್ಟ್ರೀಯ ಸಂಸ್ಥೆಗಳ ಪ್ರಾಯೋಜಕತ್ವದ ಮೂಲಕ ಆಧುನಿಕ ಬಾಲ್ಯವನ್ನು ಹೆಚ್ಚುಹೆಚ್ಚು ಒಪ್ಪಿಕೊಳ್ಳುವ ರೀತಿಯಲ್ಲಿ ಆಧುನಿಕೀಕರಣದ ಮೂಲಪ್ರಕ್ರಿಯೆಯನ್ನು ಮುಂದುವರಿಸುತ್ತಿದೆ. ಆದರೆ ಇನ್ನೊಂದೆಡೆ ಜಾಗತೀಕರಣವು ಮಕ್ಕಳ ಬಾಲ್ಯವನ್ನು ಹದಗೆಡಿಸುವ ರೀತಿಯಲ್ಲಿ ಆರ್ಥಿಕತೆಗಳನ್ನು ನಾಶ ಮಾಡುತ್ತಿದೆ ಮತ್ತು ಸಾಕಷ್ಟು ಪ್ರಬಲವಾಗಿ ಒಂದು ರೀತಿಯ 'ಕೊಳ್ಳುಬಾಕ ಬಾಲ್ಯ'ವನ್ನು ಪ್ರೋತ್ಸಾಹಿಸುತ್ತಿದೆ; ಇದರಿಂದಾಗಿ ಬದಲಾವಣೆಯ ಬಿರುಗಾಳಿ ಇನ್ನೂ ಪ್ರಬಲವಾಗುತ್ತಿದೆ. ಹಾಗಾಗಿ ನಾವು ಇದನ್ನು ಪ್ರತ್ಯೇಕವಾಗಿ ಚರ್ಚಿಸಬೇಕಾಗಿದೆ.

ಬಾಲ್ಯದ ಆಧುನಿಕೀಕರಣ ಹೇಗಾಯಿತು ಮತ್ತು ಭೌಗೋಳಿಕವಾಗಿ ಅದು ಹೇಗೆ ಹರಡಿತು ಎಂಬುದನ್ನು ಚರ್ಚಿಸುವ ಮೊದಲು ಈ ವಿಷಯವನ್ನು ಸರಳವಾಗಿ ನಿರೂಪಿಸುವ ಅಗತ್ಯ ಇದೆ; ಇಲ್ಲವಾದರೆ ಕಣ್ಣಿಲ್ಲದವನು ಆನೆಯನ್ನು ಕಂಡಂತೆ ಆಗಿ ಸಮಗ್ರ ಚಿತ್ರ ದೊರೆಯದೆ ಹೋದೀತು. ಬಾಲ್ಯದ ಆಧುನಿಕೀಕರಣದ ಪ್ರಕ್ರಿಯೆಯು ಪರಸ್ಪರ ಸಂಬಂಧವಿರುವ ಮತ್ತು ಹಲವು ಪರಿಣಾಮಗಳನ್ನುಳ್ಳ ಮೂರು ಮೂಲಭೂತ ಬದಲಾವಣೆಗಳನ್ನು ಒಳಕೊಂಡಿದೆ. ದುಡಿಮೆಯಿಂದ ಶಾಲೆಯಲ್ಲಿ ವಿದ್ಯಾಭ್ಯಾಸಮಾಡುವ ಅವಕಾಶವನ್ನು ಬಾಲ್ಯಕ್ಕೆ ನೀಡುವ ಪರಿವರ್ತನೆ ಅತ್ಯಂತ ಮೂಲಭೂತವಾದ ಮೊದಲ ಬದಲಾವಣೆ. ಅತಿ ಎಳೆಯ ವಯಸ್ಸಿನಿಂದಲೇ ಮಕ್ಕಳು ದುಡಿಮೆಗೆ ತೊಡಗಿ ಹದಿಹರೆಯವನ್ನು ತಲುಪುವಷ್ಟರಲ್ಲಿ ತಮ್ಮ ಮೇಲಿನ ವೆಚ್ಚದ ಭಾಗವನ್ನು ತಾವೇ ಸಂಪೂರ್ಣ ಸಂಪಾದಿಸುವುದಲ್ಲದೆ ಕೌಟುಂಬಿಕ ಆರ್ಥಿಕತೆಗೆ ತಮ್ಮ ಕೊಡುಗೆ ಕೊಡಲು ಸಮರ್ಥರಾಗಬೇಕು ಎಂಬುದು ಕೃಷಿ-ಆಧಾರಿತ ಸಮಾಜಗಳ ಮೂಲಭೂತ ನಂಬಿಕೆಯಾಗಿತ್ತು. ಆಧುನಿಕ ಸಮಾಜದಲ್ಲಿ, ಎಳೆಯ ಮಕ್ಕಳು ಶಾಲೆಗೆ ಹೋಗಬೇಕೇ ಹೊರತು ಅವರನ್ನು ದುಡಿಮೆಗೆ ಹಚ್ಚಲೇಬಾರದು ಎಂಬ ನಂಬಿಕೆ ಬಲವಾಗಿ, ಈ ನಂಬಿಕೆಯು ಮುಂದಕ್ಕೆ ಹದಿಹರೆಯಕ್ಕೂ ವಿಸ್ತರಿಸಿ, ಹದಿಹರೆಯವನ್ನು ಕೂಡ ಶಿಕ್ಷಣಕ್ಕೆ ಮೀಸಲಿಡುವ ಪದ್ಧತಿ ಪ್ರಾರಂಭವಾಯಿತು. ಇದರಿಂದಾಗಿ ತಂದೆತಾಯಿಗಳಲ್ಲಿ ಬಹುತೇಕರಿಗೆ ಮಕ್ಕಳು ಆರ್ಥಿಕ ಸಂಪತ್ತಾಗುವ ಬದಲು ಆರ್ಥಿಕ ಹೊರೆ ಎಂದೆನಿಸತೊಡಗಿದರು. ಇದರಿಂದಾಗಿ ಬಾಲ್ಯದ ಸ್ವಭಾವ

[53] *Peter N. Stearns, Anxious Parents: A History of Modern Childrearing in America (New York: New York University Press, 2003); Brian Gill and Steven Schlossman, "A Sin Against Childhood: Progressive Education and the Crusade to Abolish Homework, 1897–1941," American Journal of Education 105 (1996): 27–66.*

ಮತ್ತು ಉದ್ದೇಶವನ್ನು ಕುರಿತಂತೆ ಮತ್ತೆ ಪರ್ಯಾಲೋಚಿಸಬೇಕಾದ ಅನಿವಾರ್ಯತೆ ಹುಟ್ಟಿಕೊಂಡಿತು.[54]

ಬಾಲ್ಯದ ಪ್ರಾಥಮಿಕ ಕೆಲಸವಾಗಿದ್ದ ದುಡಿಮೆಯು ಶಾಲಾಭ್ಯಾಸವಾಗಿ ಪರಿವರ್ತನೆ ಹೊಂದಿದ್ದು ಮತ್ತು ಅದರೊಂದಿಗೆ ಬೆಳೆಯುತ್ತಿದ್ದ ನಗರೀಕರಣದ ಪ್ರಕ್ರಿಯೆಯು ಬಾಲ್ಯದ ಆಧುನಿಕೀಕರಣದಲ್ಲಿ ಎರಡನೆಯ ಪ್ರಮುಖ ಬದಲಾವಣೆಯನ್ನು ಪ್ರೋತ್ಸಾಹಿಸಿದವು: ಅದೇನೆಂದರೆ, ಕುಟುಂಬದ ಗಾತ್ರವನ್ನು ಹಿಂದೆಂದಿಗಿಂತಲೂ ಕಿರಿದಾಗಿಸುವುದು. ಕೃಷಿ ಕುಟುಂಬದಲ್ಲಿ ಸಾಮಾನ್ಯವಾಗಿ ಐದರಿಂದ ಆರು ಮಕ್ಕಳು ಇರುತ್ತಿದ್ದರು; ಇದಕ್ಕಿಂತ ಕಡಿಮೆ ಇದ್ದರೆ ದುಡಿಮೆಗೆ ಕೈಯಾಳುಗಳ ಸಂಖ್ಯೆ ಕಡಿಮೆಯಾಗುತ್ತಿತ್ತು, ಹೆಚ್ಚಾದರೆ ಕುಟುಂಬದ ಸಂಪನ್ಮೂಲದ ಮೇಲೆ ಹೆಚ್ಚಿನ ಹೊರೆ ಬೀಳುತ್ತಿತ್ತು. ಆರ್ಥಿಕ ಗಳಿಕೆಯ ಬದಲು ಮಕ್ಕಳು ಆರ್ಥಿಕ ಹೊರೆಯಾಗತೊಡಗಿದಂತೆ ಈ ಪ್ರಮಾಣದಲ್ಲಿ ಮಕ್ಕಳ ಸಂಖ್ಯೆ ಸಂಪೂರ್ಣವಾಗಿ ಅಸಮರ್ಪಕವಾಗತೊಡಗಿತು ಮತ್ತು ನಗರದ ಗುಣಲಕ್ಷಣಗಳು ಹೆಚ್ಚುಮಕ್ಕಳನ್ನು ಸಲಹುವುದನ್ನು ಸವಾಲಾಗಿಸಿದವು. ಮಕ್ಕಳ ಜನನ ಪ್ರಮಾಣ ಕಡಿಮೆಯಾಗಬೇಕು ಎಂಬ ತಿಳಿವು ಮತ್ತು ಅದನ್ನು ಸಾಧಿಸುವುದು ಎರಡೂ ಒಂದೇ ಆಗಿರಲಿಲ್ಲ. ಹಲವು ಸಮಾಜಗಳು ಜನನ ಪ್ರಮಾಣದ ಯಾವ ಮಟ್ಟದ ಮಿತಿ ನೈತಿಕವಾದುದು ಮತ್ತು ಸಾಧ್ಯವಾಗುವಂತಹುದು, ಗರ್ಭಪಾತ ಸೂಕ್ತವೇ, ಇತ್ಯಾದಿ ಅಂಶಗಳ ಬಗೆಗೆ ಸಾಕಷ್ಟು ಕಷ್ಟವಾಗಿದ್ದ ಚರ್ಚೆಗಳನ್ನು ಮಾಡಿದುವು. ನಿರ್ದಿಷ್ಟ ಆಯ್ಕೆಗಳು ಜನರಿಂದ ಜನರಿಗೆ ಬೇರೆಬೇರೆಯಾಗಿದ್ದವು. ಕೆಲವು ಸಮಾಜಗಳಲ್ಲಿ ಈ ಚರ್ಚೆ ಇನ್ನೂ ಚಾಲ್ತಿಯಲ್ಲಿದೆ. ಆದರೆ ಈ ಪ್ರಕ್ರಿಯೆಯು ಬಾಲ್ಯದ ಆಧುನಿಕೀಕರಣದ ಪ್ರಮುಖ ಲಕ್ಷಣವಾಗಿದ್ದು, ಇದು ವಯಸ್ಕರು ಮತ್ತು ಮಕ್ಕಳ ನಡುವೆ ಹಾಗೂ ಪರಸ್ಪರ ಮಕ್ಕಳ ನಡುವಿನ ಸಂಬಂಧಗಳಲ್ಲಿ ಬದಲಾವಣೆಗೆ ಕಾರಣವಾಗಿದೆ.[55]

ಬಾಲ್ಯಾವಸ್ಥೆಯ ಆಧುನಿಕೀಕರಣದ ಪ್ರಕ್ರಿಯೆಯಲ್ಲಿ ಜರುಗಿದ ಮೂರನೆಯ ಪ್ರಮುಖ ಬದಲಾವಣೆ ಎಂದರೆ, ಹುಟ್ಟಿದ ಮಕ್ಕಳಲ್ಲಿ 30%-50% ಮಕ್ಕಳು ಎರಡು ವರ್ಷ ಆಗುವಷ್ಟರಲ್ಲೇ ಸಾವನ್ನಪ್ಪುತ್ತಿದ್ದ ಹಿಂದಿನ ಸ್ಥಿತಿಗತಿಯ ಜಾಗದಲ್ಲಿ ಆದ ಸಾವಿನ ಪ್ರಮಾಣದ ಆಶ್ಚರ್ಯಕರವಾದ ಇಳಿಕೆ. ಕಾಲದ ದೃಷ್ಟಿಯಿಂದ ನೋಡಿದರೆ, ಜನನ ಪ್ರಮಾಣದಲ್ಲಿ ಏರಿಳಿಕೆಯ ಪ್ರಮಾಣವು ಹೆಚ್ಚುಕಡಿಮೆಯಾಗುತ್ತಿತ್ತು.. ಕೆಲವು ಪ್ರಸಂಗಗಳಲ್ಲಿ ಕುಟುಂಬಗಳು ಜನನ ಪ್ರಮಾಣವನ್ನು ಕಡಿಮೆಗೊಳಿಸಿದವು; ಈ ಪ್ರಕ್ರಿಯೆಯಲ್ಲಿ ಹುಟ್ಟಿದ ಮಕ್ಕಳು ಬಾಳಿಬದುಕುತ್ತವೆ ಎಂಬ ತೀವ್ರವಾದ ಬಯಕೆಯನ್ನು ಅವು ಹೊಂದಿದ್ದವು. ಇನ್ನು ಇತರ ಕೆಲವು ಪ್ರಕರಣಗಳಲ್ಲಿ, ನೈರ್ಮಲ್ಯ ಮತ್ತು ಸಾರ್ವಜನಿಕ ಆರೋಗ್ಯ ಸೇವೆಯ ಗುಣಮಟ್ಟ ಹೆಚ್ಚಾದ ಕಾರಣಕ್ಕೆ, ಮಕ್ಕಳ ಮರಣ ಪ್ರಮಾಣದಲ್ಲಿ ಮೊದಲಿಗೆ ಇಳಿಕೆ ಕಂಡುಬಂದಿತು; ಇದರಿಂದ, ಕುಟುಂಬದಲ್ಲಿ ಜನಸಂಖ್ಯೆಯನ್ನು ಸರಿದೂಗಿಸಲು ಜನನ ಪ್ರಮಾಣವನ್ನು ತುರ್ತಾಗಿ

[54] *Lawrence Cremin, The Transformation of the School: Progressivism in American Education (New York: Knopf, 1961); Eugen Weber, Peasants into Frenchmen: The Modernization of Rural France 1870–1914 (Stanford: Stanford University Press, 1976).*

[55] *E. A. Wrigley, Population and History (New York: McGraw-Hill, 1969); Wally Seccombe, Weathering the Storm: Working-Class Families from the Industrial Revolution to the Fertility Decline (London: Verso, 1993).*

ಕಡಿಮೆ ಮಾಡಬೇಕಾದ ಅನಿವಾರ್ಯತೆಯೂ ಉಂಟಾಯಿತು.[56] ಹಾಗಾಗಿ ಆಧುನಿಕ ಬಾಲ್ಯಕ್ಕೆ ಸಂಬಂಧಿಸಿದ ಕಾರ್ಯಗಳನ್ನು ದುಡಿಮೆಯಿಂದ ಶಾಲಾಭ್ಯಾಸಕ್ಕೆ ಪರಿವರ್ತಿಸಿ ಒಂದು ಪ್ರಮುಖ ಮರುನಿರೂಪಣೆ ಮಾಡಲಾಯಿತು. ಇದು ತನ್ನೊಂದಿಗೆ ಒಂದು ಸಾಮಾನ್ಯ ಕುಟುಂಬದಲ್ಲಿ ಇರಬಹುದಾದ ಮಕ್ಕಳ ಸಂಖ್ಯೆಯನ್ನು ಕುಗ್ಗಿಸಿತಲ್ಲದೆ ಸಾವಿಗೂ ಮಕ್ಕಳಿಗೂ ಇದ್ದ ಪರಸ್ಪರ ಸಂಬಂಧದಲ್ಲಿ ಒಂದು ಹೊಸ ಕ್ರಾಂತಿಯನ್ನು ತಂದಿತು.

ಈ ಮೂಲಭೂತ ಪರಿವರ್ತನೆಗಳು, ಎಲ್ಲಿ, ಯಾವಾಗ ಎಂಬ ಪರಿವೆಯಿಲ್ಲದೆ ತಮ್ಮೊಂದಿಗೆ ಹೆಚ್ಚಿನ ಬದಲಾವಣೆಗಳನ್ನು ತಂದವು. ಇಲ್ಲಿ ನಾವು ಸುಲಭವಾಗಿ ಊಹಿಸಬಹುದಾದಂತೆ, ಬುದ್ಧಿವಂತಿಕೆ ಎಂಬುದು ಮಕ್ಕಳಲ್ಲಿ ಇರಬೇಕಾದ ಹಲವು ನಿರ್ದಿಷ್ಟ ಗುಣಗಳಲ್ಲಿ ಮಹತ್ವದ್ದೆಂದು ಪರಿಗಣಿತವಾಗಿ ಅದನ್ನು ಔಪಚಾರಿಕ ಪರೀಕ್ಷಾ ವಿಧಾನಗಳ ಮೂಲಕ ಅಳೆದು ಅಂಕಗಳನ್ನು ಕೊಡುವ ಪದ್ಧತಿಯು ಮಕ್ಕಳಲ್ಲಿ ಹೆಚ್ಚು ಬುದ್ಧಿವಂತರು ಮತ್ತು ಕಡಿಮೆ ಬುದ್ಧಿವಂತರು ಎಂದು ಗುರುತಿಸುವ ಮೂಲಕ ಇತರ ಹಿರಿಯರ ಮತ್ತು ಹೆತ್ತವರ ಗಮನವನ್ನು ಸೆಳೆಯಿತು.[57]

ಮಕ್ಕಳನ್ನು ವಯಸ್ಸಿಗನುಗುಣವಾಗಿ ವಿಂಗಡಿಸಲು ಎರಡು ಕಾರಣಗಳಿದ್ದವು. ಮೊದಲನೆಯದಾಗಿ, ಹೆಚ್ಚಿನ ಶಾಲೆಗಳು ಮಕ್ಕಳನ್ನು ಅವರ ವಯಸ್ಸಿಗನುಣವಾಗಿ ತರಗತಿಗಳಿಗೆ ಮತ್ತು ಒಂದೇ ತರಗತಿಯ ಒಳಗೆ ವಿವಿಧ ವಿಭಾಗಗಳಿಗೆ ವಿಂಗಡಿಸುತ್ತಿದ್ದವು. ಎರಡನೆಯದಾಗಿ, ಹೆಚ್ಚಿನ ಮಕ್ಕಳಿಗೆ ಒಡಹುಟ್ಟಿದವರ ಸಂಖ್ಯೆ ಕಡಿಮೆ ಇದ್ದು, ವಿವಿಧ ವಯೋಮಾನದ ಮಕ್ಕಳೊಂದಿಗೆ ಅವರ ಒಡನಾಟ ಕಡಿಮೆಯಾಗುತ್ತಿತ್ತು. ಆಗ ಈ ಬಗೆಯ ವಿಂಗಡಣೆಯಿಂದ ಶಾಲೆಯಲ್ಲಿ ತಮ್ಮ ಸಹಪಾಠಿಗಳೊಂದಿಗೆ ಹೆಚ್ಚಿನ ಸಹವರ್ತನೆ ಸಾಧ್ಯವಾಯಿತು. ಹೆಣ್ಣು ಗಂಡುಗಳ ನಡುವಿನ ಸಹವರ್ತನೆಯಲ್ಲಿ ಮಾತ್ರ ಇದು ಸ್ವಲ್ಪ ವ್ಯತ್ಯಾಸವಾದುದನ್ನು ಬಿಟ್ಟರೆ, ವಯಸ್ಸಿನ ಆಧಾರದ ಮೇಲೆ ಸಾಮಾಜಿಕ ಗುಂಪುಗಳ ರಚನೆ ಮತ್ತು ಅಷ್ಟೆ ಕಟ್ಟುನಿಟ್ಟಾಗಿ ವಯಸ್ಸಿನ ಆಧಾರದ ಮೇಲೆ ಮಾಡಿದ ವಿಂಗಡಣೆ, ಆಧುನಿಕ ಬಾಲ್ಯದ ಅತ್ಯಂತ ಗಮನಾರ್ಹವಾದ ಗುಣಲಕ್ಷಣವಾಗಿದೆ. ವಯಸ್ಸಿನ ಆಧಾರದ ಮೇಲೆ ಮಾಡಿದ ವರ್ಗೀಕರಣದಿಂದಾಗಿ ವಯಸ್ಕರು ಮಕ್ಕಳ ಬಗೆಗೆ ಯೋಚಿಸುವ ರೀತಿ ಕೂಡ ಬದಲಾಗುತ್ತದೆ. ಇಪ್ಪತ್ತನೆಯ ಶತಮಾನದ ಸುಮಾರಿಗೆ, ಪಾಶ್ಚಾತ್ಯ ದೇಶಗಳಲ್ಲಿ ಪ್ರಾರಂಭವಾಗಿ ಕ್ರಮೇಣ ಬೇರೆ ಕಡೆಗೂ ಹರಡಿದ ಈ ವಿಧಾನದಿಂದ ವಯೋಮಾನ ಆಧಾರಿತ ಬೆಳವಣಿಗೆಯ ಹಾಗೂ ಜ್ಞಾನಗ್ರಹಣ ಕೌಶಲವೃದ್ಧಿಯ ವಿನ್ಯಾಸ ರಚನೆಯ ಪರಿಣತಿ ವಿಕಾಸವಾಗಲು ಅವಕಾಶ ಒದಗಿತು. ಈ ಪರಿಣತಿಯು ವಯೋಮಾನ-ಆಧಾರಿತ ಮಾದರಿಯನ್ನು ಶಾಲೆಯ ಒಳಗೂ ಹೊರಗೂ ಜಾರಿಗೊಳಿಸುವಂತೆ

---

[56] *Wrigley, Population and History; Ansley J. Coale and Susan Cotts Watkins, The Decline of Fertility in Europe(Princeton: Princeton University Press, 1986); J. C. Chesnais, Demographic Transition: Stages, Patterns and Economic Implications, trans. Elizabeth and Philip Kreager (Oxford: Clarendon Press, 1992).*

[57] *M. M. Sokal, ed., Psychological Testing and American Society, 1870–1930 (New Brunswick: Rutgers University Press, 1987); A. S. Kaufman, "Intelligence Tests and School Psychology," Psychology in Schools 33 (2000): 748; Paul Chapman, School as Sorters: Lewis M. Terman Applied Psychology and the Intelligence Testing Movement, 1890–1930 (New York: New York University Press, 1988).*

ಮಾಡಿತು.[58] (ಹೆಚ್ಚಿನ ವಿಮರ್ಶಕರು ಇದು ಉತ್ಪ್ರೇಕ್ಷೆಯ ಮಟ್ಟ ತಲುಪಿತ್ತು ಎಂದು ಕೂಡ ವಾದಿಸುತ್ತಾರೆ)

ವಿವಿಧ ನಮೂನೆಗಳು ಮುಂದಕ್ಕೆ ಬೆಳೆದರೂ, ಇದು ಮಕ್ಕಳು ಮತ್ತು ವಯಸ್ಕರ ಹಾಗೂ ತಂದೆತಾಯಿಗಳು ಮತ್ತು ಮಕ್ಕಳ ನಡುವಿನ ಸಂಬಂಧಗಳನ್ನು ಬಹುವಾಗಿ ಪ್ರಭಾವಿಸಿತು. ಕೃಷಿ ಸಮಾಜಗಳಲ್ಲಿಯೇ ತಂದೆತಾಯಿಗಳಲ್ಲಿ ಬಹುತೇಕರು ಮಕ್ಕಳ ಮೇಲಿನ ತಮ್ಮ ಹತೋಟಿಯನ್ನು ಕಡಿಮೆ ಮಾಡಿದ್ದರೂ, ಶಾಲಾ ಶಿಕ್ಷಣದ ಪ್ರವೇಶದೊಂದಿಗೆ ಅದು ಇನ್ನೂ ಕಡಿಮೆಯಾಯಿತು. ಆದರೆ ಶಾಲಾ ಶಿಕ್ಷಣವು ಮನೆಯ ವಾತಾವರಣಕ್ಕಿಂತ ಭಿನ್ನವಾದ ಸಾಮಾಜಿಕ ವರ್ಗ, ಜನಾಂಗ ಅಥವಾ ಧಾರ್ಮಿಕ ಮೌಲ್ಯಗಳನ್ನು ಪ್ರತಿನಿಧಿಸುತ್ತಿದೆ ಎಂದಾದಾಗ ಅದು ಆತಂಕಕ್ಕೆ ದಾರಿಮಾಡಿಕೊಟ್ಟಿದ್ದಿದೆ.[59] ಅದೇ ಸಮಯದಲ್ಲಿ,, ಎಳೆಯ ಮಕ್ಕಳ ಜೊತೆ ಹೆತ್ತವರ ಸಂಪರ್ಕ ಕೂಡ ಹೆಚ್ಚಾಗುವಂತಾಯಿತು. ಜನನ ಪ್ರಮಾಣ ಕಡಿಮೆಯಾದಂತೆ (ಮತ್ತು ಹೆಣ್ಣು ಮಕ್ಕಳು ಶಾಲೆಗೆ ಹೋಗಲು ಪ್ರಾರಂಭಮಾಡಿದುದರಿಂದ) ಮನೆಯಲ್ಲಿ ಎಳೆಯ ಮಕ್ಕಳನ್ನು ನೋಡಿಕೊಳ್ಳಲು ಒಡಹುಟ್ಟಿದವರ ಲಭ್ಯತೆ ಕಡಿಮೆಯಾಗಿ, ಆ ಎಳೆಯ ಮಕ್ಕಳು ಮತ್ತು ಹೆತ್ತವರ ನಡುವಿನ ಸಂಪರ್ಕ ಹೆಚ್ಚಾಯಿತು. ಎಳೆಯ ಮಕ್ಕಳು ಹೆತ್ತವರ ಆರೈಕೆಯಲ್ಲಿ ಅಥವಾ ಅದಕ್ಕೆ ಪರ್ಯಾಯವಾಗಿ ಶಿಶು ಆರೈಕೆ ಕೇಂದ್ರಗಳಲ್ಲಿ ಬೆಳೆಯತೊಡಗಿದರು ಮತ್ತು ಅದಕ್ಕೆ ತಕ್ಕಂತೆ ದಾದಿಯರ ಅಗತ್ಯ ಕೂಡ ಹೆಚ್ಚಾಯಿತು. ಇದು ಮಕ್ಕಳನ್ನು ಕುರಿತಂತೆ ವಯಸ್ಕರಿಗಿದ್ದ ಆತಂಕ ಮತ್ತು ಸಂತೋಷಗಳ ಮೇಲೆ ಕೂಡ ಪ್ರಭಾವನ್ನು ಬೀರತೊಡಗಿತು. ಕೊನೆಯದಾಗಿ ಮರಣ ಹಾಗೂ ಜನನದ ಪ್ರಮಾಣಗಳ ಇಳಿಕೆಯ ಕಾರಣದಿಂದಾಗಿ, ಇರುವ ಮಕ್ಕಳ ಬಗೆಗೆ ವೈಯಕ್ತಿಕವಾಗಿ ತಂದೆತಾಯಿಗಳ ಬಾಂಧವ್ಯ ಕೂಡ ವೃದ್ಧಿಸಿತು. ಇಲ್ಲಿ ನಾವು ಎಚ್ಚರವಹಿಸಬೇಕಾದ ಆವಶ್ಯಕತೆ ಇದೆ; ಕೃಷಿ ಸಮಾಜಗಳಲ್ಲಿ ಹೆತ್ತವರು ತಮ್ಮ ಮಕ್ಕಳನ್ನು ಆಳವಾಗಿ ಪ್ರೀತಿಸುತ್ತಿದ್ದರು ಮತ್ತು ಅಕಾಲಿಕವಾಗಿ ಅವರು ಮರಣ ಹೊಂದಿದಾಗ ಅದರ ನೋವನ್ನು ಅಷ್ಟೇ ಆಳವಾಗಿ ಅನುಭವಿಸುತ್ತಿದ್ದರು. ಆದರೆ ಮಕ್ಕಳ ಸಂಖ್ಯೆ ಕಡಿಮೆಯಾದಂತೆ ಮತ್ತು ಹುಟ್ಟಿದ ಪ್ರತಿಯೊಂದು ಮಗುವು ಸಾಯುವ ಸಂಭವ ಕಡಿಮೆಯಾದಂತೆ, ಪ್ರತಿ ಮಗುವಿನೊಂದಿಗೆ ತಂದೆತಾಯಿಗಳ ಭಾವನಾತ್ಮಕ ನಂಟು ಕೂಡ ಹೆಚ್ಚಾಯಿತು. ಇದು ಒಂದು ಆರ್ಥಿಕ ಮತ್ತು ಭಾವನಾತ್ಮಕ ಹೇಳಿಕೆಯಂತೆ ಕಂಡುಬಂದರೂ, ಕಡಿಮೆ ಸಂಖ್ಯೆಯಲ್ಲಿ ಮಕ್ಕಳಿರುವ ಕುಟುಂಬಗಳಲ್ಲಿ ತಂದೆತಾಯಿಗಳು ಮಕ್ಕಳನ್ನು ಮುದ್ದುಮಾಡುವ ಪ್ರಮಾಣ ಹೆಚ್ಚಾಯಿತು. ಹದಿನೆಂಟನೆಯ ಶತಮಾನದ ಕೊನೆಯ ಭಾಗದಿಂದ ಪಾಶ್ಚಾತ್ಯ

[58] *The guru on age specificity in learning is Jean Piaget; see for example his Child's Conception of the World (Savage, MD: Littlefield Adams Quality Paperbacks, 1989); for the common American educational translation of age grading, see Benjamin Bloom, ed., Taxonomy of Educational Objectives: The Classification of Educational Goals (New York: Longmans, Green & Co., 1956).*

[59] *Michael B. Katz, The Irony of Early School Reform: Educational Innovation in Mid-Nineteenth-Century Massachusetts (Cambridge: Cambridge University Press, 1968; New York: Teachers College Press, 2001).*

ದೇಶಗಳಿಂದ ಮುಂದುವರಿದು ಇಪ್ಪತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಚೀನಾದಲ್ಲಿ ಹರಿದುದಕ್ಕೆ ಪುರಾವೆಗಳು ಕಾಣಸಿಗುತ್ತವೆ.[60]

ಆಧುನಿಕೀಕರಣವು ಮಕ್ಕಳ ಲಿಂಗತಾರತಮ್ಯದ ಮೇಲೆ ಕೂಡ ಪರಿಣಾಮಗಳನ್ನು ಬೀರಿತು. ಇವುಗಳನ್ನು ಕೂಡ ಸಂಕೀರ್ಣ ರೀತಿಯಲ್ಲಿ ನಿಭಾಯಿಸಬಹುದಿತ್ತು. ಹಾಗೆಯೇ, ಮಕ್ಕಳಲ್ಲಿ ಲಿಂಗದ ಆಧಾರದ ಮೇಲೆ ತಾರತಮ್ಯಮಾಡುವ ಅಗತ್ಯ ಕ್ರಮೇಣ ಕಡಿಮೆಯಾಯಿತು. ಲಿಂಗದ ಅಧಾರದಮೇಲೆ ಮಕ್ಕಳನ್ನು ದುಡಿಮೆಗೆ ಹಚ್ಚುವುದು ಮತ್ತು ಜನನ ಪ್ರಮಾಣ ಕಡಿಮೆಯಾದಂತೆ ಅದಕ್ಕೆ ಸರಿಸಾಟಿಯಾಗಿ ಹೆಣ್ಣು ಮಕ್ಕಳ ತಾಯ್ತತನದ ಜವಾಬ್ದಾರಿ ಕೂಡ, ಕನಿಷ್ಠಪಕ್ಷ ಪರಿಮಾಣಾತ್ಮಕವಾಗಿ, ಕಡಿಮೆಯಾಯಿತು ಮತ್ತು ಇದರಿಂದ ಹುಡುಗರು ಮತ್ತು ಹುಡುಗಿಯರು ಎಂದು ಭಿನ್ನವಾಗಿ ನೋಡುವ ದೃಷ್ಟಿಕೋನದ ಮರುವ್ಯಾಖ್ಯಾನವಾಗತೊಡಗಿತು. ಕೆಲವೊಮ್ಮೆ ಶಾಲೆಯಲ್ಲಿ ಹುಡುಗರು ಮತ್ತು ಹುಡುಗಿಯರು ತಮ್ಮ ಹೊಸ ಕಾರ್ಯವನ್ನು ಸಮಾನ ಕೌಶಲದಿಂದ ನಿರ್ವಹಿಸಬಲ್ಲವರಾಗಿದ್ದರು ಎಂಬುದನ್ನು ಒಪ್ಪಿಕೊಳ್ಳಲು ಹಿಂದೇಟು ಹಾಕಿದರೂ,, ವಾಸ್ತವದಲ್ಲಿ ಹುಡುಗಿಯರೇ ಹುಡುಗರಿಗಿಂತ ಒಂದು ಹೆಜ್ಜೆ ಮುಂದಿರುತ್ತಿದ್ದರು. ಆದರೆ ಈ ಸಾಧನೆಗಳು ಹುಡುಗರು ಮತ್ತು ಹುಡುಗಿಯರು ಕಲಿಯುತ್ತಿದ್ದ ವಿಷಯಗಳು ಬೇರೆ ಬೇರೆಯಾಗಿರಬೇಕು ಎಂಬ ಒತ್ತಡದ ಕಾರಣದಿಂದ ತೆರೆಮರೆಗೆ ಸರಿದದ್ದೂ ಇದೆ. ಹೆಣ್ಣು ಮಕ್ಕಳಿಗೆ ಎಂಜಿನಿಯರಿಂಗ್ ಕಲಿಯಲು ಅವಕಾಶ ಇರಲಿಲ್ಲ ಅದರ ಬದಲು ಅವರು ಮನೆವಾರ್ತೆಯ ನಿರ್ವಹಣೆ ಕಲಿಯಬೇಕಿತ್ತು ಮತ್ತು ಹುಡುಗರು ಮತ್ತು ಹುಡುಗಿಯರಿಗೆ (ಹದಿನೆಂಟನೆಯ ಶತಮಾನದ ಕೊನೆಭಾಗದಲ್ಲಿ ಫ್ರಾನ್ಸ್‌ನಲ್ಲಿ ಇದ್ದಂತೆ) ಬೇರೆ ಬೇರೆ ಪಠ್ಯ ಪುಸ್ತಕಗಳು ಇದ್ದವು; ಹುಡುಗಿಯರ ಪಠ್ಯಪುಸ್ತಕಗಳು ವಿಶೇಷವಾಗಿ ಹೆಣ್ಣುಮಕ್ಕಳು ನಿರ್ವಹಿಸಬೇಕಾದ ಕೌಟುಂಬಿಕ ಮತ್ತು ಸಹಾಯಕ ಜವಾಬ್ದಾರಿಗಳನ್ನು ಬೋಧಿಸುತ್ತಿದ್ದವು.[61] ಅಥವಾ 1920ರ ದಶಕದಲ್ಲಿ ಅಮೆರಿಕದಲ್ಲಿ ಮಕ್ಕಳು ಸಹಶಿಕ್ಷಣ ಆರಂಭಿಸಿದ ಮೇಲೆ, ಅವರಿಗೆ ಭಿನ್ನ ಚಟುವಟಿಕೆಗಳು, ಭಿನ್ನ ಬಟ್ಟೆಗಳು ಮತ್ತು ಭಿನ್ನ ಬಣ್ಣಗಳನ್ನು ವಹಿಸುವ ಮೂಲಕ ಬಾಲ್ಯಕಾಲದಲ್ಲಿನ ಲಿಂಗವನ್ನು ಆಧರಿಸಿದ ಭಿನ್ನತೆಗಳಿಗೆ ಒತ್ತು ಕೊಡಲಾಯಿತು.[62] (ಇದೇ ಸಮಯದಲ್ಲಿ ಅಮೆರಿಕದ ಬಳಕೆದಾರ ಸಂಸ್ಕೃತಿಯು ಹೆಣ್ಣುಮಕ್ಕಳಿಗೆ ಗುಲಾಬಿ ಮತ್ತು ಗಂಡುಮಕ್ಕಳಿಗೆ ನೀಲಿ ಬಣ್ಣ ಎಂದು ಪರಿಚಯಿಸಿತು). ಆದರೆ, ಮಕ್ಕಳನ್ನು ಲಿಂಗದ ಆಧಾರದ ಮೇಲೆ ನೋಡುವ ಸಾಂಪ್ರದಾಯಿಕ ದೃಷ್ಟಿಕೋನ ನಿಧಾನಕ್ಕೆ ಬದಲಾಯಿತು ಮತ್ತು ಇನ್ನು ಮುಂದೆ ಇದರ ವಿರುದ್ಧದ ಶಕ್ತಿಗಳ ಹೊರತಾಗಿಯೂ ಆಚರಣೆಯಲ್ಲಿ ಕೂಡ ತಾರತಮ್ಯ ಕಡಿಮೆಯಾಗಬಹುದು.

---

[60] *Viviana Zelizer, Pricing the Priceless Child: The Changing Social Value of Children (New York: Basic Books, 1985); see also Stearns, Anxious Parents.*

[61] *Linda Clark, Schooling the Daughters of Marianne: Textbooks and the Socialization of Girls in Modern French Primary Schools (Albany: State University of New York, 1984).*

[62] *Julia Grant, "A 'Real Boy' and not a Sissy: Gender, Childhood and Masculinity, 1890–1940," Journal of Social History 38 (2004): 829–51. See also David Tyack and Elisabeth Hansot, Learning Together: A History of Coeducation in American Schools (New Haven: Yale University Press, 1990).*

ಹಾಗಾಗಿ ಬಾಲ್ಯಾವಸ್ಥೆಯ ಅಧುನಿಕೀಕರಣವು ಬಾಲ್ಯ ಮತ್ತು ಪ್ರೌಢತೆಗಳ ನಡುವೆ ಕೃಷಿ ಸಮಾಜಗಳಲ್ಲಿ ಇದ್ದುದಕ್ಕಿಂತ ಹೆಚ್ಚಿನ ಅಂತರವನ್ನು ಬೆಳೆಸಿತು ಎಂಬ ವಾದ ಕೊನೆಗೂ ಸರಿ ಎನಿಸುತ್ತದೆ. ಕೃಷಿ ಸಮಾಜಗಳಲ್ಲಿ ಮಕ್ಕಳು ಶೈಶವ ಕಳೆದ ಕೂಡಲೇ ಹಿರಿಯರ ಕೆಲಸದಲ್ಲಿ ಅವರಿಗೆ ಜೊತೆಯಾಗುತ್ತಿದ್ದರು; ಈ ಕೆಲಸ ಮುಂದಕ್ಕೆ ಕ್ರಮೇಣವಾಗಿ ಅವರನ್ನು ವಯಸ್ಕರ ಪಾತ್ರ ನಿರ್ವಹಿಸಲು ಸಿದ್ಧಗೊಳಿಸುತ್ತಿತ್ತು. ವಯಸ್ಕರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿದರೂ, ಅವರನ್ನು ವಯಸ್ಕರೆಂದು ಪರಿಗಣಿಸುವ ಹಾಗಿರಲಿಲ್ಲ; ಅವರಿಗೆ ಅಧಿಕಾರವಾಗಲಿ, ಸಂಪತ್ತಾಗಲಿ ಅಥವಾ ವಯಸ್ಕರಿಗೆ ಇರುವ ಕೌಶಲಗಳಾಗಲಿ ಇರಲಿಲ್ಲ. ಅಷ್ಟೆ ಅಲ್ಲದೆ ಅವರು ಹಿರಿಯರ ಹತೋಟಿಗೆ ಮತ್ತು ಆಗಾಗ್ಗೆ ಕಠಿಣ ಶಿಸ್ತಿಗೆ ಒಳಗಾಗುತ್ತಿದ್ದರು. ಆದರೂ ಮಕ್ಕಳು ಮತ್ತು ಹಿರಿಯರು ಜೀವನದ ಈ ಘಟ್ಟವನ್ನು ಮುಂದಿನ ಜೀವನದ ಹಾದಿಯ ಒಂದು ತಂಗುದಾಣವೆAದಷ್ಟೆ ನೋಡುತ್ತಿದ್ದರು. ಆಧುನಿಕ ಜಗತ್ತು ಶಾಲಾ ಶಿಕ್ಷಣದ ಬಗೆಗೆ ಕೊಟ್ಟ ಹೆಚ್ಚಿನ ಮಹತ್ವವು ಬಾಲ್ಯಾವಸ್ಥೆಯನ್ನು ಹಿರಿಯರ ಜಗತ್ತಿನಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿತು. ಶಾಲಾ ಶಿಕ್ಷಣವು, ಮುಂದೊAದು ದಿನ ಮಕ್ಕಳು ವಯಸ್ಕರ ಕೆಲಸವನ್ನು ಮತ್ತು ಅವರ ಪಾತ್ರವನ್ನು ನಿರ್ವಹಿಸಲು ಬೇಕಾದ ಸಿದ್ಧತೆ ಎಂಬುದು ಹಿರಿಯರಿಗೂ, ಮತ್ತು ಕೆಲವು ಮಕ್ಕಳಿಗೂ ಸ್ಪಷ್ಟವಾಗಿ ತಿಳಿದಿತ್ತು. ಆದರೆ ಈ ಎರಡು ಸ್ಥಿತಿಗಳ ನಡುವಿನ ಸಂಪರ್ಕದ ಕೊಂಡಿಗಳು ಬಹುತೇಕ ಅಮೂರ್ತವಾಗಿದ್ದವು ಮತ್ತು ವಾಸ್ತವದಲ್ಲಿ ದಿನದಲ್ಲಿ ಮಗುವಿನ ಹೆಚ್ಚಿನ ಸಮಯವು ಹಿರಿಯರ ಜಗತ್ತಿನ ಹೊರಗೆ – ಅಮೆರಿಕನ್ನರು ಹೇಳುವ ಹಾಗೆ "ವಾಸ್ತವಜಗತ್ತಿ"ನಿಂದ ಹೊರಗೆ - ಕಳೆಯುವಂತಾಯಿತು. ಬಾಲ್ಯವು ವಿಶೇಷ ಸವಲತ್ತು ಮತ್ತು ದೌರ್ಬಲ್ಯದ ಒಂದು ವಿಚಿತ್ರ ಸಂಯೋಗದ ರೀತಿ ಕಂಡುಬರುತ್ತಿದ್ದುದರಿಂದ ಈ ಬೇರ್ಪಡಿಕೆಯು ಮಕ್ಕಳನ್ನು ಕುರಿತ ವಯಸ್ಕರ ಮನೋಧರ್ಮವನ್ನು ಕೂಡ ಬದಲಾಯಿಸಿತು. ಇದು ಮಕ್ಕಳಿಗೆ ತಮ್ಮ ಬದುಕಿನ ಅರ್ಥವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಸಂಕೀರ್ಣಗೊಳಿಸಿ, ಸಾಂಪ್ರದಾಯಿಕ ಬಾಲ್ಯಾವಸ್ಥೆಯಲ್ಲಿ ಬಹಳ ಕಡಮೆಯಿದ್ದಂತಹ (ನಮಗೆ ಗೊತ್ತಿರುವ ಮಟ್ಟಿಗೆ) ಮಾನಸಿಕ ದುಗುಡ ಮತ್ತು ಮಾನಸಿಕ ಕಾಯಿಲೆಗಳ ಹೆಚ್ಚಳಕ್ಕೆ ಭಾಗಶಃ ಕಾರಣವಾಯಿತು.[63]

ಬಾಲ್ಯಾವಸ್ಥೆಯ ಮೂಲಭೂತ ಆಧುನಿಕೀಕರಣವನ್ನು ನಿರೂಪಿಸುವುದು ಸುಲಭ: ಶಾಲೆ, ಕಡಿಮೆ ಸಾವಿನ ಪ್ರಮಾಣ, ಒಟ್ಟಾರೆಯಾಗಿ ಜನಸಂಖ್ಯೆಯಲ್ಲಿ ಮತ್ತು ವೈಯಕ್ತಿಕ ಕುಟುಂಬದ ಮಟ್ಟದಲ್ಲಿ ಜನನ ಪ್ರಮಾಣದಲ್ಲಿ ಇಳಿಕೆ. ಈ ಸರಳವಾದ ಆದರೆ ಮೂಲಭೂತ ಮಟ್ಟದಲ್ಲಿ ನಡೆದ ಬದಲಾವಣೆಗಳಿಂದ ಅನಿವಾರ್ಯವಾಗಿ ಉಂಟಾದ ಪರಿಣಾಮಗಳನ್ನು ಗ್ರಹಿಸುವುದು ಕಷ್ಟ. ಅವು ನಿರ್ದಿಷ್ಟ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಾದರಿಗಳ ಮೇಲೆ ಸಕ್ರಿಯವಾಗಿ ವಿನ್ಯಾಸಗೊಂಡಿರುತ್ತವೆ. ಆದರೂ, ಮಕ್ಕಳ ಸಾಮಾಜಿಕ ಜೀವನದಿಂದ ಹಿಡಿದು, ಲಿಂಗತಾರತಮ್ಯ ಮತ್ತು ಮಾನಸಿಕ ಆರೋಗ್ಯದ ತನಕ ಹಲವು ಹೊಸ ಸಮಸ್ಯೆಗಳು ನಾಟಕೀಯ ರೀತಿಯಲ್ಲಿ ತಲೆದೋರಿದವು.

[63] *William Kirk, Adolescent Suicide: A School-Based Approach to Assessment & Intervention (Champaign: University of Illinois Press, 1993); Paul R. Robbins, Adolescent Suicide (Jefferson, NC: McFarland & Co., 1998); Victor Bailey, "This Rash Act": Suicide across the Life Cycle in the Victorian City (Stanford: Stanford University Press, 2000).*

ಪಾಶ್ಚಾತ್ಯ ಸಮಾಜದಲ್ಲಿ ‘ಎನ್‌ಲೈಟನ್‌ಮೆಂಟ್’ ಚಳವಳಿಯಿಂದ ಹಿಡಿದು ಕೈಗಾರಿಕೀಕರಣದ ತನಕದ ಪ್ರಮುಖ ಬೆಳವಣಿಗೆಗಳ ಜೊತೆಗೆ ಆಧುನಿಕ ಬಾಲ್ಯಾವಸ್ಥೆ ಕೂಡ ಬೆಳೆಯಿತು. ಜಾಗತಿಕ ಇತಿಹಾಸದ ದೃಷ್ಟಿಯಿಂದ ನೋಡಿದರೆ ಆಧುನಿಕ ಬಾಲ್ಯಾವಸ್ಥೆಯ ಹುಟ್ಟಿನ ಮೂಲವನ್ನು ಪಾಶ್ಚಾತ್ಯ ದೇಶಗಳಲ್ಲಿ ಕಾಣುವುದು ಸಂಶಯಕ್ಕೆ ಎಡೆಗೊಡಬಹುದು. ಐತಿಹಾಸಿಕ ಬದಲಾವಣೆಗಳಿಗೆ ಸಂಬಂಧಿಸಿದಂತೆ ಪಶ್ಚಿಮದ ಪ್ರಭಾವಕ್ಕೆ ಹೆಚ್ಚಿನ ಒತ್ತು ಕೊಡುವುದರ ಬಗೆಗೆ ಜಾಗತಿಕ ಇತಿಹಾಸಕಾರರು ಸಂಶಯ ವ್ಯಕ್ತಪಡಿಸುವುದು ಸಹಜವಾಗಿಯೇ ಇದೆ. ಆದರೆ, ಈ ವಿಷಯದಲ್ಲಿ ಪಾಶ್ಚಾತ್ಯ ದೇಶಗಳು ಮುಂದೆ ಜಗತ್ತಿನಾದ್ಯಂತ ಹರಡಿದ ಕೆಲವು ಪ್ರಮುಖ ಬದಲಾವಣೆಗಳ ಪ್ರವರ್ತಕರಾಗಿದ್ದರು. ಈ ಹೇಳಿಕೆ ನೀಡುವಾಗ ನಾವು ಸ್ವಲ್ಪ ಎಚ್ಚರ ವಹಿಸಬೇಕಾದ ಆವಶ್ಯಕತೆ ಇದೆ. ಏಕೆಂದರೆ, ಆಧುನಿಕ ಬಾಲ್ಯಾವಸ್ಥೆಯ ಪಾಶ್ಚಾತ್ಯ ಮಾದರಿಯ ಎಲ್ಲ ಅಂಶಗಳನ್ನು ಇತರ ಸಮಾಜಗಳು ಒಪ್ಪಿಕೊಳ್ಳಲಿಲ್ಲ; ಅಲ್ಲದೆ ಈಗಲೂ ಹಲವು ಸಮಾಜಗಳು ಆಧುನಿಕ ಬಾಲ್ಯದ ವ್ಯವಸ್ಥೆಯನ್ನು ಒಪ್ಪಿಕೊಳ್ಳಬೇಕೇ ಬೇಡವೇ ಎಂಬ ಜಿಜ್ಞಾಸೆಯಲ್ಲಿವೆ. ತುಂಬ ಸರಳವಾಗಿ ಜಗತ್ತಿನಲ್ಲಿ ಪಾಶ್ಚಾತ್ಯೀಕರಣವಾಯಿತು ಎಂದು ನಾವು ಹೇಳುತ್ತಿಲ್ಲ; ಆದರೆ ಆಧುನಿಕೀಕರಣದ ಪ್ರಕ್ರಿಯೆಯಲ್ಲಿ ಪಾಶ್ಚಾತ್ಯ ಪ್ರಭಾವಗಳ ಮೂಲಗಳನ್ನು ನಾವು ಪ್ರಾಥಮಿಕವಾಗಿ ಗಮನಿಸಬೇಕಾದ ಅಗತ್ಯವಿದೆ.

ಹದಿನೇಳನೆಯ ಶತಮಾನದ ಉತ್ತರಾರ್ಧ ಮತ್ತು ಹದಿನೆಂಟನೆಯ ಶತಮಾನದಲ್ಲಿ ನಡೆದ ಪ್ರಮುಖ ಸಾಂಸ್ಕೃತಿಕ ಬೆಳವಣಿಗೆಗಳು ಪಾಶ್ಚಾತ್ಯ ಜಗತ್ತಿನಲ್ಲಿ ಬಾಲ್ಯಾವಸ್ಥೆಯು ಆಧುನಿಕೀಕರಣಗೊಳ್ಳುವ ಪ್ರಕ್ರಿಯೆಗೆ ನಾಂದಿಹಾಡಿದವು. ಎರಡು ರೀತಿಯ ಪುನರಾಲೋಚನೆಗಳು ಬಾಲ್ಯಾವಸ್ಥೆಯ ನಿಜವಾದ ಸಂರಚನಾತ್ಮಕ ಬದಲಾವಣೆಗಳಿಗೆ ಮುನ್ಸೂಚನೆ ನೀಡಿದವು. ಅವು ಈ ಬದಲಾವಣೆಗಳಿಗೆ ರಂಗಸಜ್ಜಿಕೆ ಮಾಡಿಕೊಳ್ಳಲು ಹಾಗೂ ಇದಕ್ಕಾಗಿ ಪಶ್ಚಿಮದಲ್ಲಿ ಆರಿಸಿಕೊಂಡ ಮಾರ್ಗವನ್ನು ಒಗ್ಗಿಸಿಕೊಳ್ಳಲು ಸಹಾಯ ಮಾಡಿದವು. ಮೊದಲನೆಯ ಬದಲಾವಣೆ: ಎನ್‌ಲೈಟನ್‌ಮೆಂಟ್ ಚಳವಳಿ ಹಾಗೂ ವೈಜ್ಞಾನಿಕ ಕ್ರಾಂತಿಯ ಪರಿಣಾಮವಾಗಿ, ಮಕ್ಕಳು ಹುಟ್ಟಿನಿಂದಲೇ ಪಾಪಿಷ್ಠರು ಎಂಬ ಕ್ರೈಸ್ತ ಧರ್ಮದ ಅದರಲ್ಲೂ ಮುಖ್ಯವಾಗಿ ಪ್ರಾಟೆಸ್ಟಂಟ್ ಪಂಥದ ಪ್ರತಿಪಾದನೆಗೆ ವಿರುದ್ಧವಾಗಿ ಪಾಶ್ಚಿಮಾತ್ಯ ಚಿಂತಕರು ಮಂಡಿಸಿದ ಮಕ್ಕಳು ಹುಟ್ಟಿನಿಂದ ಪಾಪಿಷ್ಠರಲ್ಲ ಎಂಬ ಪ್ರತಿವಾದ. “ಮಕ್ಕಳು ಹುಟ್ಟಿದಾಗ ಏನನ್ನೂ ಬರೆಯದ ಸ್ಲೇಟಿನಂತಿರುತ್ತಾರೆ, ಕಲಿಕೆಗೆ ಮುಕ್ತವಾಗಿ ತೆರೆದುಕೊಂಡಿರುತ್ತಾರೆ ಮತ್ತು ಹೊರಗಿನ ಪ್ರಚೋದನೆಗಳಿಂದ ಬರಬಹುದಾದ ಕೆಡುಕುಗಳಿಗೆ ಒಳಪಡದಿರುವ ತನಕ ಮೂಲತಃ ಒಳ್ಳೆಯವರಾಗಿರುತ್ತಾರೆ ಅಥವಾ ಕನಿಷ್ಠ ಪಕ್ಷ ತಟಸ್ಥರಾಗಿರುತ್ತಾರೆ,” ಎಂದು ಜಾನ್ ಲಾಕ್ ವಾದಿಸುತ್ತಾರೆ. ಈ ವಾದಗಳು ಬಾಲ್ಯವನ್ನು ಕಲಿಕೆಗಾಗಿ ಮೀಸಲಿಡಬೇಕು ಎಂಬ ಹೆಚ್ಚಿನ ವಾದಗಳಿಗೆ ಇಂಬುಕೊಟ್ಟವು. ಇವುಗಳು ಪಾಪ ಮತ್ತು ಪಾಪಪರಿಹಾರಾರ್ಥವಾಗಿ ಸಾಂಪ್ರದಾಯಿಕವಾಗಿ ಧರ್ಮಗಳು ಬೋಧಿಸುವ ದೈಹಿಕ ದಂಡನೆಯನ್ನು ಕುರಿತಂತೆ ತೀವ್ರ ಚರ್ಚೆಗಳಿಗೆ ಕಾರಣವಾದವು. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದವರೆಗೂ ಅಮೆರಿಕಾ ಸಂಯುಕ್ತ ಸಂಸ್ಥಾನದ ಪ್ರಾಟೆಸ್ಟಂಟರು ಪ್ರಾಟೆಸ್ಟಂಟರು ಪಾಪಿಷ್ಠ ಮತ್ತು ಪಾಪರಹಿತ ಬಾಲ್ಯಾವಸ್ಥೆಯ ಪರಿಕಲ್ಪನೆಯನ್ನು ಕುರಿತಂತೆ ಚರ್ಚೆ ನಡೆಸುತ್ತಲೇ ಇದ್ದರು ಮತ್ತು ಕ್ರಮೇಣವಾಗಿ ಪಾಪರಹಿತ

ಸಿದ್ಧಾಂತವು ಹಟವಾದಿ ಸಾಂಪ್ರದಾಯಿಕ ಅಲ್ಪಸಂಖ್ಯಾತರ ಅಭಿಪ್ರಾಯವನ್ನು ಹಿಂದೆ ಸರಿಸಿ ತಾನು ಗೆದ್ದಿತು.[64]

1730ರ ದಶಕದಲ್ಲಿ ರೂಪುಗೊಳ್ಳತೊಡಗಿದ ಎರಡನೆ ಆವಿಷ್ಕಾರವು, ಒಂದು ಯಶಸ್ವಿ ಕುಟುಂಬವನ್ನು ಒಟ್ಟಾಗಿಡಲು ಅಗತ್ಯವಾದ ಪ್ರಬಲ ಭಾವನಾತ್ಮಕ ಸಂಬಂಧಗಳ ಮೇಲೆ, ಮಕ್ಕಳೊಂದಿಗೆ ತಂದೆತಾಯಿಗಳು ಅದರಲ್ಲೂ ಮುಖ್ಯವಾಗಿ ತಾಯಂದಿರು ಹೊಂದಿರಬೇಕಾದ ಸಂಬಂಧದ ಬಗೆಗೆ ಹೆಚ್ಚಿನ ಒತ್ತನ್ನು ಕೊಡತೊಡಗಿತು. ಇಲ್ಲಿ ಕೌಟುಂಬಿಕ ಪ್ರೀತಿ ಎಂಬುದಾಗಿ ಹೊಸ ಪರಿಕಲ್ಪನೆ ಎಂದು ಪ್ರತಿಪಾದಿಸುತ್ತಿಲ್ಲ, ಬದಲಿಗೆ ಅದಕ್ಕೆ ಈಗ ದೊರೆತ ಮಹತ್ವವು ಅಭೂತಪೂರ್ವವಾದಂತಹುದು. ಒಂದು ಆದರ್ಶ ಕುಟುಂಬದಲ್ಲಿ, ಮಕ್ಕಳು ತಮ್ಮ ಹೆತ್ತವರ ಬಗೆಗೆ ಪ್ರೀತಿಯನ್ನು ಮುಕ್ತವಾಗಿ ವ್ಯಕ್ತಪಡಿಸಬೇಕು; ಒಡಹುಟ್ಟಿದವರು ಪರಸ್ಪರ ಪ್ರೀತಿಸಬೇಕು; ತಾಯಂದಿರು ತಮ್ಮ ಪ್ರೀತಿಯ ವಿಶಾಲತೆಯಿಂದ ಕುಟುಂಬವನ್ನು ಒಟ್ಟಾಗಿಡಬೇಕು. ಗೌರವಾನ್ವಿತ ಕುಟುಂಬದ ಚಿತ್ರಗಳಲ್ಲಿ ಭಾವನೆಗಳ ಮುಕ್ತ ಅಭಿವ್ಯಕ್ತಿ ಮತ್ತು ಪರಸ್ಪರವಾಗಿ ಸಮೀಪವಾಗಿರುವುದು ಕಾಣತೊಡಗಿತು.[65]

ಕಾರ್ಯ ಮತ್ತು ಕಾರಣಗಳನ್ನು ವಿಂಗಡಿಸುವುದು ಅಷ್ಟು ಸುಲಭವಲ್ಲದಿದ್ದರೂ, ಈ ಬೌದ್ಧಿಕ ಬದಲಾವಣೆಗಳು ಇತರ ಬೆಳವಣಿಗೆಗಳೊಂದಿಗೆ ತಳಕು ಹಾಕಿಕೊಂಡಿರುವುದು ಕಾಣಿಸುತ್ತದೆ. ಮಕ್ಕಳಿಗೆ ಹೆಸರಿಡುವ ಪದ್ಧತಿಗಳು ಕೂಡ ಬದಲಾಗತೊಡಗಿದವು. ಗ್ರಾಮೀಣ ಕುಟುಂಬಗಳು ಮಕ್ಕಳಿಗೆ ಎರಡು ವರ್ಷ ಆಗುವ ತನಕ, ಅಂದರೆ ಅವುಗಳು ಬದುಕುಳಿಯುವ ಸಾಧ್ಯತೆ ಇದೆಯೆಂದು ಕಂಡುಬರುವವರೆಗೆ ಮಕ್ಕಳಿಗೆ ಹೆಸರಿಡದೆ ಕಾಯುವ ಪರಿಸ್ಥಿತಿ ಕಡಮೆಯಾಗತೊಡಗಿತು. ಮರಣ ಹೊಂದಿದ ಮಗುವಿನ ಹೆಸರನ್ನು ಅನಂತರದ ಮಗುವಿಗೆ ಇಡುವ ಪದ್ಧತಿ ಕಡಿಮೆಯಾಯಿತು. ಜೊತೆಗೆ, ಬೈಬಲ್ಲಿನಲ್ಲಿ ಬರುವ ಹೆಸರುಗಳು ಅಥವಾ ಕುಟುಂಬದ ಹೆಸರುಗಳನ್ನು ಮಾತ್ರ ಇಡುವ ಬದಲಿಗೆ ನವೀನ ಹೆಸರುಗಳನ್ನು ಹುಡುಕಿ ಇಡುವ ಪ್ರಯತ್ನ ಹೆಚ್ಚಾಯಿತು. ಇದು ಮಗುವಿನ ಬಗೆಗೆ ತಂದೆತಾಯಿಗಳು ತೋರಿಸಲು ಪ್ರಾರಂಭಮಾಡಿದ ಹೆಚ್ಚಿನ ಭಾವನಾತ್ಮಕ ಸಂಬAಧವನ್ನು ತೋರಿಸುವುದಷ್ಟೆ ಅಲ್ಲದೆ ಪ್ರತಿ ಮಗುವಿನ ವೈಯಕ್ತಿಕತೆಯನ್ನು ಕುರಿತಾಗಿನ ಹೆಚ್ಚಿನ ಒಲವನ್ನು ಕೂಡ ತೋರಿಸುತ್ತದೆ (ಹಾಗಾಗಿ ವಿಶಿಷ್ಟ ಹೆಸರುಗಳ ಆಯ್ಕೆ).[66]

ಶಿಸ್ತು ಪದ್ಧತಿಗಳು ಬದಲಾದವು, ಅಥವಾ ಕನಿಷ್ಠ ಅವುಗಳನ್ನು ಪಾಲನೆಗೆ ತರುವ ಹೊಸ ಮಾರ್ಗಗಳ ಬಗೆಗೆ ಚರ್ಚೆಗಳು ಪ್ರಾರಂಭವಾದವು. ಪಶ್ಚಿಮ

---

[64] [64]*John Locke, Essay Concerning Human Understanding(London, 1838); Philip Greven, The Protestant Temperament: Patterns of Child-Rearing, Religious Experience and the Self in Early America (New York: Knopf, 1977); Horace Bushnell, Views of Christian Nurture and of Subjects Adjacent Thereto (Hartford, CT, 1847).*

[65] *Elisabeth Badinter, Mother Love: Myth and Reality (New York: Macmillan, 1981); Nancy Cott, Bonds of Womanhood: "Women's Sphere" in New England, 1780–1835 (New Haven: Yale University Press, 1997); Randolph Trumbach, The Rise of the Egalitarian Family: Aristocratic Kinship and Domestic Relations in Eighteenth-Century England (New York: Academic Press, 1978).*

[66] *Daniel Scott Smith, "Child-Naming Practices, Kinship Ties, and Change in Family Attitudes in Hingham, Massachusetts," Journal of Social History 18 (1985): 541–66.*

ಯುರೋಪಿನಲ್ಲಿ ಎಳೆಯಮಕ್ಕಳನ್ನು ಬಟ್ಟೆಯಲ್ಲಿ ಸುತ್ತಿ ಮಲಗಿಸುವ ಪದ್ಧತಿಯನ್ನು ಕೈಬಿಡಲು ಪ್ರಾರಂಭಮಾಡಿದರು. ಇದರ ಬದಲು ಆರೋಗ್ಯವಾಗಿ ಬೆಳೆಯಬೇಕೆಂದರೆ ಒಡಹುಟ್ಟಿದವರ, ದಾದಿಯರ ಅಥವಾ ತಂದೆತಾಯಿಗಳ ಹೆಚ್ಚಿನ ಕಣ್ಗಾವಲಿನ ನಡುವೆ ಮಗು ಚೆನ್ನಾಗಿ ಕೈಕಾಲು ಆಡಿಸಬೇಕು ಎಂಬ ಆರೋಗ್ಯಕರ ನಂಬಿಕೆ ಬೆಳೆಯತೊಡಗಿತು. ಮಕ್ಕಳನ್ನು ಸ್ತನ್ಯದಾದಿಯರ ಬಳಿ ಬಿಡುವ ಪದ್ಧತಿಯನ್ನು ಕುರಿತಂತೆ ಹೊಸ ಟೀಕೆಗಳು ಬರತೊಡಗಿದವು; ಸ್ತನ್ಯದಾದಿಯರ ಬಳಿ ಬಿಡುವುದರಿಂದ ಮಕ್ಕಳ ಆರೋಗ್ಯಕ್ಕೆ ಕುತ್ತುಂಟಾಗುವ ಸಂಭವ ಇರುವುದರಿಂದ ಮಕ್ಕಳ ಲಾಲನೆ ಪಾಲನೆಯ ಜವಾಬ್ದಾರಿ ತಂದೆತಾಯಿಗಳದ್ದೇ ಆಗಿರಬೇಕು ಎಂಬ ಅಭಿಪ್ರಾಯ ಬಲವಾಗತೊಡಗಿತು. ಮುಗ್ಧ ಮಕ್ಕಳು ಕೋಪಕ್ಕೆ ಬಲಿಯಾಗಬಾರದು ಎಂಬ ಉದ್ದೇಶದಿಂದ ಅವರ ಮೇಲೆ ವಿಪರೀತ ಕೋಪ ತೋರಿಸಬಾರದು ಎಂಬ ಕೌಟುಂಬಿಕ ಸಲಹೆಗಳು ಬರತೊಡಗಿದವು. ಮಕ್ಕಳನ್ನು ದೈಹಿಕವಾಗಿ ದಂಡಿಸುವುದು ಸಲ್ಲದು ಎಂಬ ಭಾವನೆ ಬಲವಾಗತೊಡಗಿತು. ಹಿಂದೆ ಮಾಡುತ್ತಿದ್ದಂತೆ ದೆವ್ವ, ಗುಮ್ಮ, ಸಾವು, ಇತ್ಯಾದಿಯಾಗಿ ಮಕ್ಕಳಲ್ಲಿ ಭಯ ಹುಟ್ಟಿಸದಂತೆ ಹೆತ್ತವರಿಗೆ ಹೆಚ್ಚಿನ ಎಚ್ಚರಿಕೆಯನ್ನು ಮೂಡಿಸುವ ಪ್ರಯತ್ನಮಾಡಲಾಯಿತು. ಆದರೆ ಹಲವು ದಶಕಗಳವರೆಗೆ ಈ ವಿವಿಧ ಬದಲಾವಣೆಗಳು ಕಾರ್ಯಾಚರಣೆಗೆ ಬರುವ ಬದಲು ನಿಸ್ಸಂಶಯವಾಗಿ ಬಾಯಿಮಾತಿನಲ್ಲೇ ಉಳಿದುಬಿಟ್ಟಿದ್ದವು. ಈ ಸಲಹೆಗಳು ಬಂದು ಸುಮಾರು ನೂರು ವರ್ಷಗಳು ಆದ ಅನಂತರವೂ, ಅಂದರೆ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಕೂಡ ಅಮೆರಿಕಾದ ಕುಟುಂಬಕೈಪಿಡಿಗಳಲ್ಲಿ ತಂದೆತಾಯಿಗಳು ಮಕ್ಕಳ ಮೇಲೆ ಕೋಪ ತೋರಿಸಬಾರದು ಎಂಬ ಸಲಹೆಗಳು ಮುಂದುವರಿಯುತ್ತಿದ್ದವು. ಆದರೆ ಹೊಸ ಅಲೆ ಬೀಸತೊಡಗಿತ್ತು - ಕೆಲವು ತಂದೆತಾಯಿಗಳು ಮಕ್ಕಳನ್ನು ನೋಡಿಕೊಳ್ಳುವುದನ್ನು ಮತ್ತು ಬಾಲ್ಯಾವಸ್ಥೆಯನ್ನು ಕುರಿತ ತಮ್ಮ ನಂಬಿಕೆಗಳನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡರು.[67]

ಮುಂದುವರಿದು, ಶಿಕ್ಷಣದಲ್ಲಿ ಹೊಸ ಸಾಧ್ಯತೆಗಳ ಜೊತೆಗೆ, ಶ್ರೀಮಂತ ಕುಟುಂಬಗಳಲ್ಲಿ ಮಕ್ಕಳನ್ನು ಬಳಕೆದಾರರ ರೀತಿಯಲ್ಲಿ ಪರಿಗಣಿಸಲು ಪ್ರಾರಂಭಮಾಡಿದರು. ಬಳಕೆದಾರರು, ಎಂದರೆ ನಾವೀಗ ಕಾಣುವ ಕೊಳ್ಳುಬಾಕ ಸಂಸ್ಕೃತಿಯ ಬಳಕೆದಾರರ ರೀತಿಯಲ್ಲಿ ಅಲ್ಲ, ಬದಲಿಗೆ, ಅವರ ಬಳಕೆಗೆಂದೇ ವಿಶೇಷ ಉತ್ಪನ್ನಗಳನ್ನು ತಯಾರಿಸುವ ನಿಟ್ಟಿನಲ್ಲಿ ನೋಡಬೇಕು ಎಂಬ ಅರ್ಥದಲ್ಲಿ. ಪಾಠಕ್ಕಾಗಿ ಇರುವ ಗೊಂಬೆಗಳು ಮತ್ತು ಇತರ ಕಲಿಕಾ ಆಟಿಕೆಗಳು, ಅದರಲ್ಲೂ ಮುಖ್ಯವಾಗಿ ಮಕ್ಕಳಿಗಾಗಿಯೆ ಬರೆದ ಪುಸ್ತಕಗಳು ಹದಿನೆಂಟನೆಯ ಶತಮಾನದ ಉತ್ತರಾರ್ಧದ ಅನಂತರ ನಮಗೆ ಕಾಣಬರುವ ಬದಲಾವಣೆಯ ಆರಂಭಿಕ ಸೂಚನೆಗಳು. ಈ ಬದಲಾವಣೆಗಳು ಮಕ್ಕಳ ಮುಕ್ತ ಆಟದ ಮೇಲೆ ಮಿತಿಯೊಡ್ಡಿ, ಹಿರಿಯರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಗೆ ಹೆಚ್ಚಿನ ಅವಕಾಶ ಒದಗಿಸಿದವು.

---

[67] *George Sussman, Selling Mother's Milk: The Wetnursing Business in France, 1715–1914 (Urbana: University of Illinois Press, 1982); Valerie Fildes, Wetnursing, a History from Antiquity to the Present(Oxford: Basil Blackwell, 1988); Trumbach, Rise of the Egalitarian Family; Peter N. Stearns, American Cool: Constructing a Twentieth-Century Emotional Style (New York: New York University Press, 1994).*

ಆದರೆ ಇವುಗಳು ಖಂಡಿತವಾಗಿಯೂ ಹುಟ್ಟಿಕೊಂಡಿದ್ದು ಬಾಲ್ಯಾವಸ್ಥೆಯ ಉದ್ದೇಶದ ಕುರಿತ ಕೆಲವು ಹೊಸ ಆಲೋಚನೆಗಳಿಂದಲೇ.[68]

ಕೊನೆಯದಾಗಿ, ಸಾಮಾನ್ಯ ಬದಲಾವಣೆಗಳ ಬಗೆಗೆ ಹೇಳುವುದಾದರೆ, ಮಕ್ಕಳು ಮತ್ತು ಯುವಕರ ಬಗೆಗೆ ಹುಟ್ಟಿಕೊಂಡ ಹೊಸ ಆಶಾವಾದವು ಪಶ್ಚಿಮ ಯುರೋಪಿನಲ್ಲಿ ಮತ್ತು ಉತ್ತರ ಅಮೆರಿಕಾದಲ್ಲಿ ವಯೋಮಾನ ಆಧಾರಿತ ವರ್ಗಗಳ ಬಗೆಗೆ ಇದ್ದ ವಿಶಾಲ ಸಾಮಾಜಿಕ ಅಭಿಪ್ರಾಯವನ್ನು ಬದಲಾಯಿಸಿತು. ಅಮೆರಿಕನರು 1750ರ ದಶಕದಲ್ಲಿ ತಮ್ಮ ವಯಸ್ಸನ್ನು ಹೆಚ್ಚು ಮಾಡಿ ಹೇಳಿಕೊಳ್ಳುತ್ತಿದ್ದರು; ತಮ್ಮ ಬಟ್ಟೆಬರೆಯಲ್ಲಿ, ಅದರಲ್ಲಿಯೂ ಗಣ್ಯಪರಿವಾರಗಳಲ್ಲಿ ಬಿಳಿಬಣ್ಣ ಲೇಪಿಸಿದ ಕೃತಕ ಕೂದಲು ಸೇರಿದಂತೆ ವಯಸ್ಸು ಹೆಚ್ಚು ಕಾಣುವಂತಹ ಬಟ್ಟೆಬರೆ ಧರಿಸುತ್ತಿದ್ದರು; ಆದರೆ 1850ರ ಸುಮಾರಿಗೆ ಜನರು ವಯಸ್ಸು ಹೆಚ್ಚುಕಾಣುವಂತಹ ದಿರಿಸನ್ನು ತೊರೆದು, ಯೌವನಕ್ಕೆ ಮಣಿದು, ತಮ್ಮ ವಯಸ್ಸನ್ನು ಕಡಿಮೆ ಮಾಡಿ ಹೇಳತೊಡಗಿದರು. ಇದರ ಅರ್ಥ, ಯೌವನ ಹೆಚ್ಚು ಸಂತೋಷದಾಯಕವಾಗುತ್ತಾ ಹೋಯಿತು ಎಂದಲ್ಲ; ಆದರೆ ತಾತ್ವಿಕವಾಗಿ ಅದಕ್ಕೆ ಹಿಂದೆAದೂ ಕಂಡರಿಯದAತಹ ಮನ್ನಣೆ ದೊರೆಯತೊಡಗಿತು.[69]

ಆದರೆ, ಪಶ್ಚಿಮದಲ್ಲಿ ಪ್ರಮುಖ ಸಾಂಸ್ಕೃತಿಕ ಚಳವಳಿಯ ಹೊರತಾಗಿಯೂ, ಆಧುನಿಕ ಬಾಲ್ಯಾವಸ್ಥೆಯ ನಿಜವಾದ ರಚನೆಗಳ ಕಡೆಗಿನ ಪರಿವರ್ತನೆಯು ಸಾಕಷ್ಟು ನಿಧಾನಕ್ಕೆ ನಡೆಯಿತು. ಶಿಕ್ಷಣದ ಬಗೆಗೆ ಹೊಸ ಗಮನವು ಹದಿನೆಂಟನೆಯ ಶತಮಾನದ ಉತ್ತರಾರ್ಧ ಮತ್ತು ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ನಡೆಯಿತು. ಉದಾಹರಣೆಗೆ, ಫ್ರಾನ್ಸಿನಲ್ಲಿ, ನೌಕರಶಾಹಿ ಮತ್ತು ತಾಂತ್ರಿಕ ಗಣ್ಯರನ್ನು ತರಬೇತುಗೊಳಿಸುವ ನಿರ್ದಿಷ್ಟ ಉದ್ದೇಶದಿಂದ ಹುಟ್ಟಿಕೊಂಡ ಹೊಸ ಮಾಧ್ಯಮಿಕ ಶಾಲೆಗಳು.[70] ಸಾರ್ವಜನಿಕ ಶಿಕ್ಷಣವನ್ನು ಕುರಿತಂತೆ ಚಿಂತನೆಗಳು ಕ್ರಮೇಣವಾಗಿ ಹುಟ್ಟಿಕೊಂಡವು; ಉದಾಹರಣೆಗೆ, ಫ್ರಾನ್ಸ್ ದೇಶವು 1830ರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪ್ರೋತ್ಸಾಹಿಸಲು ಹೊಸ ಕಾನೂನನ್ನು ರೂಪಿಸಿತು, ಆದರೆ ಅದರ ಜಾರಿ ತೃಪ್ತಿಕರವಾಗಿರಲಿಲ್ಲ. ಹೊಸ ಅಮೆರಿಕಾ ಸಂಸ್ಥಾನದ ಉತ್ತರ ರಾಜ್ಯಗಳು ಬೇಗನೆ ಕಾರ್ಯಪ್ರವೃತ್ತವಾದವು. ಹೊಸ ರಾಷ್ಟ್ರದಲ್ಲಿ ಚರ್ಚ್ ಮತ್ತು ಸರ್ಕಾರಗಳ ನಡುವೆ ಸಂಘರ್ಷ ಇರಲಿಲ್ಲ ಮತ್ತು ಸಾಂಪ್ರದಾಯಿಕ ಸಾಮಾಜಿಕ ಶ್ರೇಣಿವ್ಯವಸ್ಥೆಯ ಮೇಲೆ ಸಾರ್ವಜನಿಕ ಶಿಕ್ಷಣ ಬೀರಬಹುದಾದ ಪರಿಣಾಮಗಳ ಬಗೆಗೆ ಆತಂಕಗಳು ಕೂಡ ಇರಲಿಲ್ಲ. ಇದರ ಜೊತೆಗೆ, ಅಮೆರಿಕಾದ ನಾಯಕರು ಅಮೆರಿಕಾಕ್ಕೆ ವಲಸೆ ಬರುತ್ತಿದ್ದ ಜನರನ್ನು ಹೊಸ ಸಂಸ್ಕೃತಿಗೆ ಒಗ್ಗಿಕೊಳ್ಳುವಂತೆ ಮಾಡುವಲ್ಲಿ ಶಿಕ್ಷಣವನ್ನು ಒಂದು ಸಾಧನವಾಗಿ ಬಳಸುವ ಬಗೆಗೆ ಹೆಚ್ಚಿನ ಬದ್ಧತೆಯನ್ನು ಹೊಂದಿದ್ದರು. ಮೆಸಾಚ್ಯುಸೆಟ್ಸ್‌ನಂತಹ ಹಲವು ರಾಜ್ಯಗಳು 1830ರ ಸುಮಾರಿಗಾಗಲೇ ವ್ಯಾಪಕ ವ್ಯವಸ್ಥೆಯನ್ನು

[68] *Neil McKendrick, John Brewer, and J. H. Plumb, The Birth of a Consumer Society: The Commercialization of Eighteenth-Century England (Bloomington: Indiana University Press, 1982).*

[69] *David Hackett Fischer, Growing Old in America (New York: Oxford University Press, 1977).*

[70] *Peter N. Stearns, Schools and Students in Industrial Society: Japan and the West, 1870–1940 (Boston: Bedford Books, 1998).*

ಹೊಂದಿದ್ದವು ಮತ್ತು ಶಿಕ್ಷಣವನ್ನು ಕಡ್ಡಾಯ ಮಾಡುವ ದಿಕ್ಕಿನಲ್ಲಿ ಕಾರ್ಯಪ್ರವೃತ್ತವಾಗಿದ್ದವು. ವ್ಯಾಪಕ ಚರ್ಚೆಯ ನಡುವೆ ಬಾಲಕಾರ್ಮಿಕ ಪದ್ಧತಿಯ ಮೇಲೆ ನಿರ್ಬಂಧ ಹೇರುವಂತಹ ನಿಯಮಗಳು ಇದೇ ಸಮಯದಲ್ಲಿ ಜಾರಿಯಾದವು. ಮಧ್ಯಮ ವರ್ಗದಲ್ಲಿ ಈ ಬಗೆಗೆ ಅಭಿಪ್ರಾಯ ಭೇದವಿತ್ತು; ಒಂದು ವರ್ಗ ಮಕ್ಕಳನ್ನು ರಕ್ಷಿಸಿ ಅವರನ್ನು ಸುಶಿಕ್ಷಿತರನ್ನಾಗಿ ಮಾಡುವ ಬಗೆಗೆ ವಾದಿಸಿದರೆ, ಮಕ್ಕಳ ಅಗ್ಗದ ದುಡಿಮೆಯನ್ನು ನಂಬಿಕೊಂಡಿದ್ದ ಇನ್ನೊಂದು ವರ್ಗವು ಅದರ ವಿರುದ್ಧವಾಗಿ ವಾದಿಸುತ್ತಿತ್ತು. ಕಾರ್ಮಿಕರಲ್ಲಿ ಕೂಡ ಅಭಿಪ್ರಾಯಭೇದವಿತ್ತು. ಆದರೆ ಕಾರ್ಖಾನೆಗಳು ಬೆಳೆದಂತೆ ಮತ್ತು ಮಕ್ಕಳ ಮೇಲೆ ಕುಟುಂಬದ ಸದಸ್ಯರ ಮೇಲ್ವಿಚಾರಣೆ ಕಡಿಮೆಯಾದಂತೆ ಮಕ್ಕಳ ಸಂಪಾದನೆಯ ಮೇಲೆ ಸಾಂಪ್ರದಾಯಿಕವಾಗಿ ಇದ್ದ ಅವಲಂಬನೆ ಕಡಿಮೆಯಾಗಿ ಅದರ ಬದಲು ನಿಯಂತ್ರಣದ ಬಯಕೆ ಹೆಚ್ಚಾಯಿತು. ಹಲವು ಪಾಶ್ಚಾತ್ಯ ದೇಶಗಳು ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿಯೆ ಕಾನೂನನ್ನು ಜಾರಿಗೊಳಿಸಿದ್ದವು, ಆದರೆ ನಿಜವಾದ ಪರಿವೀಕ್ಷಣೆ ಮತ್ತು ಜಾರಿ ಪ್ರಾರಂಭವಾಗಿದ್ದು ಸ್ವಲ್ಪ ತಡವಾಗಿ.[71] ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ, ಮಕ್ಕಳು ಮಾಡುತ್ತಿದ್ದ ಸರಳ ಕೆಲಸಗಳನ್ನು ಮಾಡಬಲ್ಲಂತಹ ಯಂತ್ರಗಳ ಬಳಕೆ ಹೆಚ್ಚಾದಂತೆ, ಮಕ್ಕಳಿಗೆ ಕಾರ್ಖಾನೆಗಳಲ್ಲಿ ಕೆಲಸ ಕಡಿಮೆಯಾಗತೊಡಗಿತು. ಇಪ್ಪತ್ತನೆಯ ಶತಮಾನದಲ್ಲಿ ಸಾಮಾನ್ಯ ಕೆಲಸಗಳಾದ ಸುದ್ದಿಪತ್ರಿಕೆಗಳನ್ನು ಹಂಚಿಕೆ ಮತ್ತು ಸಣ್ಣಪುಟ್ಟ ಅಪರಾಧಗಳಂತಹ ಬೀದಿ ಚಟುವಟಿಕೆಗಳಲ್ಲಿ ಕೆಳವರ್ಗದ ಮಕ್ಕಳು ತೊಡಗಿಕೊಳ್ಳುತ್ತಿದ್ದರು. ಗ್ರಾಮೀಣ ಪ್ರದೇಶಗಳಲ್ಲಿ ಬದಲಾವಣೆಗಳು ತಡವಾಗಿಯಾದರೂ ಬಂದವು. ಪಶ್ಚಿಮದಲ್ಲಿ ಇಪ್ಪತ್ತನೆಯ ಶತಮಾನದಲ್ಲಿ ಕೂಡ ಮಕ್ಕಳು ಮನೆಯಲ್ಲಿ ಸಣ್ಣಪುಟ್ಟ ಕೆಲಸಕ್ಕೆ ಸಹಾಯ ಮಾಡುವುದರಿಂದ ಹಿಡಿದು, ಕಟಾವಿನ ಸಂದರ್ಭದಲ್ಲಿ ಸ್ವಲ್ಪ ಹೆಚ್ಚು ಪರಿಶ್ರಮದಿಂದಲೇ ಕೆಲಸ ಮಾಡುವುದನ್ನು ನಿರೀಕ್ಷಿಸಲಾಗುತಿದ್ದರೂ, ಕೃಷಿ ಕುಟುಂಬಗಳು ಶಿಕ್ಷಣದ ಮಹತ್ವವನ್ನು ಕಾನೂನು ಜಾರಿಗೊಳ್ಳುವ ಮೊದಲೇ ಮನಗಂಡಿದ್ದವು. ಉದಾಹರಣೆಗೆ, 1860ರ ದಶಕದ ವೇಳೆಗೆ ಮಾರುಕಟ್ಟೆ ಆಧಾರಿತ ವ್ಯವಸಾಯ ಅವಲಂಬಿಸಿದ ಫ್ರೆಂಚ್ ಕೃಷಿಕರು, ಓದುಬರಹ ಕಲಿತ ಎಣಿಕೆ ತಿಳಿದ, ಸ್ವಲ್ಪ ಮಟ್ಟಿಗೆ ವೈಜ್ಞಾನಿಕ ತರಬೇತಿ ಪಡೆದ ಗಂಡುಮಕ್ಕಳಿದ್ದರೆ ಕುಟುಂಬದ ಆರ್ಥಿಕತೆಗೆ ಒಳ್ಳೆಯದು ಎಂಬುದನ್ನು ಮನಗಂಡಿದ್ದರು.[72]

ಬಾಲ್ಯದಾಚೆಗೆ ಶಿಕ್ಷಣದ ಕುರಿತಂತೆ, ಅದರಲ್ಲಿಯೂ ಮಧ್ಯಮವರ್ಗದ ಕುಟುಂಬಗಳಲ್ಲಿ ಬದ್ಧತೆಯು ನಿಧಾನಕ್ಕೆ ಬೆಳೆಯಿತು. 1900ರ ಸುಮಾರಿಗೆ ಅಮೆರಿಕಾದ ಮಧ್ಯಮವರ್ಗದ ಕೆಲವು ಮಕ್ಕಳು ಮತ್ತು ಕಾರ್ಮಿಕ ವರ್ಗದ ಮುಕ್ಕಾಲು ಪಾಲು ಮಕ್ಕಳು ಪ್ರೌಢಶಾಲೆಯ ಮೆಟ್ಟಲೇರಿರಲಿಲ್ಲ.[73] ಆದರೆ ಹದಿಹರೆಯದ ತನಕ ಶಾಲೆಗೆ ಹೋಗುವ ಅಭ್ಯಾಸ ವ್ಯಾಪಕವಾಗಿ, ಎರಡನೆಯ ಮಹಾಯುದ್ಧದ ಅನಂತರ

---

[71] *Heywood, Childhood; Zelizer, Pricing; Neil Smelser, Social Change in the Industrial Revolution: An Application of Theory to the British Cotton Industry (Chicago: University of Chicago Press, 1969).*
[72] *Weber, Peasants .*
[73] Joel Perlman, "Curriculum and Tracking in the Transformation of the American High School: Providence, R.I. 1880–1930," Journal of Social History 19 (1985): 29–55; Charles R. Day, Schools and Work: Technical and Vocational Education in France since the Third Republic (Montreal: McGill-Queens University Press, 2001); Mary Jo Maynes, Schooling in Western Europe: A Social History (Albany: State University of New York Press, 1985).

ಮೊದಲಿಗೆ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ, ಅನಂತರ ಯುರೋಪು ಮತ್ತು ಕೆನಡಾದಲ್ಲಿ ಕಾಲೇಜು ಶಿಕ್ಷಣಕ್ಕೂ ವಿಸ್ತರಿಸಿತು. ಯೌವನ, ಹಾಗೆಯೇ ಬಾಲ್ಯ ಕೂಡ ಮರುನಿರೂಪಣೆಗೊಳ್ಳತೊಡಗಿತು.

ಕ್ರಮೇಣವಾಗಿಯಾದರೂ, ಲಿಂಗತಾರತಮ್ಯ ಕೂಡ ಶಿಕ್ಷಣದ ಮೂಲಕ ಕಡಿಮೆಯಾಗತೊಡಗಿತು. ಶಿಕ್ಷಣದ ಸಾರ್ವತ್ರೀಕರಣದ ಆರಂಭದಲ್ಲಿ ಸರಕಾರಗಳು ಮತ್ತು ಕುಟುಂಬಗಳು ಗಂಡುಮಕ್ಕಳ ಶಿಕ್ಷಣವನ್ನು ಕುರಿತಂತೆ ಹೆಚ್ಚಿನ ಆಸ್ಥೆವಹಿಸುವುದು ಕಾಣಿಸುತ್ತದೆ. ಈ ಕಾಲದ ನಂಬಿಕೆಯಂತೆ, ಹುಡುಗರಿಗೆ ಶಿಕ್ಷಣ ಕೊಟ್ಟರೆ ಅದರಿಂದ ಅವರಿಗೂ, ಕುಟುಂಬಕ್ಕೂ ಹೆಚ್ಚಿನ ಲಾಭವಾಗುತ್ತಿತ್ತು. ಆದರೂ, ಮಾಧ್ಯಮಿಕ ಹಂತದಲ್ಲಿ ಬೇರೆಯೇ ಪಠ್ಯ ಮತ್ತು ಬೇರೆಯೇ ಚಟುವಟಿಕೆಗಳನ್ನು ಒಳಕೊಂಡಂತೆ ಹೆಣ್ಣುಮಕ್ಕಳು ಕೂಡ ಶಿಕ್ಷಣದ ವ್ಯಾಪ್ತಿಗೆ ಬರತೊಡಗಿದರು. ಇಪ್ಪತ್ತನೆಯ ಶತಮಾನದ ಆರಂಭದ ಸುಮಾರಿಗೆ, ಹೆಣ್ಣುಮಕ್ಕಳಿಗೂ ಬಿಳಿ ಕಾಲರು ಹುದ್ದೆಗಳ ಅವಕಾಶ ಹೆಚ್ಚಿದಂತೆ, ಹೆಣ್ಣುಮಕ್ಕಳಿಗೂ ಶಿಕ್ಷಣ ಕೊಡಬೇಕಾದ ಅಗತ್ಯವನ್ನು ಕುಟುಂಬಗಳು ಹೆಚ್ಚುಹೆಚ್ಚಾಗಿ ಕಂಡುಕೊಳ್ಳತೊಡಗಿದರು; 1920ರ ದಶಕದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ ಮಾಧ್ಯಮಿಕ ಶಾಲೆಗಳಲ್ಲಿ ಹುಡುಗರಿಗಿಂತ ಹುಡುಗಿಯರ ಪ್ರಮಾಣವೇ ಹೆಚ್ಚಾಗಿತ್ತು. (1980ರ ಸುಮಾರಿಗೆ ಇದೇ ರೀತಿಯ ಬದಲಾವಣೆ ನಮಗೆ ಕಾಲೇಜು ಶಿಕ್ಷಣದಲ್ಲೂ ಕಾಣಿಸುತ್ತದೆ.)

ಜನನ ಪ್ರಮಾಣವು ಕೂಡ ನಿಧಾನ ಗತಿಯಲ್ಲಿ ಇಳಿಯತೊಡಗಿತು. ತಮ್ಮ ಮಕ್ಕಳಿಗೆ ಶಿಕ್ಷಣ ಮತ್ತು ಆಸ್ತಿಯನ್ನು ಒದಗಿಸಲು ಆತುರವಾಗಿದ್ದ ಮಧ್ಯಮ ವರ್ಗವು ಇದರ ಮುಂಚೂಣಿಯಲ್ಲಿತ್ತು. ಇವರನ್ನು ನಗರ ಪ್ರದೇಶದ ಕಾರ್ಮಿಕ ವರ್ಗ ಮತ್ತು ಅನಂತರ ಕೃಷಿಕರು ಅನುಸರಿಸಿದರು. (ಆದರೆ ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ, ಕೃಷಿ ಕುಟುಂಬಗಳು ತಮ್ಮ ಮಕ್ಕಳ ನಡುವೆ ಸಮಂಜಸ ರೀತಿಯಲ್ಲಿ ಆಸ್ತಿಪಾಲು ಮಾಡಲು ಸಾಧ್ಯವಾಗುವಂತೆ ಸಾಮಾನ್ಯವಾಗಿ ಆರಂಭದಿಂದಲೇ ಸಣ್ಣ ಕುಟುಂಬ ವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದಿದ್ದರು.) ಜನನ ಪ್ರಮಾಣವನ್ನು ಇಳಿಸುವುದು ಒಂದು ಮೂಲಭೂತ ಬದಲಾವಣೆಯಾಗಿದ್ದ ಕಾರಣಕ್ಕೆ ಮಕ್ಕಳ ಲಾಲನೆ ಪಾಲನೆಯ ಪ್ರಮಾಣದಲ್ಲಿ ಆದ ಇಳಿಕೆಯಿಂದ, ಕೌಟುಂಬಿಕ ಬದ್ಧತೆ ಅಥವಾ ಲೈಂಗಿಕ ಸಾಮರ್ಥ್ಯವನ್ನು ಕುರಿತಂತೆ ಈ ಬದಲಾವಣೆ ಏನನ್ನು ಸೂಚಿಸುತ್ತದೆ ಎಂದು ಗಂಡಸರು ಮತ್ತು ಹೆಂಗಸರು ಸಾಕಷ್ಟು ಗೊಂದಲಕ್ಕೆ ಸಿಲುಕಿದ್ದರು ಎಂದು ಕೆಲವು ಇತಿಹಾಸಕಾರರು ವಾದಿಸುತ್ತಾರೆ.[74] ಹತ್ತೊಂಬತ್ತನೆಯ ಶತಮಾನದಲ್ಲಿದ್ದ ಸಂತಾನ ನಿರೋಧಕಗಳ ಅವಿಶ್ವಾಸಾರ್ಹತೆ ಮತ್ತು ಲೈಂಗಿಕ ವಿವೇಚನೆಯನ್ನು ಪಾಲಿಸಬೇಕು ಎಂಬ ಪ್ರಭುತ್ವದ ಆದೇಶದ ಕಾಲದಲ್ಲಿ ಇವುಗಳ ಬಳಕೆಯ ಬಗೆಗೆ ಇದ್ದ ತೀವ್ರ ಸಾಮಾಜಿಕ ಪೂರ್ವಗ್ರಹ ಮತ್ತು ಕಾನೂನು ನಿರ್ಬಂಧಗಳು ಈ ಬದಲಾವಣೆಯನ್ನು ಇನ್ನಷ್ಟು ಗೋಜಲುಗೊಳಿಸಿದ್ದವು.[75] ಹೆಚ್ಚಿನ ಜನರು ಮೂಲತಃ ಇಂದ್ರಿಯ ನಿಗ್ರಹದ ಮೂಲಕ ಜನನ ಪ್ರಮಾಣವನ್ನು ಕಡಿಮೆಗೊಳಿಸಿದ್ದರು. ಇಲ್ಲಿ ಕೂಡ, ಮೂಲಭೂತ

[74] *Rudolph Binion, "Fiction as Social Fantasy: Europe's Domestic Crisis of 1879-1914," Journal of Social History 27 (1994): 679–99.*

[75] Seccombe, Weathering

ಬದಲಾವಣೆಗಳು ತಮ್ಮ ಪ್ರಭಾವವನ್ನು ಬೀರಿ, ಇಪ್ಪತ್ತನೆಯ ಶತಮಾನದ ಆರಂಭಕ್ಕೆ ಬಂದಂತೆ ದೊಡ್ಡ ಕುಟುಂಬಗಳ ಸಂಖ್ಯೆ ಅದರಲ್ಲಿಯೂ ಮುಖ್ಯವಾಗಿ ನಗರ ಪ್ರದೇಶಗಳಲ್ಲಿ ಮತ್ತು ವಲಸಿಗರಲ್ಲದವರ ಕುಟುಂಬಗಳಲ್ಲಿ, ಗಣನೀಯವಾಗಿ ಕಡಿಮೆಯಾಯಿತು.

ಈ ಆಧುನಿಕ ಒಗಟಿನ ಕೊನೆಯ ಭಾಗವಾಗಿ ಮರಣ ಪ್ರಮಾಣದಲ್ಲಿ ಕಂಡುಬಂದ ಗಣನೀಯ ಇಳಿಕೆಯು ಸ್ವಲ್ಪ ಹಠಾತ್ತಾಗಿಯೇ ಅನ್ನುವಂತೆ ಮೊದಲು ಪಾಶ್ಚಿಮಾತ್ಯ ದೇಶಗಳಲ್ಲಿ ಕಾಣಿಸಿಕೊಂಡಿತು. ಪಾಶ್ಚಿಮಾತ್ಯ ದೇಶಗಳಲ್ಲಿ. ಅಕಾಲಿಕವಾಗಿ ಸಾವಿಗೆ ಈಡಾದ ಮಕ್ಕಳನ್ನು ಕುರಿತ ಶೋಕ ಮತ್ತು ತಪ್ಪಿತಸ್ಥ ಮನೋಭಾವದ ಕಾರಣದಿಂದಾಗಿ ಸಾರ್ವಜನಿಕ ಆರೋಗ್ಯದ ಬಗೆಗೆ ಹೆಚ್ಚಿನ ಕಾಳಜಿ ಬೆಳೆದು, ಮಕ್ಕಳ ಪ್ರಸವದಲ್ಲಿ ಸಹಾಯಕರಾಗಿರುವವರು ಸಂತಾನಪ್ರತಿರೋಧ ಕ್ರಮಗಳನ್ನು ಹೆಚ್ಚಿನ ಎಚ್ಚರದಿಂದ ಅನುಸರಿಸುವಂತೆ ಮಾಡಿತು. 1880 ಮತ್ತು 1920ರ ನಡುವೆ ಮಕ್ಕಳ ಮರಣಪ್ರಮಾಣದಲ್ಲಿ ಒಂದು ಅಸಾಮಾನ್ಯ ಇಳಿಕೆ ಕಂಡುಬಂದು, ಅದು 5%ಗಿಂತಲೂ ಕಡಿಮೆ ಮಟ್ಟಕ್ಕೆ ಇಳಿಯಿತು. 1920ರ ದಶಕದ ವೇಳೆಗೆ, ಈ ಬದಲಾವಣೆಗಳು ಇನ್ನೂ ಹೆಚ್ಚು ಫಲಕೊಡಲು ಪ್ರಾರಂಭಮಾಡುತ್ತಿದ್ದಂತೆ, ಪಶ್ಚಿಮದಲ್ಲಿ ಆಧುನಿಕ ಬಾಲ್ಯದ ಸಂರಚನೆ ಸಂಪೂರ್ಣವಾಯಿತು.

ಆದರೆ ಈ ಮೂಲಭೂತ ಬದಲಾವಣೆಗಳಿಗೆ ಒಗ್ಗಿಕೊಳ್ಳಲು ಇದಕ್ಕಿಂತಲೂ ಹೆಚ್ಚಿನ ಸಮಯ ಬೇಕಾಯಿತು. ಹೆಚ್ಚಿನ ಕುಟುಂಬಗಳಿಗೆ ಮಕ್ಕಳ ಸಾವಿನ ಸಂಖ್ಯೆ ಕಡಿಮೆಯಾದುದರಿಂದ ಖಂಡಿತವಾಗಿಯೂ ಲಾಭವಾಗಿದ್ದರೂ, ಈ ಬೆಳವಣಿಗೆಯಲ್ಲಿ ಕಂಡುಬಂದ ಲೋಪವೆಂದರೆ ಇದ್ದ ಮಕ್ಕಳಲ್ಲಿ ಯಾವುದೇ ಮಗು ಆಕಸ್ಮಿಕವಾಗಿ ಸತ್ತುಹೋದರೆ ಹೆತ್ತವರು ಹಿಂದೆಂದೂ ಅನುಭವಿಸದಂತಿದ್ದ ಅತೀವ ದುಃಖವನ್ನು ಅನುಭವಿಸತೊಡಗಿದರು. ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ 1940ರ ದಶಕದ ವೇಳೆಗೆ, ಮೊದಲು ಇದ್ದ ಸಾಂಪ್ರದಾಯಿಕ ಪ್ರತಿಕ್ರಿಯೆಗಳಿಗೆ ವ್ಯತಿರಿಕ್ತವಾಗಿ, ಒಂದು ಮಗುವಿನ ಸಾವಿನಿಂದ ಚೇತರಿಸಿಕೊಂಡ ದಾಂಪತ್ಯವೇ ಇಲ್ಲ ಎನ್ನಬಹುದು.[76] ಕಡಿಮೆ ಜನನ ಪ್ರಮಾಣಕ್ಕೆ ಹೆಚ್ಚಿನ ಪ್ರತಿರೋಧ ಎದುರಾಯಿತು; ಎರಡನೆ ಮಹಾಯುದ್ಧದ ಅನಂತರ ಕಂಡುಬಂದ ಸಮೃದ್ಧಿಯು ಪಾಶ್ಚಾತ್ಯ ಸಮಾಜಗಳಲ್ಲಿ ಅನಿರೀಕ್ಷಿತವಾಗಿ ಸಂತತಿ ಉತ್ಕರ್ಷಕ್ಕೆ ದಾರಿಮಾಡಿತು; ಇದು ಹೆಚ್ಚಿನವರು ಕೇವಲ ಒಂದು ಅಥವಾ ಎರಡು ಮಕ್ಕಳಲ್ಲಿ ಸಂತೋಷವನ್ನು ಕಾಣಲು ಇನ್ನೂ ಸಿದ್ಧರಾಗಿರಲಿಲ್ಲ ಎಂಬುದನ್ನು ತೋರಿಸಿತು. 1970ರ ದಶಕದ ವೇಳೆಗೆ ಕೊನೆಯಾಗುತ್ತಾ ಬಂದ ಸಂತಾನ ಉತ್ಕರ್ಷ ಕಾಲವು ಸಣ್ಣ ಕುಟುಂಬಗಳ ಬಗೆಗೆ ಹೆಚ್ಚಿನ ಒಲವನ್ನೂ ಮಕ್ಕಳನ್ನು ಪಡೆಯಬೇಕೆ ಬೇಡವೇ ಎಂಬ ಬಗೆಗೆ ಹೊಸ ಅನಿಶ್ಚಿತತೆಯನ್ನೂ ಹುಟ್ಟುಹಾಕಿತು. ಅದರಲ್ಲಿಯೂ ಮುಖ್ಯವಾಗಿ ಬಳಕೆದಾರ ಸಂಸ್ಕೃತಿಗೆ, ವಿಲಾಸಿ ಜೀವನಕ್ಕೆ ಒಗ್ಗಿಹೋದ, ಗಂಡಹೆಂಡತಿ ಇಬ್ಬರೂ ದುಡಿಯುತ್ತಿದ್ದ ಮಧ್ಯಮವರ್ಗದ ಕುಟುಂಬಗಳಲ್ಲಿ 'ಮಕ್ಕಳೇ ಬೇಡ' ಎಂಬ ಭಾವನೆ ಕಾಣಿಸಲು ತೊಡಗಿದ್ದನ್ನು

[76] *Stearns, American Cool.*

ಸೂಚಿಸುತ್ತದೆ.[77] ಇಪ್ಪತ್ತೊಂದನೆಯ ಶತಮಾನದ ಪ್ರಾರಂಭದ ವೇಳೆಗೆ ಬರುವಷ್ಟರಲ್ಲಿ ಹಲವು ಸಮಾಜಗಳಲ್ಲಿ ಪ್ರಚಲಿತ ಜನಸಂಖ್ಯೆಯನ್ನು ಕಾಪಾಡಿಕೊಳ್ಳಲು ಬೇಕಾದಷ್ಟು ಜನನ ಪ್ರಮಾಣವೂ ಇರಲಿಲ್ಲ. ಶಾಲಾ ಶಿಕ್ಷಣ ಕೂಡ ಕೊನೆಗೆ ತನ್ನದೇ ಆತಂಕಗಳನ್ನು ಹೊಂದಿತ್ತು .ಈ ವಿದ್ಯಮಾನವು ಸಾರ್ವತ್ರಿಕವಾಗತೊಡಗಿದಂತೆ ಮತ್ತು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಮೌಲ್ಯಮಾಪನದಂತಹ ಹೊಸ ಅಂಶಗಳನ್ನು ಅದಕ್ಕೆ ಸೇರಿಸತೊಡಗಿದಂತೆ, ಮಕ್ಕಳ ಮೇಲೆ ಇದರ ಪರಿಣಾಮದ ಬಗೆಗೆ ಮತ್ತು ಹತೋಟಿಯ ಬಗೆಗೆ ಪೋಷಕರು ಸ್ವಲ್ಪ ಕಳವಳ ವ್ಯಕ್ತಪಡಿಸತೊಡಗಿದರು. ಮಕ್ಕಳಿಗೆ ಹೆಚ್ಚಿನ ಬೌದ್ಧಿಕ ಹೊರೆಯನ್ನು ಹೊರಿಸುವುದು ಅವರ ಬೆಳವಣಿಗೆಗೆ ಸೂಕ್ತವಾದುದಲ್ಲ ಎಂಬ ನಂಬಿಕೆಯ ಮೇಲೆ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಮಕ್ಕಳು ಮನೆಯಲ್ಲಿ ಮಾಡಬೇಕಾದ ಶೈಕ್ಷಣಿಕ ಕೆಲಸಗಳನ್ನು (ಹೋಂ ವರ್ಕ್) ಅವರಿಗೆ ಕೊಡುವ ವಿರುದ್ಧವಾಗಿ ಒಂದು ದೀರ್ಘಕಾಲೀನ ಅಭಿಯಾನ ನಡೆಯಿತು. ಮಕ್ಕಳಿಗೆ ಎಷ್ಟರ ಮಟ್ಟಿಗೆ ಶಾಲಾ ಒತ್ತಡ ಸೂಕ್ತ ಎಂಬುದರ ಬಗೆಗೆ ಚರ್ಚೆ ಇಪ್ಪತ್ತೊಂದನೆಯ ಶತಮಾನದ ಆರಂಭಕಾಲದಲ್ಲೂ ನಡೆಯುತ್ತಲೇ ಇದೆ.

ಪಶ್ಚಿಮದಲ್ಲಿ ಈ ವಿಷಯಗಳಲ್ಲಿ ಕಂಡುಬಂದ ಹೊಂದಾಣಿಕೆ ಮತ್ತು ಹಿಂಜರಿಕೆಗಳ ಕುತೂಹಲಕಾರಿ ಲಕ್ಷಣಗಳಿಗಿಂತಲೂ ಹೆಚ್ಚು ಮಹತ್ವದ ವಿಷಯವೆಂದರೆ ಜಗತ್ತಿನ ಇತರ ಭಾಗಗಳಲ್ಲಿ ಬಾಲ್ಯಾವಸ್ಥೆಯ ಆಧುನಿಕ ಮಾದರಿಯು ಹೇಗೆ ಪಸರಿಸಿತು ಎಂಬುದು. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗಕ್ಕೆ ಬಂದಂತೆ, ಇತರ ಹಲವು ದೇಶಗಳು ಪಾಶ್ಚಾತ್ಯ ಮಾದರಿಯನ್ನು ಅನುಸರಿಸತೊಡಗಿದವು. ಅದರೆ ಸಂಪನ್ಮೂಲಗಳ ಕೊರತೆ ಮತ್ತು ಹೆಚ್ಚಿನ ಗ್ರಾಮೀಣ ಜನಸಂಖ್ಯೆಯಿಂದಾಗಿ ಅವರಿಗೆ ಅದರ ಅನುಷ್ಠಾನದಲ್ಲಿ ತೊಡಕಾಯಿತು. ದಕ್ಷಿಣ ಅಮೆರಿಕದ ಹಲವು ದೇಶಗಳು ತಮ್ಮ ಶಾಲಾ ವ್ಯವಸ್ಥೆಗಳನ್ನು ವಿಸ್ತರಿಸುವ ಪ್ರಯತ್ನ ಮಾಡಿದವು. ಇಲ್ಲಿ ಹುಟ್ಟಿಕೊಂಡ ಮಧ್ಯಮವರ್ಗವು ಬಾಲ್ಯ ಮತ್ತು ಯೌವನವನ್ನು ಪ್ರಶ್ನಾತೀತವಾಗಿ ಶಿಕ್ಷಣದೊಂದಿಗೆ ಬೆಸೆಯಿತು. [78] ಪಶ್ಚಿಮದ ದೇಶಗಳನ್ನು ಹೊರತುಪಡಿಸಿದರೆ ಬಾಲ್ಯವನ್ನು ಆಧುನಿಕೀಕರಿಸುವಲ್ಲಿ ಮುಂದಡಿಯಿಟ್ಟ ದೇಶವೆಂದರೆ ಜಪಾನ್. ಮೈಜಿ ಯುಗದ ಮೊದಲ ಕೆಲವು ಸುಧಾರಣಾಕ್ರಮಗಳ ಭಾಗವಾಗಿ 1872ರಲ್ಲಿ ಜಾರಿಗೆ ಬಂದ ಕಾನೂನು, ಪ್ರಾಥಮಿಕ ಶಿಕ್ಷಣವನ್ನು ಹುಡುಗಿಯರೂ ಸೇರಿದಂತೆ ಎಲ್ಲರಿಗೂ ದೊರಕುವಂತೆ ಸಾರ್ವತ್ರೀಕರಿಸಿತು. ಅನುಷ್ಠಾನದ ಹಂತದಲ್ಲಿ ಶಿಕ್ಷಣವು ನಿಜವಾಗಿಯೂ ಸಾರ್ವತ್ರೀಕರಣಗೊಳ್ಳಲು ಎರಡು ದಶಕಗಳು ಹಿಡಿದವು. ಹದಿಹರೆಯದವರು ಸಂಪೂರ್ಣವಾಗಿ ಶಾಲಾ ವ್ಯಾಪ್ತಿಗೆ ಬರಲು ಅದಕ್ಕಿಂತಲೂ ಹೆಚ್ಚಿನ ಸಮಯ ಹಿಡಿಯಿತು. ಮಧ್ಯಮ ಮತ್ತು ಮೇಲ್ವರ್ಗದ ಮಕ್ಕಳಿಗೆ ಮಾಧ್ಯಮಿಕ ತರಬೇತಿ ಲಭ್ಯವಾಗತೊಡಗಿತು. ಜಪಾನಿನ ಆರಂಭದ ಕೈಗಾರಿಕೆಗಳು ವೆಚ್ಚ ಕಡಿಮೆ ಎಂಬ ಕಾರಣಕ್ಕೆ ಹೆಣ್ಣುಮಕ್ಕಳನ್ನು ಒಳಕೊಂಡಂತೆ ಹದಿಹರೆಯದ ಮಕ್ಕಳ ದುಡಿಮೆಯನ್ನು ಅತಿಯಾಗಿ ಅವಲಂಬಿಸಿದ್ದವು. ಆದರೆ ಇಪ್ಪತ್ತನೆಯ ಶತಮಾನಕ್ಕೆ ಬಂದAತೆ ಬಾಲ್ಯವನ್ನು ಶಿಕ್ಷಣದೊಂದಿಗೆ ಬೆಸೆಯುವ ಪದ್ಧತಿಯು ನಿಧಾನಕ್ಕೆ ಹೆಚ್ಚಾಗತೊಡಗಿತು. ಇದರಿಂದಾಗಿ ಮಾಧ್ಯಮಿಕೋತ್ತರ

[77] *Michael Young and Peter Willmott, The Symmetrical Family (New York: Pantheon Books, 1973).*

[78] *Tobias Hecht, ed., Minor Omissions: Children in Latin American History and Society (Madison: University of Wisconsin Press, 2002).*

ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಕೂಡ ಹೆಚ್ಚಾಯಿತು. ಇದಕ್ಕೆ ಪೂರಕವಾಗಿ, ಕಾನೂನುಕ್ರಮಗಳು ಕೂಡ ಕ್ರಮೇಣವಾಗಿ ಬಾಲ ಕಾರ್ಮಿಕ ಪದ್ಧತಿಯನ್ನು ಮತ್ತು ಅನಂತರ ಹದಿಹರೆಯದವರನ್ನು ದುಡಿಮೆಗೆ ಹಚ್ಚುವುದನ್ನು ನಿಷೇಧಿಸಿದವು. ಸುಧಾರಣಾ ಕಾಲದ ಆರಂಭದಿಂದಲೇ, ಸಾರ್ವಜನಿಕ ಆರೋಗ್ಯ ಕ್ರಮಗಳ ಕಟ್ಟುನಿಟ್ಟಿನ ಅನುಷ್ಠಾನದಿಂದಾಗಿ ಮಕ್ಕಳ ಮರಣ ಪ್ರಮಾಣ ಕೂಡ ಕಡಿಮೆಯಾಗತೊಡಗಿತು. ಆಧುನಿಕ ಬಾಲ್ಯದ ಮೂರನೆಯ ಹಂತ, ಅಂದರೆ ಜನನ ಪ್ರಮಾಣದಲ್ಲಿನ ಇಳಿತ ಕ್ರಮೇಣವಾಗಿ ಸಾಧ್ಯವಾಯಿತು. ಜನನ ಪ್ರಮಾಣದ ಇಳಿಕೆಯ ಕುರಿತಂತೆ ಸರಕಾರದ ಸಂಪೂರ್ಣ ಬದ್ಧತೆ ಪ್ರಾರಂಭವಾದದ್ದು ಎರಡನೆಯ ಮಹಾಯುದ್ಧದ ಅನಂತರ. ಇತರ ಪಾಶ್ಚಾತ್ಯ ಸಮಾಜಗಳಿಗಿಂತ ಭಿನ್ನವಾಗಿ ಜನನ ಪ್ರಮಾಣವನ್ನು ಇಳಿಸಲು ಜಪಾನ್ ಸಾಕಷ್ಟು ಕಾಲ ಗರ್ಭಪಾತವನ್ನು ನೆಚ್ಚಿಕೊಂಡಿತ್ತು.[79]

ನಾವು ಈಗಾಗಲೇ ನೋಡಿದ ಹಾಗೆ ಜಪಾನಿನಲ್ಲಿ ಆಧುನಿಕ ಬಾಲ್ಯಾವಸ್ಥೆಯ ಮಾದರಿಗಳಲ್ಲಿ ಅದ ಪರಿವರ್ತನೆಯು, ಅದರ ಮೂರು ಪ್ರಮುಖ ಲಕ್ಷಣಗಳನ್ನು ಮೀರಿ ಬೆಳೆದಿತ್ತು. ಇದು ಪರಿವರ್ತನೆಯ ಮೇಲೆ ಅಗಾಧವಾದ ಪರಿಣಾಮಗಳನ್ನು ಬೀರಿತ್ತು. ಶಾಲಾಶಿಕ್ಷಣದ ಬಗೆಗೆ ಹೆಚ್ಚಿದ ಗಮನ ಮತ್ತು ವಿಶಾಲವಾದ ಪಾಶ್ಚಾತ್ಯ ಮಾದರಿಗಳನ್ನು ಕುರಿತಂತೆ ಉಂಟಾದ ಅರಿವಿನ ಕಾರಣದಿಂದಾಗಿ ಹಲವು ಸುಧಾರಕರು ಬಾಲ್ಯವನ್ನು ಹಿಂದೆಂದಿಗಿಂತಲು ಭಿನ್ನವಾಗಿ, ಅದನ್ನು ಜೀವನದ ಒಂದು ಪ್ರಮುಖ ಘಟ್ಟವನ್ನಾಗಿ ಪರಿಗಣಿಸಿದರು. ಮಕ್ಕಳನ್ನು ನೋಡುವ ದೃಷ್ಟಿಕೋನ ಬದಲಾಗಿ, ಅವರ ಕಲಿಕಾ ಸಾಮರ್ಥ್ಯದ ಬಗೆಗೆ ಹೆಚ್ಚಿನ ಆಸ್ಥೆ ಬೆಳೆಯಿತು. ಸಮಾಜವು ಮಕ್ಕಳ ಶಿಕ್ಷಣ ಮತ್ತು ಬೌದ್ಧಿಕ ಬೆಳವಣಿಗೆಗೆ ಸಂಬಂಧಪಟ್ಟಂತೆ ಹೆಚ್ಚಿನ ಗಮನವನ್ನು ಹರಿಸಬೇಕಾದ ಅಗತ್ಯವನ್ನು ಮನಗಂಡಿತು. ಮಕ್ಕಳು ಬಹಳ ಸೂಕ್ಷ್ಮ ಹಾಗಾಗಿ ಬೇಗನೆ ಘಾಸಿಗೆ ಒಳಗಾಗುತ್ತಾರೆ ಎಂಬ ಅಭಿಪ್ರಾಯ ಹುಟ್ಟಿತು. ಮಿತ್ಸುಕುರಿ ಶುಹೈ 1874ರಷ್ಟು ಹಿಂದೆಯೇ ಹೀಗೆ ಹೇಳಿದ್ದರು:[80]

> ಶೈಶವವು ಕಳೆದು ಆರು ಅಥವಾ ಏಳು ವರ್ಷ ವಯಸ್ಸಾಗುವವರೆಗೆ ಮಕ್ಕಳ ಮನಸ್ಸು ನಿಷ್ಕಲ್ಮಶವಾಗಿರುತ್ತದೆ; ಅವರ ಗುಣ ಶುದ್ಧ ಮುತ್ತಿನಂತೆ ಅಕಳಂಕವಾಗಿರುತ್ತದೆ. ಆ ವಯಸ್ಸಿನಲ್ಲಿ ಮಕ್ಕಳ ಕಣ್ಣು ಮತ್ತು ಕಿವಿಗೆ ಏನು ಬೀಳುತ್ತದೋ, ಅದು ಒಳ್ಳೆಯದಾಗಿರಬಹುದು ಅಥವಾ ಕೆಟ್ಟದಾಗಿರಬಹುದು- ಅದು ಅವರ ಮೇಲೆ ಆಳವಾದ, ಕೊನೆಗಾಲದವರೆಗೂ ಅಳಿಸಲಾಗದಂತಹ ಪರಿಣಾಮ ಬೀರುತ್ತದೆ. ಹಾಗಾಗಿ ಎಳವೆಯಲ್ಲಿ ಅವರ ಸ್ವಭಾವವನ್ನು ತಿದ್ದುವ ಮತ್ತು ನಡತೆಯನ್ನು ತರಬೇತುಗೊಳಿಸುವ ಉತ್ತಮ ಅವಕಾಶ ಇರುತ್ತದೆ. ಮಕ್ಕಳ ತರಬೇತಿಯ ವಿಧಾನಗಳು ಸೂಕ್ತವಾಗಿದ್ದರೆ ಅವರು ವಿದ್ಯಾವಂತರೂ, ಗುಣವಂತರೂ ಆಗಿ ಬೆಳೆಯುತ್ತಾರೆ, ತರಬೇತಿಯ ವಿಧಾನಗಳು ಸೂಕ್ತವಾಗಿಲ್ಲದಿದ್ದರೆ ಅವರು ದಡ್ಡರೂ, ಮತಾಂಧರೂ ಆಗುತ್ತಾರೆ.

ಈ ಮೇಲಿನ ಕಾಣ್ಕೆಯಲ್ಲಿ ತಂದೆತಾಯಿಗಳನ್ನೂ ಒಳಕೊಂಡಂತೆ ಹಿರಿಯರ ಜವಾಬ್ದಾರಿಗಳು ಮಹತ್ತರವಾದದ್ದಾಗಿ ಕಾಣಿಸುತ್ತವೆ. "ಮಕ್ಕಳಲ್ಲಿ ಸನ್ನಡತೆ ಮತ್ತು

[79] *Ronald Philip Dore and Reinhard Bendix, Aspects of Social Change in Modern Japan (Princeton: Princeton University Press, 1967), esp. chapters 3 and 4.*
[80] *Mitsukuri Shuhei, "On Education," in Merioku Zasshi, Journal of Japanese Enlightment, trans. William Braisted (Tokyo, 1976), 106; see Platt, "Japanese Childhood."*

ಶ್ರದ್ಧೆಯ ಅಭ್ಯಾಸಗಳು ಬೆಳೆಯುತ್ತವೆಯೋ ಅಥವಾ ದುರ್ನಡತೆ ಮತ್ತು ಸೋಮಾರಿತನದ ಅಭ್ಯಾಸಗಳು ಬೆಳೆಯುತ್ತವೆಯೋ ಎಂಬುದನ್ನು ಹೆತ್ತವರ ಮತ್ತು ಶಿಕ್ಷಕರ ವರ್ತನೆಯ ಮಾದರಿಗಳು ನಿರ್ಧರಿಸುತ್ತವೆ,"[81] ಎಂದು 1876ರಲ್ಲಿ ಪ್ರಕಟವಾದ ಶಿಕ್ಷಕರ ಕೈಪಿಡಿ ಹೇಳುತ್ತದೆ. ಈ ನಂಬಿಕೆಗಳು ಮಕ್ಕಳ ಲಾಲನೆ ಪಾಲನೆ ಕುರಿತಂತೆ ಪರಿಣತರು ಹಲವಾರು ಕೈಪಿಡಿಗಳನ್ನು ಬರೆಯಲು ಕಾರಣವಾಯಿತು. ತಂದೆತಾಯಿಗಳು ಪಾಲಿಸಿಕೊಂಡು ಬಂದ ಸಂಪ್ರದಾಯಗಳು ಮತ್ತು ಅವರ ಪ್ರವೃತ್ತಿಗಳು ಮಾತ್ರ ಸಾಕಾಗುತ್ತಿರಲಿಲ್ಲ. ವಿಶೇಷ ಆಟದ ಮೈದಾನಗಳು ಮತ್ತು ಮಕ್ಕಳ ಚಟುವಟಿಕೆಗಳು ಈ ಕಾರಣದಿಂದಾಗಿ ಪ್ರಾರಂಭವಾದವು. ಜಪಾನ್ ಪಾಶ್ಚಿಮಾತ್ಯ ದೇಶಗಳನ್ನು ಅತಿ ಬೇಗನೆ ಅನುಸರಿಸಿ, ವಯಸ್ಕರಿಗಿಂತ ಭಿನ್ನವಾಗಿ, ಬಾಲಪರಾಧಿಗಳಿಗಾಗಿಯೇ ವಿಶೇಷ ಕಾನೂನುಗಳನ್ನು, ನ್ಯಾಯಾಲಯದ ಪ್ರಕ್ರಿಯೆಗಳನ್ನು ಮತ್ತು ದಂಡನೆಗಳನ್ನು ಜಾರಿಗೊಳಿಸಿತು. ಆಧುನಿಕ ಬಾಲ್ಯಕ್ಕೆ ಕಾಲಿಡುವ ಸಂದರ್ಭದಲ್ಲಿ ಹಲವಾರು ಸಾಂಪ್ರದಾಯಿಕ ನಂಬಿಕೆಗಳನ್ನು ಬದಿಗಿಡಬೇಕಾಗಿತ್ತು.

ಜಪಾನ್ ಮಕ್ಕಳನ್ನು ಕುರಿತಂತೆ ತನ್ನ ನಿಲುವಿನಲ್ಲಿ ಸಂಪೂರ್ಣವಾಗಿ ಪಶ್ಚಿಮವನ್ನು ಅನುಸರಿಸಲಿಲ್ಲ. ನಾವು ಆಧುನಿಕೀಕರಣ ಮತ್ತು ಪಶ್ಚಿಮದ ಅನುಕರಣೆಗಳ ನಡುವಿನ ಭಿನ್ನತೆಯನ್ನು ಗುರುತಿಸುವುದು ಅಗತ್ಯ. ಪಾಶ್ಚಾತ್ಯ ಶೈಕ್ಷಣಿಕ ಮೌಲ್ಯಗಳ ಬದಲಿಗೆ ವಿಧೇಯತೆ ಮತ್ತು ಸಾಮುದಾಯಿಕವಾಗಿ ಕೆಲಸಮಾಡುವ ಲಕ್ಷಣಗಳ ಮೇಲೆ ಹೆಚ್ಚಿನ ಒತ್ತನ್ನು ನೀಡಿದ ಜಪಾನ್ ಸರ್ಕಾರವು 1880ರ ದಶಕದ ವೇಳೆಗೆ ಪಶ್ಚಿಮದ ರೀತಿನೀತಿಗಳನ್ನು ಸಂಪೂರ್ಣವಾಗಿ ಅನುಸರಿಸುವುದನ್ನು ಕೈಬಿಟ್ಟಿತು.[82] ಪಾಶ್ಚಾತ್ಯ ಸಮಾಜಗಳಿಗಿಂತ ಭಿನ್ನವಾಗಿ ಜಪಾನೀ ಸಂಸ್ಕöÈತಿಯಲ್ಲಿ ಸಾಮುದಾಯಿಕವಾಗಿ ಕೆಲಸಮಾಡುವ ದೃಷ್ಟಿಯಿಂದ ಮಕ್ಕಳನ್ನು ಲಜ್ಜೆಗೊಳಪಡಿಸುವುದು ಅವರನ್ನು ಬೆಳೆಸುವ ಮತ್ತು ಶಿಕ್ಷಣವನ್ನು ನೀಡುವ ಪ್ರಕ್ರಿಯೆಯಲ್ಲಿ ಅತಿ ಮುಖ್ಯವಾಗಿತ್ತು. ಸಂಪೂರ್ಣವಾಗಿ ಪಶ್ಚಿಮವನ್ನು ಅನುಸರಿಸುವುದಕ್ಕೆ ಪ್ರತಿಯಾಗಿ ಜಪಾನೀ ಸಂಸ್ಕೃತಿಯಲ್ಲಿ ಮುಖ್ಯವಾದ ಸಾಮ್ರಾಟ ಮತ್ತು ರಾಷ್ಟ್ರಕ್ಕೆ ಬದ್ಧತೆಯನ್ನು ಬೆಳೆಸುವ ಎಚ್ಚರದ ಕ್ರಮಗಳು ಎರಡನೆ ಮಹಾಯುದ್ಧದ ಅನಂತರ ಕಡಿಮೆಯಾದವು ಅಥವಾ ಮಾಯವಾದವು, ಆದರೆ ಸಮುದಾಯ ನಿಷ್ಠೆಯ ಮೌಲ್ಯಗಳು ಮುಂದುವರಿದುಕೊಂಡು ಬಂದವು. ಜಪಾನ್ ದೇಶವು ತನ್ನ ವಿಶಿಷ್ಟ ಗುಣಲಕ್ಷಣಗಳನ್ನು ಉಳಿಸಿಕೊಂಡು ಸಂಪೂರ್ಣವಾಗಿ ಮತ್ತು ಯಶಸ್ವಿಯಾಗಿ ಬಾಲ್ಯಾವಸ್ಥೆಯನ್ನು ಆಧುನಿಕೀಕರಣಗೊಳಿಸಿದ ಒಂದು ಪ್ರಮುಖ ಉದಾಹರಣೆಯಾಗಿತ್ತು ಮತ್ತು ಈಗಲೂ ಹಾಗೆಯೇ ಇದೆ.

ಪಾಶ್ಚಾತ್ಯ ದೇಶಗಳ ಹೊರಗೆ, ಜಾಗತಿಕ ಜನಸಂಖ್ಯೆಯ ಅತಿ ಹೆಚ್ಚು ಭಾಗದ ಮೇಲೆ ಪ್ರಭಾವ ಬೀರುವಂತೆ, ಬಾಲ್ಯವನ್ನು ಆಧುನಿಕೀಕರಿಸುವ ನಿಟ್ಟಿನಲ್ಲಿ ನಡೆದ ಪ್ರಮುಖ ಪರಿವರ್ತನೆಯಲ್ಲಿ ಮಾರ್ಕ್ಸ್ ವಾದಿ ಕ್ರಾಂತಿಕಾರಿಗಳ ಬದ್ಧತೆಯ ಪಾತ್ರ ಅತಿಶಯವಾಗಿದ್ದುದು ಮೊದಲು ರಷ್ಯಾದಲ್ಲಿ, ಅನಂತರ ಅದು ಚೀನಾ ಮತ್ತು ಇತರ

---

[81] *Aoki Sukekiyo, quoted in Mark Lincicome, Principles, Praxis, and the Politics of Educational Reform in Meiji Japan (Honolulu: University of Hawaii Press, 1995), 37.*

[82] *Stearns, Schools and Students.*

ಕಡೆ ಕಂಡುಬರುತ್ತದೆ. ಪಾಶ್ಚಾತ್ಯರ ಇತರ ಪದ್ಧತಿಗಳು ಮತ್ತು ಮೌಲ್ಯಗಳ ಬಗೆಗೆ ರಷ್ಯನ್ ಕ್ರಾಂತಿಕಾರಿಗಳಿಗೆ ಎಷ್ಟೇ ವಿರೋಧವಿದ್ದರೂ ಅವರು ಶಿಕ್ಷಣವು ಬಾಲ್ಯಾವಸ್ಥೆಯ ಅಪೇಕ್ಷಣೀಯ ಸ್ಥಿತಿಯಾಗಿರಬೇಕು ಎಂಬ ಪಾಶ್ಚಾತ್ಯ ನಿಲುವನ್ನು ಪ್ರಶ್ನಿಸಲಿಲ್ಲ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದ ವೇಳೆಗೆ ರಷ್ಯನ್ ಶಿಕ್ಷಣ ವ್ಯವಸ್ಥೆಯು ವಿಸ್ತಾರಗೊಳ್ಳತೊಡಗಿತ್ತು. ಈ ನಿಟ್ಟಿನಲ್ಲಿ ಕೈಗಾರಿಕಾ ಅಭಿವೃದ್ಧಿ ಮತ್ತು ರಾಜಕೀಯ ಏಳ್ಗೆಯ ಮೂಲ ಆವಶ್ಯಕತೆಯಾಗಿ ಶಿಕ್ಷಣವನ್ನು ಸಾರ್ವತ್ರೀಕರಿಸಲು ಕ್ರಾಂತಿಕಾರಿ ಆಡಳಿತವು ಬಹುವಾಗಿ ಶ್ರಮಿಸಿತು. ಮಕ್ಕಳು ಮತ್ತು ಹದಿಹರೆಯದವರನ್ನು, ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ, ದುಡಿಮೆಯಲ್ಲಿ ತೊಡಗಿಸಿಕೊಳ್ಳುವ ಪದ್ಧತಿ ಇನ್ನೂ ಇದ್ದರೂ, ತಂದೆತಾಯಿಗಳು ಶಾಲಾಭ್ಯಾಸ ಎನ್ನುವುದು ಬಾಲ್ಯಾವಸ್ಥೆಯ ಸಹಜ ಸ್ಥಿತಿ ಎಂಬ ವಿಚಾರಕ್ಕೆ ಹೆಚ್ಚುಹೆಚ್ಚಾಗಿ ಹೊಂದಿಕೊಂಡರು. ಮಾರ್ಕ್ಸ್ ವಾದಿ ನೌಕರಶಾಹಿ ಅಥವಾ ಮಧ್ಯಮವರ್ಗವು ತಮ್ಮ ಮಕ್ಕಳ ಶೈಕ್ಷಣಿಕ ಸಾಧನೆಗೆ ಬೆಂಬಲವಾಗಿ ನಿಲ್ಲತೊಡಗಿತು. ಮಾರ್ಕ್ಸಿಸ್ಟ್ ಆಡಳಿತವು ಮಕ್ಕಳ ಮರಣಪ್ರಮಾಣವನ್ನು ಕಡಿಮೆಗೊಳಿಸುವ ಪ್ರಯತ್ನಗಳನ್ನು ಬೆಂಬಲಿಸಿತು; ಅದರಲ್ಲಿ ಸಾಕಷ್ಟು ಯಶಸ್ವಿಯೂ ಆಯಿತು. ಜನನ ಪ್ರಮಾಣದ ಬಗೆಗೆ 1920ರ ದಶಕದಲ್ಲಿ ಸಾಕಷ್ಟು ಬಿರುಸಿನ ಚರ್ಚೆಗಳು ನಡೆದವು; ಹಲವು ಮಹಿಳಾ ಗುಂಪುಗಳು ನಿರ್ಬಂಧವನ್ನು ಜಾರಿಗೆ ತರುವುದನ್ನು ಪ್ರತಿಪಾದಿಸಿದವು. ಸ್ಟಾಲಿನ್ ಸರ್ಕಾರವು 1930ರ ದಶಕದಲ್ಲಿ ಹೆಚ್ಚು ಜನನಪರ ನೀತಿಯ ಕಡೆಗೆ ಹಿಂತಿರುಗಿತು. ಆದರೆ ಕೈಗಾರಿಕಾ ಸಮಾಜದ ಒತ್ತಡಗಳು, ಶಾಲಾ ಶಿಕ್ಷಣದ ವೆಚ್ಚ ಮತ್ತು ಕೆಲಸದ ಮೇಲಿನ ನಿರ್ಬಂಧಗಳು ರಷ್ಯಾವನ್ನು ಪಾಶ್ಚಾತ್ಯ ದೇಶಗಳು ತುಳಿದ ದಾರಿಯನ್ನೇ ತುಳಿಯುವಂತೆ ಮಾಡಿದುವು. ತತ್ಪರಿಣಾಮವಾಗಿ ಜನನದ ಪ್ರಮಾಣದಲ್ಲಿ ಗಣನೀಯ ಇಳಿಕೆ ಕಂಡುಬಂದಿತು. ಜಪಾನಿನಲ್ಲಿ ಇದ್ದಂತೆಯೇ ಇಲ್ಲಿಯೂ ಜನನ ನಿಯಂತ್ರಣಕ್ಕೆ ಗರ್ಭಪಾತವನ್ನು ಸಾಕಷ್ಟು ಅವಲಂಬಿಸಲಾಗಿತ್ತು.[83]

ಚೀನಾ 1949ರ ಪ್ರಕ್ರಿಯೆಯನ್ನು ಅನುಸರಿಸಿಕೊಂಡು ಇದೇ ದಿಕ್ಕಿನಲ್ಲಿ ಮುಂದುವರಿಯಿತು. ಅಗ್ಗದ ದುಡಿಮೆಗಾಗಿ ಮಕ್ಕಳನ್ನು ಬಹುವಾಗಿ ಶೋಷಿಸುತ್ತಿದ್ದರೂ, ಮಕ್ಕಳು ಹದಿಹರೆಯ ತಲುಪುವ ತನಕವಾದರೂ ಅವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗೆ ಸೇರಿಸತೊಡಗಿದರು. ಆಧುನಿಕ ಆರ್ಥಿಕತೆಯನ್ನು ಬಲಪಡಿಸಲು ಅಗತ್ಯವಾದ ಕೌಶಲಗಳನ್ನು ಬೆಳೆಸಲು ಮತ್ತು ಮಾರ್ಕ್ಸ್ ವಾದಿ ಸಿದ್ಧಾಂತಗಳ ಬೀಜಗಳನ್ನು ಮಕ್ಕಳಲ್ಲಿ ಬಿತ್ತಲು ಶಿಕ್ಷಣವನ್ನು ಬೆಳೆಸುವ ಸುವರ್ಣಾವಕಾಶವನ್ನು ಸರಕಾರ ಬಿಟ್ಟುಕೊಡಲಿಲ್ಲ. ಮಾವೋ ಜೆಡಾಂಗನ ಕಾಲದಲ್ಲಿ ಜನನ ಪ್ರಮಾಣವನ್ನು ಕುರಿತಂತೆ ನಿರ್ದಿಷ್ಟ ನಿಲುವು ಇಲ್ಲದಿದ್ದರೂ, 1970ರ ದಶಕದ ಅಂತ್ಯದ ವೇಳೆಗೆ ನಾಟಕೀಯ ರೀತಿಯಲ್ಲಿ ಮಕ್ಕಳ ಮಿತಿಯನ್ನು ಕುರಿತಂತೆ ಸಾರ್ವಜನಿಕ ನೀತಿ ಜಾರಿಗೆ ಬಂದಿತು. ಇದರ ಮೂಲಕವಾಗಿ ಒಂದಕ್ಕಿಂತ ಹೆಚ್ಚು ಮಕ್ಕಳನ್ನು ಹೆರುವ ಕುಟುಂಬಗಳ ಮೇಲೆ ದಂಡವನ್ನು ವಿಧಿಸುವ ಪದ್ಧತಿ

[83] *Ansley Coale, Barbara Anderson, Ernie Harris, eds., Human Fertility in Russia since the Nineteenth Century (Princeton: Princeton University Press, 1979); Daniel Hoffmann, "Mothers in the Motherland: Stalinist Pronatalism in its PanEuropean Context," Journal of Social History 34 (2000): 35–54.*

ಜಾರಿಗೆ ಬಂದಿತು.[84] ಈ ನೀತಿಯ ಪರಿಣಾಮಗಳು ಕುತೂಹಲಕಾರಿಯಾಗಿದ್ದವು. ಕುಟುಂಬಗಳು ದಾಖಲಿಸಬೇಕಾದ ಮಕ್ಕಳ ಸಂಖ್ಯೆಯ ಮೇಲೆ ನಿರ್ಬಂಧ ಮತ್ತು ಸಾಂಪ್ರದಾಯಿಕವಾಗಿ ಗಂಡುಮಕ್ಕಳ ಬಗೆಗೆ ಹೆಚ್ಚಿನ ಅಭಿಲಾಷೆ ಇದ್ದುದರಿಂದ ಹೆಣ್ಣು ಶಿಶುಗಳ ಹತ್ಯೆಯ ಪ್ರಮಾಣ ಹೆಚ್ಚಾಗತೊಡಗಿತು. ಚೀನಾದ ಅನಾಥಾಶ್ರಮಗಳಲ್ಲಿ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳ ಅನುಪಾತ 8:1ರಷ್ಟು ಇತ್ತು. ಇದು ಒಟ್ಟಾರೆಯಾಗಿ ಚೀನಾದ ಆಧುನಿಕ ಮಾದರಿಯಲ್ಲಿನ ವಿಶಿಷ್ಟವಾದ ತಿರುವು. ಇಲ್ಲಿ ಕಂಡುಬಂದ ಇತರ ಬದಲಾವಣೆಗಳು ಸಾಮಾನ್ಯವಾಗಿ ಬೇರೆಡೆಗಳಲ್ಲಿ ಇದ್ದಂತೆಯೇ ಇದ್ದವು: ಮನೆಯಲ್ಲಿ ಮಕ್ಕಳ ಸಂಖ್ಯೆ ಕಡಮೆಯಾಗುತ್ತಿದ್ದಂತೆ, ಇದ್ದ ಮಗುವಿನ ಮೇಲೆ ಕಕ್ಕುಲಾತಿ ಹೆಚ್ಚಾಗಿ, (ಸಂಪನ್ಮೂಲಗಳ ಲಭ್ಯತೆಯ ಆಧಾರದ ಮೇಲೆ) ಅವರಿಗೆ ಆಟಿಕೆ ಇತ್ಯಾದಿಗಳನ್ನು ಕೊಟ್ಟು ಮುದ್ದು ಮಾಡುವ ಅಭ್ಯಾಸ ಹೆಚ್ಚಾಯಿತು. ಆದರೆ ಇಲ್ಲಿ ಗಮನಿಸಬೇಕಾದ ಅಂಶ ಎಂದರೆ, ಇಲ್ಲಿ ಬಾಲ್ಯದ ಆಧುನಿಕೀಕರಣವು ಔಪಚಾರಿಕ ಕಾನೂನಿನ ಉದ್ದೇಶವಾಗಿರಲಿಲ್ಲ, ಬದಲಿಗೆ, ಅದು ಸಂರಚನೆಯ ಮೇಲೆ ಗಮನವನ್ನು ಕೇಂದ್ರೀಕರಿಸಿತ್ತು.

ಮಕ್ಕಳನ್ನು ಕುರಿತು ಪಾಶ್ಚಿಮಾತ್ಯ ಮತ್ತು ಜಪಾನ್ ದೇಶಗಳಲ್ಲಿ ಇದ್ದ, ಆದರೆ ಅಷ್ಟೇನೂ ಪ್ರಾಮುಖ್ಯವನ್ನು ಪಡೆಯದೆ ಇದ್ದ ಒಂದು ಅಂಶವನ್ನು ಮಾರ್ಕ್ಸ್ ವಾದಿ ಧೋರಣೆಯು ಎತ್ತಿಹಿಡಿಯುತ್ತದೆ. ಅದೇನೆಂದರೆ, ಯುವಕರ ತಂಡಗಳನ್ನು ಕಟ್ಟುವಲ್ಲಿ ಅದಕ್ಕೆ ಇದ್ದ ತೀವ್ರವಾದ ನಿಷ್ಠೆ. ಯೌವನದ ಪ್ರಾಮುಖ್ಯವನ್ನು ಮತ್ತು ಹಾಗೆಯೇ ಅದರ ಪ್ರತ್ಯೇಕತೆಯನ್ನು ಒಪ್ಪಿಕೊಂಡು, ಔಪಚಾರಿಕ ಶಾಲಾ ಶಿಕ್ಷಣದ ವ್ಯಾಪ್ತಿಯಾಚೆಗೆ ಯುವಶಕ್ತಿಯನ್ನು ಸೈದ್ಧಾಂತೀಕರಣಗೊಳಿಸಿ, ಅವರನ್ನು ಶಿಸ್ತುಬದ್ಧಗೊಳಿಸುವ ಉದ್ದೇಶ ಈ ಪ್ರಯತ್ನದ ಹಿಂದೆ ಅಡಕವಾಗಿತ್ತು.[85] ಯೌವನವನ್ನು ಸಂಭ್ರಮಿಸುವ ಜೊತೆಜೊತೆಗೆ ಅದರ ಮೇಲೆ ಕಣ್ಣಾವಲಿಡುವ ಈ ವಿಧಾನದ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದ ಅನಂತರದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹುಟ್ಟಿಕೊಂಡ ಸ್ಕೌಟ್ ಚಳವಳಿಗಳ ಛಾಯೆ ಚಾಚಿತ್ತು. ಯುವಕರನ್ನು ಒಟ್ಟುಗೂಡಿಸುವ ನಿಟ್ಟಿನಲ್ಲಿ ಫ್ಯಾಸಿಸ್ಟ್ ರೀತಿನೀತಿಗಳನ್ನು ಅಳವಡಿಸಿಕೊಳ್ಳುವುದರಲ್ಲಿಯೂ ತರುಣರ ತಂಡ ಹೆಚ್ಚು ಕ್ರಿಯಾಶೀಲವಾಗಿತ್ತು. ಇದು ಆಡಳಿತ ಕಾಲದ ಮುಖ್ಯ ಚಟುವಟಿಕೆಯಾಗಿತ್ತು. ಇಪ್ಪತ್ತೊಂದನೆಯ ಶತಮಾನದ ಆರಂಭವಾದಂತೆ, ಭಾಗಶಃ ಫ್ಯಾಸಿಸಂ ಮತ್ತು ಕಮ್ಯುನಿಸಂನ ಪತನದ ಅನಂತರ, ಯುವಕರನ್ನು ಸಾಂಸ್ಥಿಕವಾಗಿ ಒಗ್ಗೂಡಿಸುವ ಪ್ರಕ್ರಿಯೆ ಜಾಗತಿಕ ನೆಲೆಯಲ್ಲಿ ಕುಂಠಿತವಾದರೂ, ಅದು ಒಂದು ಕುತೂಹಲಕಾರಿಯಾದ ಮತ್ತು ಆಗಾಗ್ಗೆ ತಲೆದೋರುವ ಪ್ರಮುಖ ವಿದ್ಯಮಾನವಾಗಿ ಉಳಿದಿದೆ.

[84] *James Lee and Wang Feng,One Quarter of Humanity: Malthusian Mythology and Chinese Realities, 1700–2000 (Cambridge, MA: Harvard University Press, 1999).*

[85] *Lisa Kirschenbaum, Small Comrades: Revolutionizing Childhood in Soviet Russia, 1917–1932 (New York: Routledge Falmer, 2001); David Macleod, Building Character in the American Boy: The Boy Scouts, the YMCA, and Their Forerunners, 1870–1920 (Madison: University of Wisconsin Press, 1983).*

ಬಾಲ್ಯಾವಸ್ಥೆಯ ಪರಿವರ್ತನೆಗೆ ಶಾಲಾ ಶಿಕ್ಷಣ ಮತ್ತು ಉತ್ತಮ ಆರೋಗ್ಯ ಸೇವೆಯನ್ನು ಕುರಿತು ಮಾರ್ಕ್ಸ್ವಾದಿ ಆಡಳಿತವು ತೋರಿದ ಬದ್ಧತೆಯು ರಷ್ಯಾ, ಚೀನಾಗಳಲ್ಲಷ್ಟೇ ಅಲ್ಲದೆ, ಪೂರ್ವ ಯುರೋಪ್, ವಿಯೆಟ್ನಾಂ, ಕ್ಯೂಬಾ ಮತ್ತು ಇತರೆಡೆ ಕೂಡ ಕಂಡುಬಂದಿತು. ಕಮ್ಯುನಿಸ್ಟ್ ಸರಕಾರಗಳು ಜಾರಿಗೊಳಿಸಿದ ಬದಲಾವಣೆಗಳು ಕಮುನಿಸಂ ತನ್ನ ವರ್ಚಸ್ಸನ್ನು ಕಳೆದಕೊಂಡಾಗ ಕಡಮೆಯಾಗಲಿಲ್ಲ; ಬದಲಿಗೆ, ಈಜಿಪ್ಟ್, ಇರಾಕ್ ಮೊದಲಾದ ದೇಶಗಳು ಅರಬ್ ರಾಷ್ಟ್ರೀಯತೆಯ ಅಡಿಯಲ್ಲಿ, ಅಥವಾ ಬೇರೆ ಯಾವುದೋ ಆಧುನಿಕ ಹೆಸರಿನಲ್ಲಿ, ಹಿಂದೆ ಇದ್ದ ಅದ್ಭುತ ವೇಗದಲ್ಲಿ ಅಲ್ಲವಾದರೂ, ಅದೇ ಹಾದಿಯನ್ನು ತುಳಿದವು. ಪ್ರಾದೇಶಿಕ ವ್ಯತ್ಯಾಸಗಳ ಹೊರತಾಗಿಯೂ, ಹುಡುಗರು ಮತ್ತು ಹುಡುಗಿಯರಿಗೆ ಶಿಕ್ಷಣದ ಅವಕಾಶ ಹೆಚ್ಚಾಗತೊಡಗಿದಂತೆ ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳ ವೇಳೆಗೆ ಜಾಗತಿಕವಾಗಿ ಬಾಲಕಾರ್ಮಿಕರ ಪ್ರಮಾಣದಲ್ಲಿ ಇಳಿಕೆ ಕಂಡುಬರತೊಡಗಿತು. (ಎಷ್ಟೇ ವ್ಯತ್ಯಾಸಗಳು ಉಳಿದಿದ್ದರೂ 2003ರ ಸುಮಾರಿಗೆ ಸಾಕಷ್ಟು ಸ್ಪಷ್ಟಸಾಮ್ಯತೆಗಳು ಕಂಡುಬರುತ್ತವೆ. ಉತ್ತರ ಅಮೆರಿಕಾದಂತೆ ಇರಾನಿನಲ್ಲಿ ಕೂಡ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದವರಲ್ಲಿ 60% ಹುಡುಗಿಯರಿದ್ದರು.) ಮಕ್ಕಳ ಮರಣ ಪ್ರಮಾಣ ಮತ್ತು ಜನನ ಪ್ರಮಾಣದಲ್ಲಿನ ಇಳಿಕೆಯಲ್ಲಿ ಕೂಡ ಇದೇ ಸಾಮ್ಯತೆ ಕಂಡುಬರುತ್ತದೆ: ಬೇರೆ ಬೇರೆ ಪ್ರದೇಶಗಳು ಬೇರೆ ಬೇರೆ ಕಾಲ ಮತ್ತು ವೇಗದಲ್ಲಿ ಮುಂದುವರಿಯುತ್ತಿದ್ದರೂ ಜಾಗತಿಕವಾಗಿ ಎಲ್ಲರೂ ಆಧುನಿಕೀಕರಣದ ಮಾದರಿಯತ್ತ ದಾಪುಗಾಲು ಹಾಕುತ್ತಿರುವುದು ಕಾಣಿಸುತ್ತದೆ.[86]

ಮೊದಲೇ ಇದರ ಸುಳಿವು ಇದ್ದರೂ ಸಹ, ಇಪ್ಪತ್ತನೆಯ ಶತಮಾನದ ಅಂತ್ಯದ ವೇಳೆಗೆ ಜಾಗತೀಕರಣವು ಸಾಕಷ್ಟು ಗಾಢವಾಗಿ ಬಾಲ್ಯದ ಆಧುನಿಕೀಕರಣದ ಮೂಲಮಾದರಿಯ ಮೇಲೆ ಕೆಲವೊಮ್ಮೆ ಪೂರಕವಾಗಿ, ಕೆಲವೊಮ್ಮೆ ವ್ಯತಿರಿಕ್ತವಾಗಿ ಪರಿಣಾಮ ಬೀರತೊಡಗುತ್ತದೆ. ಜಗತ್ತಿನ ಎಲ್ಲಾ ಪ್ರಮುಖ ಪ್ರದೇಶಗಳ ನಡುವೆ ಹೆಚ್ಚಿದ ಸಂವಹನದ ಸಂಕೀರ್ಣ ಮಾದರಿಗಳು ಇದಕ್ಕೆ ಕಾರಣವಾಗಿವೆ. ಈ ಪ್ರಕ್ರಿಯೆಗೆ ಮೂರು ಆಯಾಮಗಳಿವೆ. ಇವುಗಳು ಕಾಕತಾಳೀಯವಾಗಿ ಕೆಲವೊಮ್ಮೆ ಆಧುನಿಕೀಕರಣದ ಪ್ರಸಾರದ ಮಾದರಿಗಳೊಂದಿಗೆ ಕೂಡಿ ಕೆಲಸ ಮಾಡಿದರೆ ಇನ್ನೊಂದು ಸಂದರ್ಭದಲ್ಲಿ (ಕ್ಷೀಣವಾಗಿಯಾದರೂ) ಈ ಪ್ರಕ್ರಿಯೆಯನ್ನು ನೇರವಾಗಿ ಪ್ರೇರೇಪಿಸಿದವು.

ಮೊದಲನೆಯ ಅಂಶ, ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO), ಅಂತಾರಾಷ್ಟ್ರೀಯ ಮಕ್ಕಳ ದತ್ತಿ ಸಂಸ್ಥೆಗಳು ಮತ್ತು ಇತರ ಹಲವು ಸರಕಾರೇತರ ಸೇವಾ ಸಂಸ್ಥೆಗಳು ಮಕ್ಕಳ ಸುರಕ್ಷತೆಯನ್ನು ಕುರಿತಂತೆ ಒಂದು ಜಾಗತಿಕ ಮಾನದಂಡವನ್ನು ಬೆಳೆಸುವ ಪ್ರಯತ್ನವನ್ನು ಪ್ರಾರಂಭಮಾಡಿದವು. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು 1920ನೇ ಇಸವಿಗಿಂತ ಮೊದಲೇ ಮಕ್ಕಳಿಗೆ ಶಾಲಾಭ್ಯಾಸಕ್ಕೆ ಹೆಚ್ಚಿನ ಅವಕಾಶ ಕಲ್ಪಿಸುವ ಉದ್ದೇಶವನ್ನಿಟ್ಟುಕೊಂಡು ಬಾಲಕಾರ್ಮಿಕ ಪದ್ಧತಿಯನ್ನು ಜಾಗತಿಕವಾಗಿ ನಿರ್ಬಂಧಿಸುವುದನ್ನು ಕುರಿತು ಚರ್ಚೆಯನ್ನು ಪ್ರಾರಂಭಮಾಡಿತ್ತು. ಎರಡನೆಯ ಮಹಾಯುದ್ಧದ ಅನಂತರ

[86] *Wolf Schaefer, "Global Patterns in Childhood," Journal of Social History 38 (2005): forthcoming.*

ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮತ್ತು ಇತರ ವಿಶ್ವಸಂಸ್ಥೆಯ ಹಲವು ಅಧೀನ ಸಂಸ್ಥೆಗಳು ಇದೇ ಕಾರ್ಯಸೂಚಿಯನ್ನು ಮುಂದಿಟ್ಟುಕೊಂಡು ಬಾಲ್ಯಾವಸ್ಥೆಯನ್ನು ಒಂದು ಮೂಲಭೂತ ಹಕ್ಕು ಎಂದು ಮರುನಿರೂಪಿಸುವಂತೆ ಒತ್ತಡವನ್ನು ತಂದವು. ಈ ಸಂಸ್ಥೆಗಳು ಶಿಶುಮರಣ ಪ್ರಮಾಣವನ್ನು ಇಳಿಸುವಲ್ಲಿ ಕೂಡ ಕಠಿಣ ಪರಿಶ್ರಮ ಪಟ್ಟವು. 1990ರ ಸುಮಾರಿಗೆ ವಿಶ್ವಸಂಸ್ಥೆಯು ಜನನ ಪ್ರಮಾಣದ ಇಳಿಕೆಗೆ ಸಂಬಂಧಿಸಿದಂತೆ ಸಮಾವೇಶಗಳನ್ನು ಪ್ರಾಯೋಜಿಸತೊಡಗಿತು (ರೋಮನ್ ಕ್ಯಾಥೊಲಿಕ್ ಚರ್ಚು, ಮುಸ್ಲಿಂ ರಾಷ್ಟ್ರಗಳು ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳು ಇದಕ್ಕೆ ಸ್ವಲ್ಪ ಹಿಂಜರಿಕೆ ವ್ಯಕ್ತಪಡಿಸಿದರೂ, ಒಟ್ಟಾರೆಯಾಗಿ ಸಾಮಾನ್ಯ ಒಮ್ಮತದ ಆಧಾರದ ಮೇಲೆ ಈ ದಿಕ್ಕಿನಲ್ಲಿ ಪ್ರಯತ್ನ ಕೈಕೊಳ್ಳಲಾಯಿತು. ಮಹಿಳೆಯರ ಶಿಕ್ಷಣ ಈ ದಿಕ್ಕಿನಲ್ಲಿ ಇಡಬೇಕಾದ ಪ್ರಮುಖ ಹೆಜ್ಜೆಯಾಗಿತ್ತು).[87] ಮಧ್ಯ ಪ್ರಾಚ್ಯ ದೇಶಗಳಲ್ಲಿ ಯುನೆಸ್ಕೊ ತರಹದ ಸಂಸ್ಥೆಗಳು, ತಂದೆತಾಯಿಗಳು ಶಿಕ್ಷಣವನ್ನು ಪ್ರೋತ್ಸಾಹಿಸುವಂತೆ ಮತ್ತು ಮಕ್ಕಳನ್ನು ವ್ಯಕ್ತಿಗಳಂತೆ ಕಾಣಲು ಜಾಹೀರಾತು, ಇತ್ಯಾದಿ ಸಂವಹನ ಸಾಧನಗಳ ಮೂಲಕ ಮಾಹಿತಿಗಳನ್ನು ಪ್ರಸಾರಮಾಡುವ ಪ್ರಯತ್ನಗಳನ್ನು ಮಾಡಿದವು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಬಾಲ್ಯಾವಸ್ಥೆಯ ಆಧುನಿಕೀಕರಣವು ಅದರ ಎಲ್ಲ ಪ್ರಮುಖ ಅಂಶಗಳನ್ನು ಒಳಕೊಂಡಂತೆ ಒಂದು ಜಾಗತಿಕ ಉದ್ಯಮವಾಗಿ ಬೆಳೆಯಿತು.[88]

ಇಲ್ಲಿ ಮಿತಿಗಳು ಖಂಡಿತವಾಗಿಯೂ ಇದ್ದವು. ಜನರನ್ನು, ಮುಖ್ಯವಾಗಿ ಗ್ರಾಮೀಣ ಪ್ರದೇಶದ ಜನರನ್ನು, ಈ ಯಾವ ಪ್ರಯತ್ನಗಳೂ ತಲುಪಲೇ ಇಲ್ಲ. ಇನ್ನು ಹಲವರು ಸಂಪ್ರದಾಯದ ಹೆಸರಿನಲ್ಲಿ ಮೂಲಭೂತ ಬದಲಾವಣೆಗಳಿಗೆ ಪ್ರತಿರೋಧ ಒಡ್ಡಿದರು. ಇಷ್ಟಾಗಿಯೂ ಇನ್ನು ಹಲವರಿಗೆ ಆಧುನಿಕ ಮಾದರಿಯ ಹೊಸ ಆವಿಷ್ಕಾರಗಳು ತಮ್ಮ ಮಕ್ಕಳ ಯಶಸ್ಸನ್ನು ಖಾತರಿಪಡಿಸಬಹುದು ಎಂಬ ಭರವಸೆ ಇದ್ದರೂ, ಮಕ್ಕಳ ಮೇಲಿನ ಹತೋಟಿ ಮತ್ತು ವೈಯಕ್ತಿಕ ಹಿತಾಸಕ್ತಿಗಳ ಬದಲು ಕೌಟುಂಬಿಕ ನಿಷ್ಠೆಯನ್ನು ಉಳಿಸಿಕೊಳ್ಳುವುದು ಹೆಚ್ಚು ಮುಖ್ಯವಾಗಿತ್ತು.[89] ಬಾಲಕಾರ್ಮಿಕರ ಸಂಖ್ಯೆಯಲ್ಲಿ ಕಂಡುಬರುತ್ತಿರುವ ಸತತ ಇಳಿತ ಮತ್ತು ಜನನ ಮತ್ತು ಮರಣ ಪ್ರಮಾಣದಲ್ಲಿನ ಇಳಿಕೆಗಳು ಸಾಕಷ್ಟು ಮಟ್ಟಿನ ಯಶಸ್ಸು ಸಾಧ್ಯವಾಗಿರುವುದನ್ನು ಸಾರಿದವು. ಈ ಜಾಗತಿಕ ಅಭಿಯಾನಗಳು ಯಾವ ಮಟ್ಟಿನ ಯಶಸ್ಸನ್ನು ಸಾಧಿಸಿದವು ಎಂದು ಹೇಳುವುದು ಕಷ್ಟವಾದರೂ, ಜಾಗತಿಕ ಚಳವಳಿಯ ಭಾಗವಾಗಿದ್ದ ಕೆಲವು ಆಶ್ಚರ್ಯಕರ ಹಿಂಜರಿಕೆಗಳು ಎರಡನೆಯ ಮಿತಿಯಾಗಿತ್ತು. 1973ರಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಹದಿನಾರು ವರ್ಷಕ್ಕಿಂತ ಕಡಮೆ ವಯಸ್ಸಿನ ಮಕ್ಕಳನ್ನು ದುಡಿಮೆಯಲ್ಲಿ ತೊಡಗಿಸಿಕೊಳ್ಳುವಂತಿಲ್ಲ ಎಂಬ ಹೊಸ ನೀತಿಯನ್ನುಜಾರಿಗೆ ತರುವುದಕ್ಕೆ ಒಂದು ಸಮಾವೇಶವನ್ನು ಕರೆಯಲು ಉದ್ದೇಶಿಸಿತು.

---

[87] *United Nations, Report of the International Conference on Population and Development (Cairo, 1994).*

[88] *Peter N. Stearns, Global Outrage: The Origins and Evolution of World Opinion (London: OneWorld, forthcoming); Saud Joseph, "Childhood, Citizenship, and Globalization in Lebanon," Journal of Social History 38 (2005): forthcoming.*

[89] *Saud Joseph, "Childhood, Citizenship, and Globalization in Lebanon"; Peter N. Stearns, "Conclusion: Change, Globalization and Childhood," Journal of Social History 38 (2005): forthcoming.*

ಇದನ್ನು ಮಕ್ಕಳ ಹಕ್ಕುಗಳ ಒಂದು ತಾರ್ಕಿಕ ಮುಂದುವರಿಕೆಯೆಂದು ಸಾರಲಾಯಿತು. ಆದರೆ ಈ ನೀತಿಯು ಸಾಕಷ್ಟು ಅಂತಾರಾಷ್ಟ್ರೀಯ ಬೆಂಬಲ ಪಡೆಯುವಲ್ಲಿ ವಿಫಲವಾಯಿತು: ಅಮೆರಿಕಾ ಸಂಯುಕ್ತ ಸಂಸ್ಥಾನದಂತಹ ಕೆಲವು ದೇಶಗಳು, ಈ ರೀತಿಯ ಅಂತಾರಾಷ್ಟ್ರೀಯ ಬದ್ಧತೆಯ ಬಗೆಗೆ ಆತಂಕ ವ್ಯಕ್ತಪಡಿಸಿದವಲ್ಲದೆ ವಲಸೆ (ಮತ್ತು ವಿದೇಶಿ) ಕೃಷಿ ಕಾರ್ಮಿಕರಿಗೆ ಸಂಬಂಧಿಸಿದಂತೆ ಮಕ್ಕಳ ದುಡಿಮೆಯನ್ನು ಸಮರ್ಥನೆ ಮಾಡಿದವು. ಮಕ್ಕಳ ದುಡಿಮೆಯು ರಾಷ್ಟ್ರೀಯ ಹಾಗೂ ಕೌಟುಂಬಿಕ ಆರ್ಥಿಕತೆಗೆ ಮುಖ್ಯ ಎಂಬುದು ಇತರ ಹಲವು ದೇಶಗಳ ಸಾಮಾನ್ಯ ನಂಬಿಕೆಯಾಗಿತ್ತು. ಬಾಲ್ಯಾವಸ್ಥೆಯ ಸಂಪೂರ್ಣ ಆಧುನಿಕ ಮಾದರಿಯು, ಅದರಲ್ಲಿಯೂ ಹದಿಹರೆಯದ ಮಟ್ಟದಲ್ಲಿ ಇನ್ನೂ ಜಾಗತಿಕವಾಗಿ ಸಮ್ಮತಿಯನ್ನು ಪಡೆಯುವ ಹಂತವನ್ನು ತಲುಪಿರಲಿಲ್ಲ. ಇಪ್ಪತ್ತನೆಯ ಶತಮಾನದ ಅಂತ್ಯದ ವೇಳೆಗೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ವ್ಯಾಪ್ತಿಯಲ್ಲಿ ಸಂಕುಚಿತವಾದರೂ, ಪ್ರಮುಖವಾಗಿ ಬಾಲಕಾರ್ಮಿಕ ಪದ್ಧತಿಯ ಅತ್ಯಂತ ವಿಕಾರ ಮುಖಗಳಾದ ಲೈಂಗಿಕ ಶೋಷಣೆ,, ಕೌಟುಂಬಿಕ ಸಾಲ ಮತ್ತು ಇತರ ನೆಪಗಳ ಆಧಾರದ ಮೇಲೆ ಮಕ್ಕಳನ್ನು ಜೀತದ ಆಳುಗಳನ್ನಾಗಿಸುವುದು ಅಥವಾ ಸೈನಿಕ ಸೇವೆಗೆ ಸೇರಿಸುವಂತಹ ಪದ್ಧತಿಗಳನ್ನು ತೊಡೆದುಹಾಕುವ ಪ್ರಯತ್ನ ಮಾಡಿತು. ಹೆಚ್ಚಿನ ರಾಷ್ಟ್ರಗಳು ಈ ಒಡಂಬಡಿಕೆಗೆ ಸಹಿ ಹಾಕಿದರೂ ಅಮೆರಿಕಾ ಸಂಯುಕ್ತ ಸಂಸ್ಥಾನವು ತನ್ನ ಸಾರ್ವಭೌಮತೆಯನ್ನು ಪ್ರಶ್ನಿಸಬಹುದಾದಂತಹ ಯಾವುದೇ ರಾಜಿಗೆ ಸಿದ್ಧವಾಗಿರದ ಕಾರಣಕ್ಕೆ ಸಹಿಹಾಕಲಿಲ್ಲ. ಅಂತಾರಾಷ್ಟ್ರೀಯ ದತ್ತಿ ಸಂಸ್ಥೆಗಳ ಸಹಯೋಗದಲ್ಲಿ ತೃತೀಯ ರಾಷ್ಟ್ರಗಳಲ್ಲಿ ಮಕ್ಕಳ ಆರೋಗ್ಯ ಮತ್ತು ಶಿಕ್ಷಣವನ್ನು ಬಲಪಡಿಸುವ ಕಾರ್ಯಕ್ರಮದೊಂದಿಗೆ ಮಕ್ಕಳ ಹಕ್ಕುಗಳ ಜಾಗತೀಕರಣವು ಒಂದು ನೈಜ ಶಕ್ತಿಯಾಗಿ ಉದಯಿಸಿತು. ಆದರೆ ಅದಕ್ಕೂ ಕೆಲವು ಮಿತಿಗಳಿದ್ದವು.

ಮುಚ್ಚುಮರೆಯಿಲ್ಲದೆ ಹೇಳಬೇಕೆಂದರೆ, ಮಕ್ಕಳ ಮೇಲೆ ಜಾಗತೀಕರಣದ ಎರಡನೆಯ ಪರಿಣಾಮವು, ಆಧುನಿಕೀಕರಣದ ವಿಶಾಲ ಯೋಜನೆಯ ಮೇಲೂ ಮಕ್ಕಳ ಹಕ್ಕುಗಳ ಹೊಸ ಚಳವಳಿಯ ಮೇಲೂ ವ್ಯತಿರಿಕ್ತ ಬೀಳುತ್ತಿದೆ. ಜಾಗತಿಕ ಅರ್ಥವ್ಯವಸ್ಥೆಯು ಬಾಲಕಾರ್ಮಿಕ ವ್ಯವಸ್ಥೆಯನ್ನು ಮತ್ತೆ ಅವಲಂಬಿಸುವ ರೀತಿಯಲ್ಲಿ ಹೊಸ ಅವಕಾಶಗಳನ್ನು ಮತ್ತು ಅಗತ್ಯಗಳನ್ನು ಹುಟ್ಟುಹಾಕಿತು. ಬೆಳೆಯುತ್ತಿರುವ ಬಹುರಾಷ್ಟ್ರೀಯ ಕಂಪೆನಿಗಳು ಇಪ್ಪತ್ತೊಂದನೆಯ ಶತಮಾನದ ಆರಂಭದ ಸುಮಾರಿಗೆ ಜಾಗತಿಕ ಬಾಲಕಾರ್ಮಿಕರ ಸಂಖ್ಯೆಯ ಕೇವಲ 5%ರಷ್ಟನ್ನು ತಮ್ಮ ಉದ್ಯೋಗದಲ್ಲಿ ತೊಡಗಿಸಿಕೊಂಡಿದವು. ಆದರೆ ಅಂತಾರಾಷ್ಟ್ರೀಯ ಉತ್ಪಾದನಾ ಕ್ಷೇತ್ರದಲ್ಲಿನ ಸ್ಪರ್ಧೆಯು ಉತ್ಪಾದನೆಯ ಹಲವು ಸಾಂಪ್ರದಾಯಿಕ ಶಾಖೆಗಳನ್ನು ಛಿದ್ರಗೊಳಿಸಿದುದು, ಹೆಚ್ಚಿನ ನಿರುದ್ಯೋಗ ಮತ್ತು ಬಡತನಕ್ಕೆ ಕಾರಣವಾಯಿತು. ಇದರಿಂದ ಅನಿವಾರ್ಯವಾಗಿ ಕುಟುಂಬಗಳು ತಮ್ಮ ಮಕ್ಕಳನ್ನು ದುಡಿಮೆಗೆ ಹಚ್ಚಬೇಕಾದ ಸಂದರ್ಭ ಉಂಟಾಯಿತು. ಮಕ್ಕಳು ಬೀದಿ ಅಪರಾಧಗಳಲ್ಲಿ ಮತ್ತು ಹೆಣ್ಣುಮಕ್ಕಳು ವೇಶ್ಯಾವಾಟಿಕೆಯಲ್ಲಿ ತೊಡಗಿಕೊಳ್ಳಬೇಕಾದ ಅನಿವಾರ್ಯತೆಗಳು ಹುಟ್ಟಿಕೊಂಡವು. ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯಂತಹ (IMF) ಸಂಸ್ಥೆಗಳು 1990ರ ದಶಕದಲ್ಲಿ ಮುಕ್ತ ಮಾರುಕಟ್ಟೆ ಪರವಾಗಿ ನಿಂತು, ಕಲ್ಯಾಣ ಕಾರ್ಯಕ್ರಮಗಳ ಮೇಲೆ ಸರಕಾರಗಳು ವ್ಯಯಿಸುತ್ತಿದ್ದ ಆರ್ಥಿಕ

ನಿಧಿಗಳ ಮೇಲೆ ನಿರ್ಬಂಧ ಹೇರಲು ಪ್ರಾರಂಭಮಾಡುತ್ತಿದ್ದಂತೆ ಬಡವರು ಮಕ್ಕಳ ದುಡಿಮೆಯನ್ನು ಅವಲಂಬಿಸಬೇಕಾದ ಅನಿವಾರ್ಯತೆ ಮತ್ತೆ ಎದುರಾಯಿತು. ಬಡತನದ ಕಾರಣದಿಂದಾಗಿ ಬೀದಿಗೆ ಬಿದ್ದ ಮಕ್ಕಳು ಜೀವನೋಪಾಯಕ್ಕೆ ಕೈಗೆ ಸಿಕ್ಕ ಕೆಲಸಗಳನ್ನು ಮಾಡುತ್ತಾ, ತಮ್ಮ ಗಳಿಕೆಯಲ್ಲಿ ಉಳಿದ ಹಣವನ್ನು ಮನೆಗೆ ಕೊಡುವ ಪರಿಸ್ಥಿತಿ ಇದ್ದ ಬ್ರೆಜಿಲ್‌ನಂತಹ ದೇಶಗಳ ನಗರಗಳಲ್ಲಿ ಬಾಲ ಕಾರ್ಮಿಕ ಪದ್ಧತಿಯು ಗಟ್ಟಿಯಾಗಿ ಮುಂದುವರಿಯಿತು. ಜಗತ್ತಿನ ಇತರ ಭಾಗಗಳಲ್ಲಿ ಇದ್ದುದಕ್ಕಿಂತ ಭಿನ್ನವಾಗಿ ದಕ್ಷಿಣ ಮತು ಆಗ್ನೇಯ ಏಷ್ಯಾದಲ್ಲಿ ಬಾಲ ಕಾರ್ಮಿಕರ ಪ್ರಮಾಣವು ಅತಿಯಾಗಿ ಏರಿತು. ಬಾಲಕಾರ್ಮಿಕರ ಬಗೆಗೆ ಸ್ಪಷ್ಟವಾದ ಸಾಂಪ್ರದಾಯಿಕ, ಕೌಟುಂಬಿಕ, ಸಾಮಾಜಿಕ ಧೋರಣೆಗಳು ಮತ್ತು ಆರ್ಥಿಕ ಒತ್ತಡಗಳು ವಿಶಿಷ್ಟ ಪ್ರಾದೇಶಿಕ ಭಿನ್ನತೆಗಳನ್ನು ಸ್ಥಾಪಿಸಿ, ಆಧುನಿಕ ಬಾಲ್ಯದ ಮಾದರಿಯ ಬಗೆಗೆ ಜಾಗತಿಕವಾಗಿ ಯಾವುದೇ ಸಂಪೂರ್ಣ ಬದ್ದತೆಯನ್ನು ಸಾಧಿಸುವಲ್ಲಿ ಒಂದು ಸವಾಲಾಗಿ ನಿಂತವು. [90]

ಜಾಗತೀಕರಣದ ಮೂರನೆ ಪ್ರಭಾವ ಬಾಲ್ಯ ಮತ್ತು ಯೌವನದ ಮೇಲೆ ಆಗಲು ಕಾರಣವಾಗುವುದು ಜಾಗತಿಕ ಕೊಳ್ಳುಬಾಕ ಸಂಸ್ಕೃತಿಯ ಅಲೆಯ ಮೂಲಕ. ಇದರಲ್ಲಿ ಮಕ್ಕಳು ಅದರಲ್ಲೂ ಮುಖ್ಯವಾಗಿ ಯುವಕರು ಮುಖ್ಯ ಪಾತ್ರ ವಹಿಸುತ್ತಾರೆ. ಆಧುನಿಕೀಕರಣದಲ್ಲಿ ಆದಂತೆ ಕೊಳ್ಳುಬಾಕ ಸಂಸ್ಕೃತಿಯ ಜೊತೆ ಮಕ್ಕಳ ಸಂಬಂಧ ಮೊದಲು ಏರ್ಪಟ್ಟಿದ್ದು ಪಶ್ಚಿಮದಲ್ಲಿ. ಹತ್ತೊಂಬತ್ತನೆಯ ಶತಮಾನದ ಕೊನೆಗೆ ಬರುತ್ತಿದ್ದಂತೆ ಮಕ್ಕಳು ತಮಗೆ ಬೇಕಾದುದನ್ನು ತಾವೇ ಖರೀದಿಸಲು ಪ್ರಾರಂಭಮಾಡಿದ್ದರು – ಉದಾಹರಣೆಗೆ, ಮಕ್ಕಳಿಗೆ ಪಾಕೆಟ್‌ಮನಿ ಕೊಡುವ ಸಂಪ್ರದಾಯ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಾರಂಭವಾಯಿತು; ಕೆಲವು ನಿರ್ದಿಷ್ಟ ತಿಂಡಿ ತಿನಿಸುಗಳು ಮತ್ತು ಪಾಶ್ಚಿಮಾತ್ಯ ಸಾಹಿತ್ಯ ಮತ್ತು ಪತ್ತೇದಾರಿ ಕತೆಗಳಂತಹ ಆಸಕ್ತಿದಾಯಕ ಓದಿನ ಪುಸ್ತಕಗಳು (ಈ ಪಟ್ಟಿಗೆ ಕಾಮಿಕ್ಸ್‌ಗಳೂ ಶೀಘ್ರವಾಗಿ ಸೇರಿಕೊಂಡವು) ಹುಡುಗರಿಗೆ ಲಭ್ಯವಾಗತೊಡಗಿದವು. ಇದು ತಂದೆತಾಯಿಗಳಿಗೆ ಆತಂಕವನ್ನು ಉಂಟುಮಾಡತೊಡಗಿದುದರಿಂದ ಅದನ್ನು ಎದುರಿಸಲು ಅವರು ಮಕ್ಕಳಿಗಾಗಿ ತಾವೇ ಇತರ ರೀತಿಯ ಗ್ರಾಹಕ ವಸ್ತುಗಳನ್ನು ಕೊಳ್ಳಲಾರಂಭಿಸಿದರು. ವಾಣಿಜ್ಯ ಸಂಸ್ಥೆಗಳು ಮಕ್ಕಳನ್ನು ಮಾರುಕಟ್ಟೆಯ ರೀತಿಯಲ್ಲಿ ನೋಡಲು ಪ್ರಾರಂಭಮಾಡಿದವು; ಈ ದೃಷ್ಟಿಕೋನದ ಮುಂದುವರಿಕೆಯಾಗಿ 1920ರ ದಶಕದ ವೇಳೆಗೆ ರೇಡಿಯೊ ಕಾರ್ಯಕ್ರಮಗಳು ಮಕ್ಕಳನ್ನು ಆಧಾರವಾಗಿಟ್ಟುಕೊಂಡು ಮನಸೆಳೆಯುವಂತಹ ಜಾಹೀರಾತುಗಳನ್ನು ಹರಿಬಿಡಲು ಪ್ರಾರಂಭಮಾಡಿದವು.[91]

---

[90] *Elizabeth Kuznesof, “The House, the Street, Global Society: Latin American Families and Childhood in the Twenty-First Century,”Journal of Social History 38 (2005): forthcoming; Jeremy Seabrook, Children of Other Worlds: Exploitation in the Global Market (London: Pluto Press, 2001)*.

[91] *Lisa Jacobson, Raising Consumers: Children and Consumer Society in the Early Twentieth Century (New York: forthcoming); Susan Matt, “Children’s Envy and the Emergence of the Modern Consumer Ethic,” Journal of Social History 36 (2002): 283–302; Zelizer, Pricing.*

ಕೆಲವು ನಿರ್ದಿಷ್ಟ ರೀತಿಯ ಪಾಶ್ಚಾತ್ಯ ಉತ್ಪನ್ನಗಳು ಇತರ ಸಮಾಜಗಳ ಯುವಕರ ಮನಸ್ಸನ್ನು ಸೆಳೆಯಲು ಪ್ರಾರಂಭಮಾಡಿದವು.[92] ಲೆಬನಾನಿನ ನಗರವಾಸಿ ಹದಿಹರೆಯದವರು 1920 ಮತ್ತು 1930ರ ದಶಕಗಳಿಗೆ ಬಂದಂತೆ ಹೆಚ್ಚು ಹೆಚ್ಚು ಪಾಶ್ಚಾತ್ಯ ಸಿನೆಮಾಗಳನ್ನು ನಿಯಮಿತವಾಗಿ ನೋಡಲು ಪ್ರಾರಂಭಮಾಡಿದರು. ಆದರೆ ಮಕ್ಕಳ ಮೇಲೆ ಜಾಗತಿಕ ಕೊಳ್ಳುಬಾಕ ಸಂಸ್ಕೃತಿಯ ಸಂಪೂರ್ಣ ಪ್ರಭಾವ, ಅದರ ಹೊಸ ತಂತ್ರಜ್ಞಾನ ಮತ್ತು ಮಾರುಕಟ್ಟೆ ಅವಕಾಶಗಳ ಪ್ರಭಾವ ಉಂಟಾಗಲು ಇಪ್ಪತ್ತನೆಯ ಶತಮಾನದ ಕೊನೆಯ ಭಾಗದ ತನಕ ಕಾಯಬೇಕಾಯಿತು. ಅಲ್ಲಿದ್ದ ಹಲವು ಹೆಗ್ಗುರುತುಗಳು, ಅವುಗಳ ಮೂಲಭೂತ ಹೊಸತನ ಮತ್ತು ಪ್ರಾಮುಖ್ಯ ಅವುಗಳ ಸುಪರಿಚಿತತೆಯ ಕಾರಣದಿಂದಾಗಿ ಮರೆಯಾಗಬಾರದು. ಯುವಕರು ಫಾಸ್ಟ್ ಫುಡ್ ರೆಸ್ಟೋರಾಂಟ್‌ಗಳನ್ನು ಇಷ್ಟಪಡತೊಡಗಿದುದು ತಂದೆತಾಯಿಗಳನ್ನು ಆತಂಕಕ್ಕೀಡುಮಾಡಿತು. ಯುವಜನರ ಉದ್ದೇಶವೂ ಅದೇ ಆಗಿತ್ತು. ಸಿಸೇಮ್ ಸ್ಟ್ರೀಟ್‌ನಂತಹ ಟೆಲಿವಿಷನ್ ಸರಣಿ ಕಾರ್ಯಕ್ರಮಗಳು ಹೆಚ್ಚಿನ ಪ್ರಮುಖ ಭಾಷೆಗಳಿಗೆ ಭಾಷಾಂತರಗೊಂಡು ಮಕ್ಕಳಿಗೆ ಹೊಸ ಮಾನದಂಡಗಳನ್ನು ಒದಗಿಸಿದವು. ಎಂಟಿವಿ ಮತ್ತು ರಾಕ್ ಸಂಗೀತದ ವಿಶ್ವಯಾತ್ರೆಗಳು ಸಂಗೀತದ ಒಂದು ಸಾಮಾನ್ಯ ಭಾಷೆಯನ್ನು ಯುವಕರಿಗೆ ನೀಡಿದವು. ಹಿರಿಯರ ಮತ್ತು ಸಾಂಪ್ರದಾಯಿಕ ಮಾದರಿಗಳಿಗೆ ವಿರುದ್ಧವಾಗಿ ನಗರವಾಸಿ ಯುವಕರ ಉಡುಪಿನ ಶೈಲಿ ಕೂಡ ಬಹುತೇಕ ಪ್ರದೇಶಗಳಲ್ಲಿ ಒಂದೇ ಆಗತೊಡಗಿತು. ಥೀಮ್ ಪಾರ್ಕ್‌ಗಳಿಗೆ ಕರೆದೊಯ್ಯುವ ಮೂಲಕ ಹೆತ್ತವರು ತಮ್ಮ ಆರ್ಥಿಕ ಯಶಸ್ಸನ್ನು ಮತ್ತು ಮಕ್ಕಳ ಮೇಲಿನ ಪ್ರೀತಿಯನ್ನು ತೋರಿಸುವಂತಹ ಹೊಸ ಬಳಕೆದಾರ ಮಾನದಂಡ ರೂಢಿಗೆ ಬಂದಿತು: ಮಕ್ಕಳನ್ನು ಒರ್ಲ್ಯಾಂಡೊಗೆ ಕರೆದುಕೊಂಡು ಹೋಗುವುದು ದಕ್ಷಿಣ ಅಮೆರಿಕಾದ ದೇಶಗಳಲ್ಲಿ ಆರ್ಥಿಕವಾಗಿ ಯಶಸ್ವಿಯಾಗಿದ್ದ ಪೋಷಕರಿಗೆ ಮಕ್ಕಳ ಮೇಲೆ ತಮ್ಮ ಪ್ರೀತಿ ತೋರಿಸುವ ಒಂದು ಸಂಪ್ರದಾಯವಾಗಿ ಬೆಳೆಯಿತು. ಈ ಸಂದರ್ಭದಲ್ಲಿಯೇ ಡಿಸ್ನಿ ಚಿತ್ರಗಳು ಮತ್ತು ಬಾರ್ಬಿಗೊಂಬೆಗಳು ಜಾಗತಿಕ ಮಕ್ಕಳ ಆಟದ ಸರಕುಗಳಾದವು; ಈ ಸಂದರ್ಭದಲ್ಲಿಯೇ ಬ್ರಿಟ್ನಿ ಸ್ಪಿಯರ್ಸ್ ಅಂತಹವರು ಯುವಜನರ ಪ್ರತೀಕಗಳಾಗಿ ವಿಶ್ವಖ್ಯಾತಿಯನ್ನು ಹೊಂದಲು ಸಾಧ್ಯವಾಯಿತು. ಈ ಎಲ್ಲ ಬೆಳವಣಿಗೆಗಳಿಂದಾಗಿ ಕೆಲವು ಪರಿವೀಕ್ಷಕರು ಒಂದು ಜಾಗತಿಕ ಯುವ ಸಂಸ್ಕೃತಿ ರೂಪುಗೊಂಡಿದೆ ಎಂದು ತೋರಿಕೆಗಾದರೂ ಹೇಳಲು ಸಾಧ್ಯವಾಯಿತು.[93]

ಆದರೆ ಈ ಸಂಸ್ಕೃತಿಯು ಸಂಪೂರ್ಣವಾಗಿ ಪಾಶ್ಚಾತ್ಯ ಮೂಲಗಳ ಮೇಲೆ ನಿಂತಿಲ್ಲ ಎಂಬುದನ್ನು ಗುರುತಿಸುವುದು ಅಗತ್ಯ. ಜಪಾನ್ ಮತ್ತು ಸ್ವಲ್ಪ ಮಟ್ಟಿಗೆ ಇನ್ನು ಕೆಲವು ದೇಶಗಳು ಇದರ ಸೃಷ್ಟಿಶೀಲ ಕೇಂದ್ರಗಳಾಗಿದ್ದವು ಕೂಡ. ಎಳೆಯ ಮಕ್ಕಳನ್ನು ಆಧರಿಸಿ ಮತ್ತು ಈ ಕಲ್ಪನೆಯನ್ನು ಮುಂದುವರಿಸುವಂತೆ ಜಪಾನ್ ಮಕ್ಕಳಿಗಾಗಿ ಮುದ್ದಾದ ಚಿತ್ರಗಳನ್ನು ಮತ್ತು ಆಟದ ಸಾಮಗ್ರಿಗಳನ್ನು

---

[92] *Peter N. Stearns, Consumerism in World History: The Global Transformation of Desire (London: Routledge, 2001); Tracey Skelton and Gill Valentine, eds., Cool Places: Geographies of Youth Cultures (London: Routledge, 1998); John Love, McDonald's: Behind the Arches, rev. ed (New York: Bantam Books, 1995).*

[93] *Skelton and Valentine, Cool Places.*

ತಯಾರಿಸುವಲ್ಲಿ ಜಾಗತಿಕ ಖ್ಯಾತಿ ಪಡೆದುದಷ್ಟೇ ಅಲ್ಲದೆ ಶೈಶವದ ಮೂಲಭಾವನೆಗಳನ್ನು ಅತಿ ಎತ್ತರಕ್ಕೆ ಕೊಂಡೊಯ್ಯಿತು. 'ಹಲೋ ಕಿಟ್ಟಿ' ಟೆಲಿವಿಷನ್ ಸರಣಿಯ ಬಗೆಗೆ ಮಕ್ಕಳಲ್ಲಿ ಹುಟ್ಟಿಕೊಂಡ ಅತ್ಯಾಸಕ್ತಿ ಇದಕ್ಕೆ ಒಂದು ಉದಾಹರಣೆ. 'ಯೂತ್ ಕೂಲ್'ಗೆ ಬೇಕಾದ ನಾನಾ ವಿನ್ಯಾಸದ ಉತ್ಪನ್ನಗಳ ಉತ್ಪಾದನೆಯಲ್ಲಿ ಜಪಾನ್ ಅಗ್ರಸ್ಥಾನದಲ್ಲಿತ್ತು; 2003ರ ವೇಳೆಗೆ ಜಪಾನ್ ಕೂಲ್ ವಸ್ತುಗಳನ್ನು ರಫ್ತು ಮಾಡುವುದರಲ್ಲಿ ಮತ್ತು ತನ್ಮೂಲಕ ಆದಾಯವನ್ನು ಗಳಿಸುವುದರಲ್ಲಿ ಅಗ್ರಸ್ಥಾನದಲ್ಲಿತ್ತು. ಜಪಾನಿನ ಯುವತಿಯರು ಬಳಸುತ್ತಿದ್ದ ಉತ್ಪನ್ನಗಳನ್ನು ಜಾಗತಿಕ ಶೈಲಿಯ ಮುಂಗೋಳಿಗಳು ಎಂದು 'ವೈರ್ಡ್' ನಿಯತಕಾಲಿಕ ಪ್ರಕಟಿಸಲಾರಂಭಿಸಿತು.[94]

ಜಾಗತಿಕ ಕೊಳ್ಳುಬಾಕತನದ ಕಾರಣದಿಂದಾಗಿ ಜಗತ್ತಿನ ಹಲವಾರು ಪ್ರದೇಶಗಳಲ್ಲಿ ಯುವಕರು ಮತ್ತು ಸ್ವಲ್ಪ ಪ್ರಮಾಣದಲ್ಲಿ ಮಕ್ಕಳು ಕೂಡ ತಮ್ಮದೇ ಆದ ಒಂದು ಪ್ರತ್ಯೇಕ ಅಸ್ಮಿತೆ ಮತ್ತು ನೆಲೆಯನ್ನು ಕಂಡುಕೊಳ್ಳತೊಡಗಿದರು. ಹಾಂಕಾಂಗ್‌ನಲ್ಲಿ ಒಬ್ಬ ಯುವಕನನ್ನು ಅವನು ಏಕೆ ಮ್ಯಾಕ್ ಡೊನಾಲ್ಡ್ ಇಷ್ಟಪಡುತ್ತಾನೆ ಎಂದು ಕೇಳಿದಾಗ, ಅವನು ಅಲ್ಲಿಯ ತಿಂಡಿ ತಿನಿಸು ತನಗೆ ಇಷ್ಟವಾಗುವುದಿಲ್ಲವಾದರೂ ಅಲ್ಲಿ ಬಂದವರನ್ನು ನೋಡುವುದು ಮತ್ತು ತಾನು ಅಲ್ಲಿ ಕಾಣಿಸಿಕೊಳ್ಳುವುದು ತನಗೆ ಮುಖ್ಯ ಎಂದು ಹೇಳುತ್ತಾನೆ.[95] ಹೊಸ ಶೈಲಿಗಳು ಸ್ಪಷ್ಟವಾಗಿ ಯುವಕರಿಗೆ ತಂದೆತಾಯಿಗಳ ಸಂಪೂರ್ಣ ಹತೋಟಿಯಿಂದ ಪಾರಾಗುವ ಹೊಸ ಅವಕಾಶಗಳನ್ನು ಒದಗಿಸಿದವು; ಈ ದೃಷ್ಟಿಯಿಂದ ನೋಡಿದರೆ ಕೊಳ್ಳುಬಾಕ ಸಂಸ್ಕೃತಿಯು ಪ್ರಾಬಲ್ಯಕ್ಕಾಗಿ ನಡೆಯುವ ತಿಕ್ಕಾಟಗಳಲ್ಲಿ ಒಂದು ನಿಜವಾದ ಆಯುಧವಾಗಬಹುದು. ಮಕ್ಕಳಿಗೆ ತಮ್ಮ ಕುಟುಂಬದ ಸದಸ್ಯರನ್ನು ಮತ್ತು ವಿಶಾಲ ನೆಲೆಯಲ್ಲಿ ಸಮಾಜವನ್ನು ಕೂಡ ಮಾರುಕಟ್ಟೆಯ ಆಕರ್ಷಣೆಗೆ ಎಳೆದು ತರುವಲ್ಲಿ ಮತ್ತು ಅದನ್ನು ಕುರಿತು ಅವರ ಅರಿವನ್ನು ಹೆಚ್ಚಿಸುವಲ್ಲಿ ಹಿಂದೆಂದೂ ಇಲ್ಲದಂತಹ ಒಂದು ನಾಟಕೀಯ ಪಾತ್ರ ಪ್ರಾಪ್ತಿಯಾಯಿತು. ಇದೇ ಸಂದರ್ಭದಲ್ಲಿ ಈ ಕೊಳ್ಳುಬಾಕ ಸಂಸ್ಕೃತಿಯು ಹಿರಿಯರ ಜವಾಬ್ದಾರಿಯ ಮೇಲೆ ಕೂಡ ಪರಿಣಾಮವನ್ನು ಬೀರಿತು. ಇಪ್ಪತ್ತನೆಯ ಶತಮಾನದ ಯಾವುದೋ ಒಂದು ಹಂತದಲ್ಲಿ ಹೆತ್ತವರು ತಮ್ಮ ಮಕ್ಕಳಿಗೆ ಅವಶ್ಯ ಸಾಮಗ್ರಿಗಳನ್ನು ಮತ್ತು ಮನೋರಂಜನೆಯನ್ನು ಒದಗಿಸುವುದು ತಮ್ಮ ಆದ್ಯ ಕರ್ತವ್ಯಗಳಲ್ಲಿ ಒಂದು ಎಂದು ನಂಬಲು ಪ್ರಾರಂಭಮಾಡಿದರು. ಇದನ್ನು ಪೂರೈಸಲು ಆಗದೆ ಇದ್ದಂತಹ ಸಂದರ್ಭದಲ್ಲಿ ಅದನ್ನು ಕುರಿತು ಅವರು ಅಪರಾಧಿ ಮನೋಭಾವದಿಂದ ನರಳತೊಡಗಿದರು. 'ಹ್ಯಾಪಿ ಬರ್ತ್‌ಡೇ' ಹಾಡು ಎಲ್ಲ ಪ್ರಮುಖ ಭಾಷೆಗಳಲ್ಲಿ ತರ್ಜುಮೆಗೊಂಡು, ಬಳಕೆಗೆ ಬಂದಿತು. ಇದು ವ್ಯಕ್ತಿಗತ ನೆಲೆಯಲ್ಲಿ ಮಕ್ಕಳೊಂದಿಗೆ ತಂದೆತಾಯಿಗಳು ತಮ್ಮನ್ನು ಗುರುತಿಸಿಕೊಳ್ಳುವ ಇಂತಹ ಒಂದು ಹೊಸ ನಮೂನೆ ವಿಶ್ವವ್ಯಾಪಿಯಾಗಿ ಪಸರಿಸಿರುವುದರ ದ್ಯೋತಕವಾಗಿದೆ.

ಹಲವು ವಿಧದಲ್ಲಿ ಕೊಳ್ಳುಬಾಕ ಸಂಸ್ಕೃತಿಯು ವಿಶಾಲ ನೆಲೆಯಲ್ಲಿ ಸಂಭವಿಸಿದ ಆಧುನಿಕೀಕರಣದ ಉದ್ದೇಶದೊಂದಿಗೆ ಮಿಳಿತವಾಯಿತು. ಮಕ್ಕಳ

[94] *Gary Cross, The Cute and the Cool: Wondrous Innocence and Modern American Children's Culture (New York: Oxford University Press, 2004).*
[95] *Stearns, Consumerism, 90–91.*

ಹುಟ್ಟುಹಬ್ಬದ ಆಚರಣೆಯ ಬಗೆಗೆ ಹಬ್ಬಿದ ಹುಚ್ಚು ಮತ್ತು ಮಕ್ಕಳು ವೈಯಕ್ತಿಕವಾಗಿ ಉಡುಗೊರೆಗಳನ್ನು ಸ್ವೀಕರಿಸುವ ಮತ್ತು ತಮಗೆ ಬೇಕಾದುದನ್ನು ತಾವೇ ಕೊಂಡುಕೊಳ್ಳುವ ಅವಕಾಶವು ಶಾಲಾಭ್ಯಾಸಕ್ಕೆ ಮಕ್ಕಳಿಗೆ ಪೋಷಕರು ಕೊಡುವ ಪಾರಿತೋಷಕ ಎಂಬಂತೆ ಪ್ರಚಲಿತವಾಯಿತು. ಶಾಲಾಭ್ಯಾಸವನ್ನು ಒಪ್ಪಿಕೊಳ್ಳಲು ಕೊಳ್ಳುಬಾಕ ಸಂಸ್ಕೃತಿಯು ಒಂದು ಹೊಸ ಪ್ರೋತ್ಸಾಹಕ ಅಂಶವಾಯಿತು. ಕೊಳ್ಳುಬಾಕತನದ ಪ್ರಕ್ರಿಯೆಯು ಬಾಲ್ಯದ ಸರೀಕರ ಗುಂಪು ಮತ್ತು ವಯೋಮಾನ-ಆಧಾರಿತ ಬಾಲ್ಯದ ಗುಣಲಕ್ಷಣಗಳು ಕೊಡುವ ಅವಕಾಶವನ್ನು ಬಳಸಿಕೊಂಡು ಬೆಳೆಯುತ್ತಿದೆ. ಇನ್ನೊಂದೆಡೆ, ಬಾಲ್ಯಾವಸ್ಥೆಯ ಕೊಳ್ಳುಬಾಕತನಕ್ಕೆ ಆಧುನಿಕೀಕರಣದ ಮಾದರಿಯಲ್ಲಿ ಇಲ್ಲದ ಕೆಲವು ವಿಶಿಷ್ಟ ಗುಣಲಕ್ಷಣಗಳಿದ್ದವು ಮತ್ತು ಅವುಗಳು ಆಧುನಿಕೀಕರಣದ ಮಾದರಿಯೊಂದಿಗೆ ಸಂಘರ್ಷಕ್ಕೀಡಾಗುವ ಸಂದರ್ಭಗಳು ಉಂಟಾಗುತ್ತಿದ್ದವು; ಉದಾಹರಣೆಗೆ, ಯುವಕರು ಶಾಲಾ ಶಿಸ್ತು ಮತ್ತು ನಿಯಮಿತ ಹಾಜರಾತಿಯನ್ನು ನಿರ್ಲಕ್ಷಿಸಿ ಬಳಕೆದಾರ ಆಸಕ್ತಿಗಳನ್ನು ಬೆಳೆಸಿಕೊಳ್ಳಲು ಪ್ರಾರಂಭಮಾಡುವಲ್ಲಿ ಕಾಣಿಸುತ್ತದೆ. ಇಂತಹ ಸಂಘರ್ಷದ ಸನ್ನಿವೇಶಗಳನ್ನು ನಾವು ಅಮೆರಿಕಾ ಸಂಯುಕ್ತ ಸಂಸ್ಥಾನದಿAದ ಹಿಡಿದು ಮಡಗಾಸ್ಕರ್ ತನಕವೂ ಕಾಣಬಹುದು.[96]

ಬಾಲ್ಯಾವಸ್ಥೆಯು ಅನುಭವಿಸಿದ ಮೂಲಭೂತ ಬದಲಾವಣೆಗಳಿಗೆ ಜಾಗತೀಕರಣವು ಕೆಲವು ಹೊಸ ಲಕ್ಷಣಗಳನ್ನು, ಸಂಕೀರ್ಣತೆಗಳನ್ನು ಮತ್ತು ಕೆಲವು ಪ್ರಾದೇಶಿಕ ಭಿನ್ನತೆಗಳನ್ನು ಸೇರಿಸಿತು. ಈ ಪ್ರಕ್ರಿಯೆ ಇನ್ನೂ ಜಾರಿಯಲ್ಲಿದೆ. ಈ ಸಂದರ್ಭದಲ್ಲಿ ಬಾಲ್ಯಾವಸ್ಥೆಯ ಈ ಬದಲಾವಣೆಯನ್ನು ಒಂದು ಮುಗಿದು ಹೋದ ಐತಿಹಾಸಿಕ ಅಧ್ಯಾಯ ಎಂದು ಪರಿಗಣಿಸುವುದು ಅಕಾಲಿಕವಾದೀತು. ಬಾಲ್ಯಾವಸ್ಥೆಯ ಆಧುನಿಕೀಕರಣದ ಈ ಮಾದರಿಯು ಅದರ ಎಲ್ಲಾ ಜಾಗತಿಕ ನಂಟುಗಳೊಂದಿಗೆ ಎಲ್ಲ ಕಡೆ ವಿಜಯಶಾಲಿಯಾಗುತ್ತದೆ ಎಂದು ಹೇಳಲಾಗುವುದಿಲ್ಲ. ಸಂಪನ್ಮೂಲಗಳ ಲಭ್ಯತೆಯಲ್ಲಿ ನಾಡಿನಿಂದ ನಾಡಿಗೆ ಅಪಾರ ವ್ಯತ್ಯಾಸವಿದೆ. ಬಾಲ್ಯಾವಸ್ಥೆಗೆ ಸಂಬಂಧಿಸಿದಂತೆ - ಲಿಂಗ ತಾರತಮ್ಯ ಮತ್ತು ಲೈಂಗಿಕತೆಯನ್ನೂ ಒಳಕೊಂಡು - ವಿವಿಧ ಸಂಪ್ರದಾಯದ ನೆಲೆಗಳಿವೆ; ಈ ಹಿನ್ನೆಲೆಯಲ್ಲಿ ಬಾಲಕಾರ್ಮಿಕ ಪ್ರಶ್ನೆಯೆಂಬುದು ಸಮಾಜದಿಂದ ಸಮಾಜಕ್ಕೆ ವ್ಯತ್ಯಾಸವಾಗುತ್ತದೆ. ಇವೆಲ್ಲವೂ ಬಾಲ್ಯಾವಸ್ಥೆಯ ಆಧುನಿಕೀಕರಣಕ್ಕೂ, ಇನ್ನೂ ಮುಖ್ಯವಾಗಿ ಬಳಕೆದಾರ ಸಂಸ್ಕೃತಿಯ ಅಭಿವೃದ್ಧಿಗೂ ಮತ್ತು ಜಾಗತಿಕ ಹಕ್ಕುಗಳ ಪಾಲನೆಗೂ ಪ್ರತಿರೋಧ ನೀಡುವುದು ಖಚಿತ. ನಾವು ಜಪಾನ್ ಮತ್ತು ಇತರ ಕೆಲವು ದೇಶಗಳಲ್ಲಿ ಕಾಣುವ ಹಾಗೆ, ಬದಲಾವಣೆಯ ಸಾಮಾನ್ಯ ಮಾದರಿಗಳು ಕಂಡುಬಂದರೂ, ಅವುಗಳು ಮೂಲತಃ ಇರುವ ಪ್ರಮುಖ ಪ್ರಾದೇಶಿಕ ಭಿನ್ನತೆಗಳೊಂದಿಗೆ ಬೆರೆಯುತ್ತವೆ. ಹಾಗಾಗಿ ನಾವು ಒಂದು ಏಕರೂಪದ ನಕಲಿ ಚಿತ್ರಣವನ್ನು ಕೊಡುವುದರಿಂದ ಹಿಂದೆ ಸರಿಯಬೇಕು.

[96] *Cole, "Jaombilo."*

ಇದರ ಜೊತೆಗೆ ನಾವು ಪ್ರಸಕ್ತ ಕಾರ್ಯನಿರ್ವಹಿಸುತ್ತಿರುವ ಅಭಿವೃದ್ಧಿ ಸಂಸ್ಕೃತಿಯಲ್ಲಿ ಸಮೀಕರಿಸಲು ಕಷ್ಟವಾಗುವಂತಹ ಒಂದು ಸಾಮಾನ್ಯ ಐತಿಹಾಸಿಕ ಬೆಳವಣಿಗೆಯನ್ನು ಗಮನಿಸಬೇಕು: ಬಾಲ್ಯಾವಸ್ಥೆಯ ಗುಣಲಕ್ಷಣಗಳಲ್ಲಿ ಆದ ಬದಲಾವಣೆಗಳು ಎಲ್ಲ ಕಡೆ ಏಕರೀತಿಯಲ್ಲಿ ಹಿತಕರವಾಗಿರಲಿಲ್ಲ. ಪ್ರಾಪ್ತವಯಸ್ಸಿಗೆ ಬರುವ ಮೊದಲೇ ಮಕ್ಕಳು ಸಾಯುವ, ಕಠಿಣ ದೈಹಿಕ ಶಿಕ್ಷೆಗೆ, ಅಬಾಧಿತ ಶೋಷಣೆಗೆ ಒಳಪಡುವ ಕಾಲ ಸರಿದುಹೋಗಿರುವುದರಿಂದ ಮತ್ತೆ ಆ ಕಾಲಕ್ಕೆ ನಾವು ಮರಳುವುದಕ್ಕಾಗುವುದಿಲ್ಲ. ಆದರೆ ಆಧುನಿಕ ಬಾಲ್ಯಾವಸ್ಥೆಯು ಭೌತಿಕ ಯಾತನೆ ಮತ್ತು ಶೋಷಣೆಯಿಂದ ಮುಕ್ತವಾಗಿದೆ ಎಂದು ಹೇಳುವಂತಿಲ್ಲ. ಜಗತ್ತಿನ ಹಲವೆಡೆ ಸರಕಾರದ ನೀತಿನಿಯಮಾವಳಿಗಳಲ್ಲಿ ಬಾಲ್ಯಾವಸ್ಥೆಗೆ ಹಿಂದೆಂದಿಗಿಂತಲು ಕಡಿಮೆ ಪ್ರಾಶಸ್ತ್ಯ ದೊರೆಯುತ್ತಿದೆ. ಬಾಲ್ಯ ಗಣನೆಗೆ ಬಾರದಂತೆ ಸರ್ಕಾರದ ಅಂಕಿಸಂಖ್ಯೆಗಳಲ್ಲಿ ಸಂತ್ರಸ್ತರ ವಯೋಮಾನವನ್ನು ಬದಲಾಯಿಸಿ, ಅವರನ್ನು ವಯಸ್ಕರನ್ನಾಗಿ ತೋರಿಸಲಾಗುತ್ತಿದೆ. ಜೀವನದ ಅರ್ಥ ಮತ್ತು ಅಸ್ಮಿತೆಯನ್ನು ಕುರಿತಂತೆ ತನ್ನದೇ ತೊಳಲಾಟಗಳನ್ನು ಹೊತ್ತುತಂದಿರುವ ಆಧುನಿಕ ಬಾಲ್ಯವು ಯುವಕರಲ್ಲಿ, ಸಾಂಪ್ರದಾಯಿಕ ಸಮಾಜಗಳಲ್ಲಿ ಕಂಡರಿಯದಂತಹ ಮಾನಸಿಕ ಕಾಯಿಲೆ ಮತ್ತು ಆತ್ಮಹತ್ಯೆಯಂತಹ ಪಿಡುಗುಗಳಿಗೆ ದಾರಿಮಾಡಿಕೊಟ್ಟಿದೆ.

ಸಾಮಾಜಿಕ ಬದಲಾವಣೆಗಳ ಕಾರಣದಿಂದಾಗಿ ಹುಟ್ಟುವ ಸಮಸ್ಯೆಗಳನ್ನು ಪರಿಹರಿಸಲು ಕೈಕೊಳ್ಳಬೇಕಾದ ಕ್ರಮಗಳನ್ನು ಅರ್ಥಮಾಡಿಕೊಳ್ಳಲು ಬಾಲ್ಯದ ಆಧುನಿಕ ಇತಿಹಾಸವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಬಾಲ್ಯಾವಸ್ಥೆಯನ್ನು ಐತಿಹಾಸಿಕ ಅಧ್ಯಯನದ ವ್ಯಾಪ್ತಿಯಿಂದ ಸಂಪೂರ್ಣವಾಗಿ ಕೈಬಿಡದೇ ಇದ್ದರೂ ಪ್ರಗತಿಯನ್ನು ಕುರಿತಾದ ಅಸಮರ್ಥನೀಯ ಪರಿಕಲ್ಪನೆಗಳನ್ನೊಳಗೊಂಡ ಬೆಣ್ಣೆಯ ಮಾತುಗಳಿಂದ ತೇಲಿಸಿ, ಬಲು ಸಂಕೀರ್ಣವಾಗಿದ್ದ ಹಾಗೂ ಈಗಲೂ ಹಾಗೇ ಇರುವ ಸಮಸ್ಯೆಯೊಂದನ್ನು ಕೇವಲ ಸದುದ್ದೇಶದಿಂದಲೂ ವಾಗ್ಜಾಲದಿಂದಲೂ ಮರೆಮಾಚಬಹುದೆನ್ನುವ ಧೋರಣೆ ಕಂಡುಬರುತ್ತಿದೆ.

ಕೆಲವು ಸಂದರ್ಭಗಳಲ್ಲಿ ಆಧುನಿಕ ಜಗತ್ತು ತಮಗೆ ತಂದುಕೊಟ್ಟಿರುವ ಸಂಕಷ್ಟಗಳ ಬಗೆಗೆ ಯುವಕರೇ ಸಿಡಿದೆದ್ದು, ಪ್ರತಿರೋಧ ವ್ಯಕ್ತಪಡಿಸಿದ್ದ ಪ್ರಸಂಗಗಳೂ ಇವೆ.. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪಶ್ಚಿಮದಲ್ಲಿ ಯುವಕರು ಪ್ರತಿರೋಧದ ಒಂದು ವರ್ಗವಾಗಿ ತಲೆ ಎತ್ತಿ ರಾಜಕೀಯವಾಗಿ ಎಡ ಮತ್ತು ಬಲ ಪಂಥಗಳ ಅಭಿಯಾನಗಳಲ್ಲಿ ತೊಡಗಿಕೊಂಡರು. ಆಧುನಿಕ ಪ್ರತಿರೋಧದ ಹಲವಾರು ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ಗುಂಪುಗಳು ಪ್ರಮುಖ ಪಾತ್ರ ವಹಿಸಿವೆ.[97] ಪಾಶ್ಚಾತ್ಯ ದೇಶಗಳುದ್ದಕ್ಕೂ 1960ರ ದಶಕದಲ್ಲಿ ಹರಡಿದ್ದ ಯುವ ಚಳವಳಿಯು ಕೊಳ್ಳುಬಾಕತನ ಮತ್ತು ಉನ್ನತ ಶಿಕ್ಷಣದಲ್ಲಿ ಇದ್ದ ಅನಿಶ್ಚಿತತೆ ಹಾಗೂ ಶ್ರೇಣೀಕೃತ ವ್ಯವಸ್ಥೆಯನ್ನು ಗುರಿಯಾಗಿಸಿಕೊಂಡಿತ್ತು. ಮುಸ್ಲಿಂ ಪ್ರತಿರೋಧ ಚಳವಳಿಗಳನ್ನು ಒಳಕೊಂಡಂತೆ ಸಮಕಾಲಿನ ಪ್ರತಿರೋಧಗಳಲ್ಲಿ ಯುವಕರ ಪಾತ್ರ ಗಮನಾರ್ಹವಾಗಿದೆ. ಆದರೆ ದೀರ್ಘಕಾಲ ಬಾಳುವಂತಹ ಒಂದು ಜಾಗತಿಕ ಯುವ

[97] *Kenneth Keniston, Youth and Dissent: The Rise of a New Opposition (New York: Harcourt Brace Javanovich, 1971).*

ಚಳವಳಿ ಇನ್ನೂ ಹುಟ್ಟಿಲ್ಲ. 1960ರ ದಶಕದಲ್ಲಿ ಹುಟ್ಟಿದ ಚಳವಳಿಯು 1973ರಲ್ಲಿ ಬಹುತೇಕ ಪೂರ್ತಿಯಾಗಿ ಕೊನೆಗೊಂಡಿತಲ್ಲದೆ ಹಲವಾರು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಯುವ ರಾಜಕೀಯ ಚಳವಳಿಗಳು ತ್ವರಿತವಾಗಿ ಮತ್ತು ವಿಪತ್ಕಾರಿಯಾಗಿ ಕೊನೆಯಾದವು. ಕೊಳ್ಳುಬಾಕ ಸಂಸ್ಕೃತಿಯ ಪ್ರಲೋಭನೆಗಳು, ಶೈಕ್ಷಣಿಕ ಸಾಧನೆಯನ್ನು ಕುರಿತು ಹೆಚ್ಚಿದ ಗಮನ ಮತ್ತು ಮುಂದುವರಿಯುತ್ತಿರುವ ಸಾಂಸ್ಕೃತಿಕ ವಿಘಟನೆಗಳು ಬದಲಾವಣೆಯ ನೇತ್ಯಾತ್ಮಕ ಪರಿಣಾಮಗಳ ವಿರುದ್ಧ ಸಂಘಟಿತವಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಮೊಟಕುಗೊಳಿಸಿವೆ. ಹಾಗಾಗಿ ಈ ಜಾಗತಿಕ ಅನುಭವದ ಒಂದು ಪ್ರಮುಖ ವಿಚಾರದÀ ಬಗೆಗೆ ಸಾಮಾಜಿಕವಾಗಿ ಮತ್ತು ನೀತಿರಚನೆಯ ನೆಲೆಯಲ್ಲಿ ಹೊಸದಾಗಿ ಗಮನಹರಿಸಬೇಕಾದ ಆವಶ್ಯಕತೆ ಇದೆ.

# ಲೇಖಕರ ಕುರಿತು

ಪೀಟರ್ ಸ್ಟರ್ನ್ಸ್ ಅವರು ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಪಿ.ಎಚ್‌ಡಿ ಪದವಿಯನ್ನು ಪಡೆದಿದ್ದಾರೆ. Journal of Social History ನಿಯತಕಾಲಿಕದ ಸಂಪಾದಕರಾಗಿರುವ ಅವರು ಬಹಳಷ್ಟು ಪುಸ್ತಕಗಳನ್ನು ಬರೆದಿದ್ದಾರೆ. ಅವರ ಇತ್ತೀಚಿನ ಪುಸ್ತಕ *The Battleground of Desire: The Struggle for Self-Control in Modern America; Fat History: Bodies and Beauty in Western Society; Gender in World History;* ಮತ್ತು *World History: Patterns of Change and Continuity*. ಡಾ. ಸ್ಟರ್ನ್ ಅವರು ಇತ್ತೀಚಿಗೆ ಪ್ರಕಟವಾದ ಆರು ಸಂಪುಟಗಳ ವಿಶ್ವಕೋಶ, *Encyclopedia of European Social History from 1350 to 2000*ದ ಸಂಪಾದಕರು. ಕೂಡ. *The American Historical Society, The Society of French Historical Studies, The Social Science History Association* ಮತ್ತು *The International Society for Research on Emotion* ನಂತಹ ಹಲವು ವೃತ್ತಿಪರ ಸಂಸ್ಥೆಗಳಲ್ಲಿ ಅವರು ಸಕ್ರಿಯರಾಗಿದ್ದಾರೆ. ಸುಮಾರು ನಲವತ್ತು ವರ್ಷಗಳ ಕಾಲ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಕರಾಗಿ ಮತ್ತು ಆಡಳಿತಗಾರರಾಗಿ ಅನುಭವ ಇರುವ ಸ್ಟರ್ನ್ಸ್ ಅವರು ಪ್ರಸ್ತುತ ಜಾರ್ಜ್ ಮೇಸನ್ ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

***Previous Charles Edmondson Historical Lecturers***

*Paul K. Conkin, University of Wisconsin, 1977–1978: “American Christianity in Crisis: Religious Rationalism and Darwinism.”

*Walter LaFeber, Cornell University, 1979–1980: “The Third Cold War: Kissinger Years and Carter Years.”

*Martin E. Marty, University of Chicago, 1980–1981: “Religious Crises in Modern America: Modernism and Fundamentalism.”

**William H. McNeill, University of Chicago, 1981–1982: “The Great Frontier: Freedom and Hierarchy in Modern Times.”

Robert L. Heilbroner, The New School for Social Research, 1982–1983: “Capitalism in Transition: The Twentieth Century.”

C. Vann Woodward, Yale University, emeritus, 1983–1984: “Continuing Themes in Southern History: The Strange Career of Jim Crow, 1954–1984; and The Burden of Southern History, 1952–1984”

*William E. Leuchtenburg, University of North Carolina, Chapel Hill, 1984–1985: “The 1984 Presidential Election in Historical Perspective: From Civil War to the New Deal; From Franklin Roosevelt to Ronald Reagan.”

Peter Gay, Yale University, 1985–1986: “Aggression: Toward a Theory of Aggression,” and “Humor: Aggression at Work.”

*Gordon S. Wood, Brown University, 1986–1987: The Making of the Constitution.”

Gerder Lerner, University of Wisconsin, Madison, 1987–1988: “Sex and Class: A Revisionist Perspective.”

*Robert Darnton, Princeton University, 1988–1989: “The French Revolution at Street Level” and “From Enlightenment to Revolution.”

*Stephen B. Oates, University of Massachusetts, 1989–1990: “Biography: The Heart of History” and “How the Trumpet Came to Sound: The Process and Perils of Writing a Biography of Martin Luther King, Jr.”

*Dan T. Carter, Emory University 1990–1991: “George Wallace, Richard Nixon, and the Transformation of American Politics.”

*Geoffrey A. Hosking, University of London, 1991–1992: “Empire and Nation in Russian History.”

*Nell Irvin Painter, Princeton University, 1992–1993: “Soul Murder and Slavery.”

*Philip D. Curtin, Johns Hopkins University, 1993-1994: “Why People Move: Migration in African History.”

*Franklin W. Knight, Johns Hopkins Univesity, 1994-95: “Race, Class and Ethnicity in Latin American and the Carribbean.”

*Jonathan D. Spence, Yale University, 1995-1996: “The Taiping Vision of a Christian China, 1836-1864”

*David N. Cannadine, Colmbia University, 1996-1997: “Britain in Decline?”

*Alan Brinkley, Columbia University, 1997-1998: “Culture and Politics in the Great Depression.”

Leon F. Litwack, University of California, Berkeley, 1998-1999: “Wade in the Water: African Americans and Race Relations.”

*Geoffrey Parker, Ohio State University, 1999-2000: “The World is Not Enough: The Imperial Vision of Philip II of Spain.”

Linda Kerber, University of Lowa, 2000-2001: “Gender and Inequality.”

*Yvonne Haddad, Georgetown University, 2001-2002: “Not Quite Americans? The Shaping of Arab and Muslim Identity in the United States.”

Gary B. Nash, University of California, Los Angeles, 2002-2003: “Imagining Life in the Americas.”

*David J. Weber, Southern Methodist University, 2003-2004: “Spanish Bourbons and Wild Indians.”

*Peter N. Stearns, George Mason University, 2004-2005: “Growing up: The History of Childhood in a Global Context.”

**Printed copies are available from Baylor University Press*

***Printed copies are available from Princeton University Press.*